Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–30 | ಜುಲೈ 22–28, 2024 | ಪುಟ 16 | ರೂ.10/–
Volume-18 | Issue-30 | July 22-28, 2024 | Pages:16 | Price: 10/-



ಕರಾವಳಿ ಗುಡ್ಡಗಳ ಕುಸಿತ: ಅವೈಜ್ಞಾನಿಕ ರಸ್ತೆ, ಕಳಪೆ ಇಂಜನೀಯರಿಂಗ್



ಮೋದಿ-ಶಾ, ಯೋಗಿ, ಭಾಗವತ್ ಮತ್ತು ಕಾರ್ಪೊರೇಟ್‌ಗಳು

ಉದ್ಯೋಗ ಮೀಸಲಾತಿ: ರಾಜಕೀಯ ಇಚ್ಛಾಶಕ್ತಿ ಕೊರತೆ

`ವಿಶಾಲ ಚಳುವಳಿಯ ಪುನರುಜ್ಜೀವನಕ್ಕೆ ನಿರ್ಧಾರ' -ವಿಜು ಕೃಷ್ಣನ್ ಸಂದರ್ಶನ

ಸಂವಿಧಾನ ಹತ್ಯಾ ದಿವಸ್: ಹತಾಶೆಯ ಸಂಕೇತ

ಆಂಧ್ರಪ್ರದೇಶದ ರಂಗನಾಯಕಮ್ಮ ನವರು ತೆಲುಗು ಭಾಷೆಯ ಮಾರ್ಕ್ಸ್‌ವಾದಿ ಲೇಖಕಿ ಮತ್ತು ವಿಮರ್ಶಕಿ. ಅವರು ಕಮ್ಯುನಿಸಂ ಮತ್ತು ಸ್ತ್ರೀವಾದದ ಪ್ರಮುಖ ಪ್ರತಿಪಾದಕರಾಗಿದ್ದಾರೆ. ಆಡುಮಾತಿಗೆ ಹತ್ತಿರವಾದ ಭಾಷೆಯನ್ನು ಬಳಸಿ ಮಾರ್ಕ್ಸ್‌ವಾದ ಕುರಿತಂತೆ ಹಲವು ಲೇಖನಗಳನ್ನು ಬರೆದಿದ್ದಾರೆ. ಅವರು 1973 ರಲ್ಲಿ ಮಾರ್ಕ್ಸ್‌ವಾದದ ಸಂಪರ್ಕಕ್ಕೆ ಬಂದ ನಂತರ, ಅಂದಿನಿಂದ ಆ ದೃಷ್ಟಿಕೋನದಿಂದ ಬರೆಯಲು ಪ್ರಾರಂಭಿಸಿದರು. ನವ ತೆಲಂಗಾಣ ಪತ್ರಿಕೆಯಲ್ಲಿ ಇತ್ತೀಚೆಗೆ ಪ್ರಕಟವಾದ ರಂಗನಾಯಕಮ್ಮ ಅವರ ಲೇಖನವನ್ನು, ಕಂತುಗಳಲ್ಲಿ ನಾಲ್ಕು ಸಂಚಿಕೆಗಳಲ್ಲಿ ಪ್ರಕಟವಾಗಲಿದೆ. ಕನ್ನಡಕ್ಕೆ ಸಿ.ಚಿ. ಅನುವಾದಿಸಿದ್ದಾರೆ.

ನಾಳಿನ ಕಾಮ್ರೇಡ್‌ಗಳು

ಭಾಗ 4

ರವಿ: ಅಂದರೆ, ನಮ್ಮಿಂದಲೇ! ನಮ್ಮ ಹಿರಿಯರೂ ಶ್ರಮಿಕರೆ. ನೀನೂ ನಾನೂ ಅಷ್ಟೇ. ಇನ್ನು ಬದಲಾಗಬೇಕಿರುವುದು, ವಿದ್ಯಾರ್ಥಿಗಳಲ್ಲದೆ, ಬೇರೆ ಯಾರು ಹೇಳು. ನಾವು ಏನನ್ನು ಮಾಡ್ಬೇಕು? ಯಾರನ್ನು ಭೇಟಿಯಾಗ್ಬೇಕು? ಎಲ್ಲಿಗೆ ಹೋಗ್ಬೇಕು?

ಗೋಪಾಲ: ಎಲ್ಲಿಗೆ ಹೋಗೋಣ ರವಿ? ನಮಗೆ ತಿಳಿದಿರೋದೆಷ್ಟು? ನಾವು ಪುಸ್ತಕಗಳಲ್ಲಿ ಓದಿದ್ದೇ ಸಾಕಾ? ನಾವೇ ಈ ರೀತಿ ನಾಲ್ಕೈದು ವಿಷಯಗಳನ್ನು ಮಾತ್ರವೇ ಹೇಳಿಕೊಂಡೇ ಅವರ ರೀತಿ ಇದ್ದರೆ, ಬಡ ಶ್ರಮಿಕ ಜನರು ಹೇಗಿರುತ್ತಾರೆ. ನಮಗೆ ನಿಜವಾಗಿಯೂ ಏನು ಗೊತ್ತಿದೆ? ಕೆಟ್ಟ ಕೆಟ್ಟ ಸಿನಿಮಾಗಳನ್ನು ನೋಡುವುದನ್ನು ಬಿಟ್ಟು, ಅವರೇನು ಮಾಡುತ್ತಿದ್ದಾರೆ? ನಾವು ಒಂದು ಕೆಲಸ ಶುರು ಮಾಡ್ಬೇಕು ರವಿ. ನನಗೆ ಆ ರೀತಿ ಅನಿಸುತ್ತೆ. ಹತ್ತು ಜನ ವಿದ್ಯಾರ್ಥಿಗಳನ್ನು ಕೂರಿಸಿಕೊಂಡು, ವಾರಕ್ಕೆ ಒಮ್ಮೆಯೋ, ಹತ್ತು ದಿನಕ್ಕೆ ಒಮ್ಮೆಯೋ ಯಾವುದಾದರೂ ನಾಲ್ಕು ವಿಷಯಗಳ ಕುರಿತು ಮಾತನಾಡುವುದನ್ನು ಇಟ್ಟುಕೊಂಡರೆ, ಸ್ವಲ್ಪ ದಿನಗಳಲ್ಲಿಯೇ ತಿಳಿಯುತ್ತೆ, ಅವರು ಸಿನಿಮಾಕ್ಕೆ ಹೋಗುತ್ತಾರೋ ಅಥವಾ ನಮ್ಮ ಸಭೆಗೆ ಬರುತ್ತಾರೋ ಎಂದು.

ರವಿ: ಅದಕ್ಕೂ ಮುಂಚೆ ಏನಾದರೂ ಖರ್ಚಾಗುತ್ತದೆಯೇ ಗೋಪಾಲ್? ಎಷ್ಟಾದರೂ ನಾನು ತರುತ್ತೇನೆ. ತೊಂದರೆ ಏನಿಲ್ಲ. ನಮ್ಮವರು ವೈದ್ಯರು. ಅವರ ಬಳಿ ಸಾಕಷ್ಟು ಹಣವಿದೆ.

ಗೋಪಾಲ: ಅವರ ಬಳಿ ಇರುವುದೇನೋ ಸರಿ, ಅದು ನಿನಗೂ ಇರುತ್ತಾ?

ರವಿ: ಆ ಹಣ ನನ್ನದೇ ತಾನೆ?

ಗೋಪಾಲ: ಓಹ್, ಲಾಭದ ಕುರಿತು ಅಷ್ಟೊಂದು ಆಸಕ್ತಿ ಹೊಂದಿರೋದು ಅದಕ್ಕಾಗಾ?

ರವಿ: ಅದು ಆಸಕ್ತಿ ಅಲ್ಲ ಗೋಪಿ. ಸರಿ, ಈಗ ನಮ್ಮ ವಿಷಯಕ್ಕೆ ಬರೋಣ. ಆ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಊಟ ನೀಡಿದರೆ, ಅವರು ಹೊಟ್ಟೆ ತುಂಬಾ ತಿಂದು, ಉತ್ಸಾಹದಿಂದ ರಾತ್ರಿಯವರೆಗೂ ಹರಟೆ ಹೊಡೆಯುತ್ತಾ ಕೂರುತ್ತಾರೆ.

ಗೋಪಾಲ: ಹರಟೆಗಳು ಕೂಡಾ ಇರುತ್ತವೆಯಾದರೂ, ನಿಜ ಸಂಗತಿ ಎಂದರೆ 'ಕ್ಯಾಪಿಟಲ್' ಪುಸ್ತಕವನ್ನು ಓದಿ, ಕೇಳಿಸಿಕೊಂಡರೆ, ವಿವರವಾಗಿ ಹೇಳೋದು. ಆಂ, ಅದೇ ಆರಂಭ.

ರವಿ: ಚೆನ್ನಾಗಿ ಹೇಳಿದೆ ಗೋಪಾಲ್. ಆದರೆ, ಇನ್ನೂ ನಾಲ್ಕು 'ಬಂಡವಾಳ' ಪುಸ್ತಕಗಳಿದ್ದರೆ, ತಿಳಿಯುವ ಆಸಕ್ತಿ ಇರುವವರಿಗೆ ಓದಿ ಎಂದು ಕೊಡಬಹುದು. ಕೆಲಸ ಎಷ್ಟೋ ಸುಲಭವಾಗಿ ನಡೆಯುತ್ತೆ. ಅವುಗಳನ್ನು ಸಾಯಂಕಾಲ ನಾನೇ ಕೊಂಡು ತರಲೇ?

ಗೋಪಾಲ: ರವಿ, ಮಧ್ಯಾಹ್ನ ನಿನಗೆ ಕ್ಲಾಸ್ ಇದೆಯಾ?

ರವಿ: ಇದೆ, ಆದರೆ ಹೋಗಬಾರದು ಅಂತ ಇಲ್ಲಿಯವರೆಗೂ ಅಂದುಕೊಂಡಿದ್ದೆ. ಹೋಗದೇ ಇದ್ದರೆ ಹೇಗೆ ಅನ್ನುತ್ತೆ ಈಗ. ಕ್ಲಾಸಿನಲ್ಲಿ ಅವರ ಜೊತೆ ಸ್ವಲ್ಪ ಮಾತನಾಡಿ, 'ಒಂದ್ಸಾರಿ ನಮ್ಮ ಮನೆಗೆ ಬನ್ನಿ, ಅಲ್ಲೇ ಊಟ ಮಾಡಿ ಸ್ವಲ್ಪಹೊತ್ತು ಮಾತಾಡೋಣ' ಅಂತ ಹೇಳ್ಬೇಕು. ನನ್ನನ್ನು ಅಂದು 'ಕ್ಯಾಪಿಟಲ್' ಅನ್ನು ಕೇಳಿದನಲ್ಲಾ, ಅವನು ಮತ್ತೆ ಕೇಳುತ್ತಾನೋ ಇಲ್ಲವೋ ನೋಡೋಣ. ಆತ ಅಂಕಗಳನ್ನು ಗಳಿಸುವುದರಲ್ಲಿ ಬುದ್ದಿವಂತನೇ. ನೋಡೋಣ, ಹೊರಡೋಣವೇ? ಅಯ್ಯಾ, ಒಂದೂವರೆ ಗಂಟೆ ಆಯ್ತು. ನಾವು ಇನ್ನೂ ಇಲ್ಲೇ, ನೀನು ಬೂರ್ಜ್ವಾ ಪಿಎಚ್‌ಡಿ ಕೆಲಸದಲ್ಲಿ, ನಾನು ಇನ್ನೊಂದು ಬೂರ್ಜ್ವಾ ಪದವಿಗಾಗಿ ಎದುರು ನೋಡುತ್ತಿದ್ದೇನೆ. ದಿನವೆಲ್ಲಾ ಈ ರೀತಿ ಜೀವನ ನಡೆಯುತ್ತಾ ಹೋದರೆ?

ಗೋಪಾಲ: ಇನ್ನೂ ಈ ರೀತಿ ಯಾಕೆ ನಡೆಯುತ್ತವೆ? ನಿಮ್ಮವರನ್ನು ಕರೆಯುತ್ತೀಯಾ? ನಾನೂ ಬರ್ತೇನೆ. ಆದರೆ, ಮೊದಲ ದಿನವೇ ಅಲ್ಲ, ಅವರು ಪುರುಸೊತ್ತಾಗಿದ್ದಾರೋ ಏನೊ. ಅವರು ಬಂದ ದಿನವೇ ಚರ್ಚೆ ಶುರು ಮಾಡಬಹುದು. ಹಣವನ್ನು ಮಾರ್ಕ್ಸ್ 'ಜನರಲ್ ಈಕ್ವಿವಲೆಂಟ್' (General Equivalent) ಎಂದರಲ್ಲವೇ? ಆ ವಿಷಯ ಹೇಳು. 'ಹಣ' ಎಂದರೆ, ಜಗತ್ತಿನ ಎಲ್ಲ ವಸ್ತುಗಳೊಂದಿಗೆ ಪರಸ್ಪರ ವಿನಿಮಯ ಮಾಡಿಕೊಳ್ಳುವುದು ಅಲ್ಲವೇ? ಆದ್ದರಿಂದ ಹಣ ಎಂಬುದು ಸಾಮಾನ್ಯವಾಗಿ ವಿನಿಮಯದ ಸಾಧನವಾಗಿದೆ. ಅದನ್ನು ಅವರಿಗೆ ಹೇಳು. ಆಸಕ್ತಿಯಿಂದ ಕೇಳುತ್ತಾರಲ್ಲವೇ? ಹಣಕ್ಕೂ ಮತ್ತು ವಸ್ತುಗಳಿಗೂ ಇರುವ ಮೌಲ್ಯದ ಬಗ್ಗೆ ಕೆಲವು ಪ್ರಶ್ನೆಗಳನ್ನು ಅವರು ಕೇಳಬಹುದು.

ರವಿ: ನಿಜ. ಅದರೊಂದಿಗೆ ನಾನು ಮಾತು ಆರಂಭಿಸುತ್ತೇನೆ. ಆದರೆ, ನಿನ್ನ ಹಾಗೆ ನಾನು ಹೇಳಲಾಗುತ್ತೆಯೇ ಹೇಳು? ನೀನೇ ಆದರೆ, ಎಷ್ಟು ಚೆನ್ನಾಗಿರುತ್ತೆ ಅಲ್ವಾ. ನೀನು ಕೂಡ ಬರ್ತೀಯಾ ತಾನೆ? ಪ್ರಮುಖವಾಗಿ ನೀನೇ ಹೇಳು.



ಗೋಪಾಲ: ನಾನು ಮೊದಲ ದಿನದ ಸಭೆಗೆ ಬರೋದಿಲ್ಲ, ನಂತರದ ಸಭೆಯಿಂದ ಬರ್ತೇನೆ. ನೀನು 'ವಿನಿಮಯ' ವಿಷಯದಿಂದ ಪ್ರಾರಂಭಿಸು. ಯಾವುದೇ ಸರಕನ್ನಾದರೂ, ಉದಾಹರಣೆಗೆ ಬದನೆಕಾಯಿ ಅಂದುಕೊ. ಒಬ್ಬ ರೈತ ಅಂಗಡಿಗೆ ಹೋಗಿ, ತಾನು ತಂದಿರುವ ಬದನೆಕಾಯಿಯನ್ನು ಕೊಟ್ಟರೆ, ಬದಲಾಗಿ ಸೌತೆಕಾಯಿಯನ್ನು ತೆಗೆದುಕೊಳ್ಳಬಹುದೇ? ಹೋಗಲಿ, ಅಕ್ಕಿ, ಬೇಳೆಕಾಳು ತೆಗೆದುಕೊಳ್ಳಬಹುದೆ? ಹಣವಿಲ್ಲದೆ ಯಾವುದೇ ಸರಕಿನ ವಿನಿಮಯ ನಡೆಯುವುದಿಲ್ಲ. ಹಣವೂ ಕೂಡ ಒಂದು ಸರಕು ಅಲ್ಲವೇ? ಬಂಗಾರವೂ ಒಂದು ಸರಕು. ಚಿನ್ನದ ಸಣ್ಣ ಸಣ್ಣ ತುಂಡುಗಳು ಕೂಡ, ಚಿನ್ನ, ನೋಟುಗಳಂತಹ ನಾಣ್ಯಗಳು, ಅದು ಒಂದು ಸರಕೇ! ಜಗತ್ತಿನಲ್ಲಿ ಎಲ್ಲಿಯಾದರೂ, ಹಣ ಕೊಟ್ಟು ಯಾವುದನ್ನಾದರೂ ಕೊಂಡುಕೊಳ್ಳಬಹುದು. ಒಂದು ಅಂಗಡಿಯಲ್ಲಿ ತರಕಾರಿಗಳು ತುಂಬಾ ಇವೆ, ಸೌತೆಕಾಯಿಗಳೂ ಇವೆ. ಆ ಅಂಗಡಿಗೆ ಹೋದ ಒಬ್ಬ ರೈತನ ಕೈಯಲ್ಲಿ ಬದನೆಕಾಯಿ ಇವೆ. ಅಲ್ಲಿ ಸೌತೆಕಾಯಿಗಳನ್ನು ನೋಡಿದಾಗ, ಅವು ಆತನಿಗೆ ಬೇಕೆನಿಸುತ್ತದೆ. ಕೈಯಲ್ಲಿ 'ಹಣ'ವಿಲ್ಲ. ಆದರೆ, ಬದನೆಕಾಯಿ ಕೊಡ್ತೇನೆ, ಸೌತೆಕಾಯಿ ಕೊಡಿ' ಅಂದ್ರೆ ಅಂಗಡಿಯವರು ಕೊಡೋದಿಲ್ಲ. ಆದರೆ, ಬದನೆಕಾಯಿ ಕೊಟ್ಟು, ಹಣ ಪಡೆದುಕೊಂಡು, ಅಂದರೆ, ಬದನೆಕಾಯಿ ಮಾರಿ ಹಣ ಪಡೆದುಕೊಂಡರೆ, ಅಂದರೆ ಬದನೆಕಾಯಿಗಳಿಗೂ ಹಣಕ್ಕೂ ವಿನಿಮಯ ನಡೆದರೆ, ಹಣ ಬರುತ್ತೆ ಅಲ್ವಾ? ಆ ಹಣವನ್ನು ಕೊಟ್ಟು, ಸೌತೆಕಾಯಿಗಳನ್ನು ಕೊಂಡರೆ, ಅಂದರೆ, ಸೌತೆಕಾಯಿಗಳಿಗೂ ಹಣಕ್ಕೂ ವಿನಿಮಯ ನಡೆದರೆ ಸೌತೆಕಾಯಿಗಳು ಬರುತ್ತವೆ. ಈ ಮನುಷ್ಯನಿಗೆ ಏನಾಗಿದೆ? ಕೈಯಲ್ಲಿ ಸರಕು ಇದ್ದರೆ, ಆ ಸರಕನ್ನು ಬಳಸಬಹುದು ಸರಿ. ಯಾವುದೋ ಮತ್ತೊಂದು ವಸ್ತು ಬೇಕೆಂದರೆ, ಈ ಸರಕನ್ನು ಮಾರಿ ಹಣ ಪಡೆಯಬೇಕು. ಆ ಹಣದಿಂದ ಯಾವ ಸರಕು ಬೇಕಿದೆಯೋ ಆ ಸರಕುಗಳನ್ನು ಕೊಳ್ಳಬೇಕು! ಆ ಹಣದಿಂದ ಸೌತೆಕಾಯಿಗಳಿಗೆ ವಿನಿಮಯ ನಡೆಯಬೇಕು! ಈ ವಿನಿಮಯಕ್ಕಾಗಿ ಹಣದ ಜೊತೆಗೆ ಎಂತಹ ಪರಿಪೂರ್ಣ ವ್ಯವಸ್ಥೆ ಅಂದರೆ... ರವಿ, ಆ ರೀತಿ ಪ್ರಾರಂಭಿಸಿ, ಅವರಿಗೆ ಬಹಳಷ್ಟು ಪ್ರಶ್ನೆಗಳನ್ನು ಕೇಳಬಹುದು. ಅವರೂ ಸಾಕಷ್ಟು ಪ್ರಶ್ನೆಗಳನ್ನು ಕೇಳುತ್ತಾರೆ. ಕ್ರಮೇಣ ಅದು, ಸರಕುಗಳ ಮಾರಾಟ, ಖರೀದಿ ಮತ್ತು ವಿನಿಮಯ ಎಲ್ಲವನ್ನೂ ದಾಟಿ ಶೋಷಣೆಯ ಹತ್ತಿರ ಬರಬೇಕು. ಅದೆಲ್ಲವೂ ಒಂದು ವಾರದಲ್ಲಿಯೇ ಆಗೋದಿಲ್ಲ.

ರವಿ: ತುಂಬಾ ಸಂತೋಷ ಆಯ್ತು ನನಗೆ. ಬಾಲ್ಯದಿಂದಲೂ, ಬಡ್ಡಿಗಳು, ಲಾಭಗಳು ಎಂದು ಓದುತ್ತಲೇ ಇದ್ದೇವೆ. 100 ರೂಪಾಯಿಗೆ ಇಷ್ಟು ಬಡ್ಡಿ ಬರುವುದಾದರೆ, ಸಾವಿರಕ್ಕೆ ಎಷ್ಟು?–ಎನ್ನುವ ಲೆಕ್ಕಗಳು! ಅದನ್ನೇ ಕಲಿಸುತ್ತಿದ್ದಾರೆ!

ಗೋಪಾಲ: ಅದೇ ಮತ್ತೆ, ಶೋಷಣೆಯನ್ನು ಕಲಿಸುವ ಶಿಕ್ಷಣ ಇದು. ಅದರ ಮೇಲೆ ಪರೀಕ್ಷೆಗಳು! ಹಾಗೆ ಬರೆದರೇನೆ ಉತ್ತೀರ್ಣ! ಆ ಲೆಕ್ಕಗಳನ್ನು ಕಲಿತರೇನೆ ಉದ್ಯೋಗಗಳು!

ರವಿ: ಎಷ್ಟು ಘೋರ! ನಿಜವಾಗಿಯೂ ಶಿಕ್ಷಕರಿಗೆ ಅದೆಲ್ಲವೂ ಗೊತ್ತಿಲ್ಲ ಅಲ್ಲವೇ?

ಗೋಪಾಲ: ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಹೇಳಿಕೊಡುವ ಪಾಠದಲ್ಲಿ ಬಹಳಷ್ಟು ತಪ್ಪುಗಳಿವೆ. ಆ ರೀತಿ ಬರೆಯದಿದ್ದರೆ, ಫೇಲಾಗುತ್ತಾರೆ, ನಂತರ ಉದ್ಯೋಗಗಳು ಸಿಗದೆ ಕಷ್ಟಪಡುತ್ತಾರೆ.

ರವಿ: ಅಯ್ಯಯ್ಯೋ! ಇದೇನು ಶಿಕ್ಷಣ! ಈ ಉದ್ಯೋಗಗಳೇಕೆ? ಯಾರನ್ನಾದರೂ ಬೇಡಿಕೊಂಡು ತಿನ್ನೋದೇ ಉತ್ತಮ.

ಗೋಪಾಲ: ಬೇಡಿಕೊಳ್ಳೋಣ ಅಂದ್ರೆ ಹಾಕುವವರು ಯಾರು ರವಿ? ಅವರು ಎಷ್ಟು ಹಾಕ್ತಾರೆ? ಹಾಕುವವರೂ ಕೂಡ ನಾವು ತಿರಸ್ಕಿರುವ ಉದ್ಯೋಗಳನ್ನು ಮಾಡುವವರೇ ತಾನೇ? ಇಲ್ಲದಿದ್ದರೆ, ಶೋಷಕರನ್ನೇ ಬೇಡಿಕೊಳ್ಳಬೇಕು.

ರವಿ: ಬೇಡ. ಮತ್ತಷ್ಟು ಮಾತುಬೇಡ ಬಿಡು. ನನ್ನ ಸಹ ವಿದ್ಯಾರ್ಥಿಗಳನ್ನು ಕರೆಯುತ್ತೇನೆ, ಸಂಜೆ ಅಲ್ಲಿ ಅವರಿಗೆ ಹೇಳೋಣ. ನಿನ್ನ ಕ್ಲಾಸಿನ ವಿದ್ಯಾರ್ಥಿಗಳಿಗೂ ಬರಲು ಹೇಳು ಗೋಪಾಲ್. ಈ ಶನಿವಾರ ಮತ್ತು ಭಾನುವಾರದಿಂದಲೇ ಶುರು ಮಾಡೋಣ. ತುಂಬಾ ಸಂತೋಷವಾಗಿದೆ ನನಗೆ. ನಮ್ಮ ತರಗತಿಯವರೊಂದಿಗೆ ಮಾತನಾಡಿದ ನಂತರ ನಿನಗೆ ಹೇಳುತ್ತೇನೆ!

ಗೋಪಾಲ: ನೀನೇನೂ ದಾನಸೂರಕರ್ಣನಂತೆ ಮಾಡುತ್ತೇನೆ ಅಂದುಕೊಬೇಡ ರವಿ. ನನಗೂ ಸ್ಕಾಲರ್ಷಿಪ್ ಇದೆ. ಖರ್ಚಿನ ವಿಷಯವನ್ನೆಲ್ಲಾ ನನಗೂ ಹೇಳು... ಇನ್ನು ಎದ್ದೇಳೋಣ ನಾವು ಚರ್ಚೆ ಆರಂಭಿಸಿ ಒಂದು ಗಂಟೆಯಾಗಿದೆ. ಇನ್ನು ನಾವು ರೆಗ್ಯೂಲರಾಗಿ ಮಾತನಾಡಿಕೊಳ್ಳಬೇಕು. ನಿಮ್ಮ ಕ್ಲಾಸ್ ನವರು ಏನೆನ್ನುತ್ತಾರೋ ಅದನ್ನು ಮರೆಯದೇ ಬರೆದಿಟ್ಟುಕೊ. ಹೊರಡೋಣವೆ? ಹೊರಡೋಣ ಕಾಮ್ರೆಡ್.

ರವಿ: ಕಾಮ್ರೆಡ್, ಬೂರ್ಜ್ವಾ, ಈ ಪದಗಳು ನನಗೆ ಹೊಸದು! ಅರ್ಥವಾಗಲಿಲ್ಲ!

ಗೋಪಾಲ: ಸ್ವಲ್ಪ ದಿನಗಳಲ್ಲಿ ಅರ್ಥ ಆಗುತ್ತೆ, ನಮ್ಮ ಸಭೆಗಳಲ್ಲಿಯೂ ಅವರೆಲ್ಲರಿಗೂ ಅರ್ಥ ಆಗುತ್ತೆ. ರವಿ, ನಾವು ಇದಕ್ಕೂ ಮೊದಲು ಈ ರೀತಿ ಯೋಚಿಸಿದ್ದೇವೆಯೇ? ಯಾವುದೋ ಚಿಕ್ಕ ಕೆಲಸವಾದರೆ ಮಾಡಬಹುದೆಂದು ಆಲೋಚನೆ ಬಂದಿತ್ತೇ ವಿನಃ, ಅದೇಕೋ ಇಂತಹ ಆಲೋಚನೆ ಬರಲಿಲ್ಲ. 'ಕ್ಯಾಪಿಟಲ್' ಎಂದರೆ 'ಬಂಡವಾಳ' ತಾನೆ? ಬಂಡವಾಳಶಾಹಿ ವಿಧಾನದಲ್ಲಿ ಶೋಷಣೆಯೊಂದಿಗೆ ಈ ಸಮಾಜ ನಡೆಯುತ್ತಿದೆ ಎಂದು ಹೇಳಲು ಮಾರ್ಕ್ಸ್ ಇಷ್ಟೆಲ್ಲ ಬರೆದಿದ್ದರೆ ನಾವೇಕೆ ಸಣ್ಣದನ್ನು ಮಾಡಬಾರದು? ವಿದ್ಯಾರ್ಥಿಗಳಲ್ಲಿ ಕೆಲವರಾದರೂ ಆ ಪುಸ್ತಕವನ್ನು ನೋಡಿದರೆ ಸಾಕು. ಕೆಲವರಾದರೂ ಆ ಪುಸ್ತಕ ಓದಿ, ಅದರಲ್ಲಿ ಇರುವುದನ್ನು ಒಂದಷ್ಟು ತಿಳಿದುಕೊಂಡರೆ, ಆ ಬದಲಾವಣೆ ನಡೆದರೆ, ಅದು ಹಾಗೆಯೇ ಇರುತ್ತದಾ ಹೇಳು? ನಾವು ತಪ್ಪದೇ ಹೇಗಾದರೂ ಇದನ್ನು ಮಾಡಬೇಕು ರವಿ.

ರವಿ: ಹೇಗಾದರೂ ಅಲ್ಲ. ಎಂಗೆಲ್ಸ್ ಮಾಡಿದಂತೆ ನಾವೂ ಮಾಡೋಣ. ಮಾರ್ಕ್ಸ್ ಜೊತೆಗೆ ಎಂಗೆಲ್ಸ್ ಕೈಜೋಡಿಸಿದಂತೆ ಇರಬೇಕು ಎಂದು ನಿಜವಾಗಿಯೂ ನನಗನಿಸುತ್ತಿದೆ.. ಮಾಡ್ಬೇಕು ಗೋಪಾಲ್. ನೀನು ಆ ಪುಸ್ತಕವನ್ನು ಚೆನ್ನಾಗಿ ಓದಿದ್ದೀಯ. ನಾವು ಹೇಗೋ ಮಾಡೋಣ ಎನ್ನುವುದಲ್ಲ. ಅದೇ ಈಗ ನಮ್ಮ ಕೆಲಸ. ನಾನು ಹೋಗ್ತೇನೆ. ನಮ್ಮ ಕಾಲೇಜು ಸಹಪಾಠಿಗಳೊಂದಿಗೆ ಮಾತನಾಡಬೇಕು. ಎಷ್ಟು ಜನರಿದ್ದಾರೊ ಏನೋ!

(ಮುಗಿಯಿತು)

ಸ್ಥಳೀಯರಿಗೆ ಉದ್ಯೋಗ ಮೀಸಲು ಮಸೂದೆ ರಾಜಕೀಯ ಇಚ್ಛಾಶಕ್ತಿ ಅಗತ್ಯ

ಸಂಪಾದಕೀಯ

ಖಾಸಗಿ ಉದ್ಯಮ ರಂಗದಲ್ಲಿ ಸ್ಥಳೀಯರಿಗೆ ಉದ್ಯೋಗ ಮೀಸಲಾತಿ ಕಲ್ಪಿಸುವ ಮಸೂದೆಯೊಂದನ್ನು ತರಲು ಕರ್ನಾಟಕದ ಸರ್ಕಾರ ಮುಂದಾಗಿದ್ದುದು ಸ್ವಾಗತಾರ್ಹ. ಇದು ಬಹುದಿನದ ಬೇಡಿಕೆಯಾಗಿತ್ತು. ಆದರೆ ಸಚಿವ ಸಂಪುಟದಲ್ಲಿ ಮಸೂದೆ ಮಂಡಿಸಲು ನಿರ್ಧರಿಸಿ, ಪ್ರಕಟಿಸಿದ ಕೆಲವೇ ಗಂಟೆಗಳಲ್ಲಿ ಅದನ್ನು ಹಿಂಪಡೆದದ್ದು ತೀರಾ ವಿಪರ್ಯಾಸ. ಕೆಲವು ಉದ್ಯಮಿಗಳ ಟೀಕೆಗಳಿಗೆ ಉತ್ತರವನ್ನು ಕಾರ್ಮಿಕ ಸಚಿವ ಸಂತೋಷ್ ಲಾಡ್ ನೀಡುತ್ತಿರುವಾಗಲೇ ಮುಖ್ಯಮಂತ್ರಿಗಳು ತಮ್ಮ ಟ್ವೀಟ್ ಅನ್ನು ಡಿಲೀಟ್ ಮಾಡಿದ್ದು ಸರ್ಕಾರಕ್ಕೆ ರಾಜಕೀಯ ಇಚ್ಛಾಶಕ್ತಿ ಇರಲಿಲ್ಲ ಎನ್ನುವುದನ್ನು ಎತ್ತಿ ತೋರಿಸುತ್ತದೆ. ನಾಡಿನ ಜನರ ಭವಿಷ್ಯದ ಮೇಲೆ ಮತ್ತು ಗಾಢ ಆರ್ಥಿಕ ಪರಿಣಾಮಗಳನ್ನು ಬೀರುವ ಇಂತಹ ವಿಷಯಗಳ ಬಗ್ಗೆ ಅಗತ್ಯ ಪೂರ್ವ ಸಮಾಲೋಚನೆ, ಪ್ರತಿಪಾದನೆಯ ಸಿದ್ಧತೆ, ಬದ್ಧತೆಯನ್ನು ಜವಾಬ್ದಾರಿಯುತ ಸರ್ಕಾರ ಹೊಂದಿರಬೇಕಾಗುತ್ತದೆ. ಅಂತಹುದಕ್ಕೆ ಸೂಕ್ತ ಸಂದರ್ಭವೂ ಬೇಕಾಗುತ್ತದೆ. ಈಗ ಎಲ್ಲರೊಂದಿಗೆ ಸಮಾಲೋಚಿಸಿ ಮಸೂದೆ ಮಂಡಿಸುವುದಾಗಿ ಹೇಳಿರುವುದು ಸಮಾಧಾನಕರ ನಿರೀಕ್ಷೆಯ ಅಂಶವಾದರೂ ಈ ನಿರ್ಧಾರವನ್ನು ಸದನದಲ್ಲಿ ಮಸೂದೆ ಮಂಡಿಸಿದ ಮೇಲೆ ತಳೆಯಬಹುದಿತ್ತು. ಸದನದ ಕಲಾಪಗಳು ನಡೆಯುತ್ತಿರುವಾಗ ಅಲ್ಲಿ ಮಂಡಿಸಿ ನಿಲುವನ್ನು ಸಮರ್ಥಿಸಿಕೊಳ್ಳುವ, ಬಂದ ಸಲಹೆಗಳನ್ನು ಒಳಗೊಳ್ಳಲು ಈ ಅವಕಾಶವನ್ನು ಬಳಸಬಹುದಿತ್ತು. ಸಂವಿಧಾನಾತ್ಮಕ ಸಾಮಾಜಿಕ ನ್ಯಾಯ ಸಾಧನೆಯಲ್ಲಿ ಶಿಕ್ಷಣ ಮತ್ತು ಉದ್ಯೋಗ ಮೀಸಲಾತಿಯ ಬಗ್ಗೆ ಸದಾ ವಿರೋಧದ ಬೊಬ್ಬೆ ಹೊಡೆಯುವ ಬಹುತೇಕ ಖಾಸಗಿ ಉದ್ಯಮಿಗಳ ನಿಲುವು, ನಡೆಯನ್ನು ಮುಖ್ಯಮಂತ್ರಿಗಳು ಅರಿಯದಂತಹ ಮುಗ್ಧರೇನಲ್ಲ.

ಉದ್ಯೋಗ ನೀಡಿಕೆಯಲ್ಲಿ 90ರ ದಶಕದ ಅಂದರೆ ಉದಾರೀಕರಣ ನೀತಿಗಳ ಜಾರಿಯ ಹಿಂದೆ ಸಾರ್ವಜನಿಕ ಉದ್ಯಮಗಳು ಗಣನೀಯ ಪ್ರಮಾಣದ ಉದ್ಯೋಗ ಒದಗಿಸುವ ಬಹು ದೊಡ್ಡ ಕ್ಷೇತ್ರವಾಗಿದ್ದವು. ಹಂತ ಹಂತವಾಗಿ ಮತ್ತು ಅತ್ಯಂತ ಯೋಜನಾಬದ್ಧವಾಗಿ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ನಾಶ ಪಡಿಸುತ್ತಾ ಖಾಸಗಿರಂಗಕ್ಕೆ ಪೂರ್ಣ ಒತ್ತು ನೀಡಿದ್ದರಿಂದ ಇರುವ ಅವಕಾಶಗಳು ಕುಗ್ಗಿ ಹೋದವು. ಸಾಮಾಜಿಕ ನ್ಯಾಯ ಸಾಧನೆಯ ಸಂವಿಧಾನಬದ್ಧ ಹಕ್ಕನ್ನು ಖಾಸಗಿರಂಗಕ್ಕೆ ವಿಸ್ತರಿಸದೇ ಹೋದುದರಿಂದ ಸಂವಿಧಾನದತ್ತ ಮೀಸಲಾತಿ ಅವಕಾಶಗಳಿಂದ ಜನ ಸಮುದಾಯಗಳು ವಂಚಿತವಾದವು. ಪ್ರಾಯೋಗಿಕವಾಗಿ, ಎಸ್.ಸಿ, ಎಸ್.ಟಿ. ಮತ್ತು ಹಿಂದುಳಿದ ಸಮುದಾಯಗಳು ಹೊಸ ಉದ್ಯೋಗಗಳನ್ನು ಪಡೆಯಲಾರದಂತೆ ನಿರ್ಬಂಧಿಸಲ್ಪಟ್ಟವು. ಐ.ಟಿ, ಬಿ.ಟಿ.ಯಂತಹ ಆಧುನಿಕ ತಂತ್ರಜ್ಞಾನ, ವಿದೇಶಿ-ಸ್ವದೇಶಿ ಬಂಡವಾಳ ಹೂಡಿಕೆಯ ಕ್ಷೇತ್ರಗಳು ಮೀಸಲಾತಿಯ ನೀತಿ ಪಾಲನೆಯ ಹೊಣೆಗಾರಿಕೆಯಿಂದ ಹೊರಗಿಡಲ್ಪಟ್ಟವಲ್ಲದೇ ಸಾಮಾಜಿಕವಾಗಿ, ಆರ್ಥಿಕವಾಗಿ ಮುಂದುವರಿದ ವಿಭಾಗಗಳೇ ಹೊಸ ಅವಕಾಶಗಳನ್ನು ವ್ಯಾಪಕವಾಗಿ ಅತಿಕ್ರಮಿಸಿದವು. ಖಾಸಗೀಕರಣ, ಉದಾರೀಕರಣ, ಜಾಗತೀಕರಣದ ನೀತಿಗಳ ಜಾರಿಯಲ್ಲಿ ಖಾಸಗಿ ರಂಗಗಳು ಪ್ರಶ್ನಾತೀತವೆಂಬ ಅಘೋಷಿತ ನೀತಿ, ಓಲೈಕೆಗಳು, ಪ್ರತಿಭೆಯೇ ಆಧಾರವೆಂಬ ಹುಸಿ ವಾದಗಳು ಕೇಂದ್ರ ಸ್ಥಾನ ಪಡೆದವು. ಪರಿಣಾಮವಾಗಿ ಸ್ಥಳೀಯರು ಉದ್ಯೋಗ ವಂಚನೆಗೊಳಗಾದರು. ಮತ್ತು ಖಾಸಗಿರಂಗದ ಆಡಳಿತ ಪ್ರಜ್ಞಾಪೂರ್ವಕವಾಗಿ ಖಾಯಂ ಹುದ್ದೆಗಳಿಗೆ ಸ್ಥಳೀಯರನ್ನು ನೇಮಕ ಮಾಡದೇ ವಂಚಿಸಿದರು. ಸ್ಥಳೀಯರನ್ನು ತೆಗೆದುಕೊಳ್ಳುವ ಬದಲಿಗೆ ಪರ ರಾಜ್ಯಗಳ, ಪರ ಭಾಷಿಕರನ್ನು ನೇಮಿಸಿಕೊಂಡರೆ ಸುಲಿಗೆ, ಶೋಷಣೆ ನಿರಾಯಾಸದಾಯಕ ಎಂಬ ದುರುದ್ದೇಶವು ಈ ಧೋರಣೆಗೆ ಒಂದು ಮುಖ್ಯ ಕಾರಣ. ಸುಲಭವಾಗಿ ಕಾರ್ಮಿಕ ಶಕ್ತಿಯ ದಮನವೂ ಸಾಧ್ಯ ಎಂಬ ಕುತಂತ್ರ. ಈಗಲೂ ಅದೇ ನೀತಿಯನ್ನೇ ಅವರು ಅನುಸರಿಸ ಬಯಸುತ್ತಾರೆ.

ಕರ್ನಾಟಕದಲ್ಲಿ ಉದ್ಯಮ ಆರಂಭಕ್ಕೆ ಅಗತ್ಯವಾಗಿ ತಮ್ಮ ಪಾಲಿನ ಭೂಮಿ, ನೀರು ಇತ್ಯಾದಿಗಳನ್ನು ಬಿಟ್ಟುಕೊಟ್ಟು ಬಹಳಷ್ಟನ್ನು ಕಳೆದುಕೊಂಡವರು ಸ್ಥಳೀಯರು. ಜನರ ತೆರಿಗೆಯ ಹಣ ಉದ್ಯಮಿಗಳಿಗೆ ವ್ಯಯಿಸುವ ಸರ್ಕಾರ. ಹೊಸ ಉದ್ಯಮ ಬೆಳವಣಿಗೆಯಾದಲ್ಲಿ ಅನ್ನ ಗಳಿಕೆಗೆ ಅವಕಾಶಗಳು ತೆರೆದುಕೊಳ್ಳುವ ನಿರೀಕ್ಷೆ, ಮತ್ತು ಹಕ್ಕು ಸಹಜವಾಗಿಯೇ ಜನರಲ್ಲಿ ಇರುತ್ತದೆ. ಹೀಗಾಗಿ ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ಸಿಗಬೇಕು ಎಂಬ ಕೂಗು ಹಿಂದಿನಿಂದಲೂ ಇದೆ. ಈ ಹಿನ್ನೆಲೆಯಲ್ಲಿ ಡಾ.ಸರೋಜಿನಿ ಮಹಿಷಿಯ ವರದಿ ಜಾರಿಯಾಗಬೇಕೆಂಬ ಆಗ್ರಹ ಹಲವು ದಶಕಗಳಿಂದಲೂ ಇದೆ. ಸರಕಾರ ಈ ವರದಿಯ ಶಿಫಾರಸುಗಳನ್ನು ಒಪ್ಪಿದೆಯಾದರೂ ನಂತರ ಬಂದ ಯಾವ ಸರ್ಕಾರಗಳೂ ಅದರ ಜಾರಿಗೆ ಕಾನೂನಾತ್ಮಕವಾಗಿ ಮುಂದಾಗಿಲ್ಲ. ಈ ವರದಿಯನ್ನೂ ಇಡಿಯಾಗಿ ಜಾರಿಗೊಳಿಸಬೇಕೆಂಬ ಬಗ್ಗೆ, ಅದರ ವಾದ ವೈಖರಿಯ ಬಗ್ಗೆ ಹಲವಾರು ತೀವ್ರ ಭಿನ್ನಾಭಿಪ್ರಾಯಗಳಿವೆ ನಿಜ. ಭಾರತದಂತಹ ಒಕ್ಕೂಟದ ವ್ಯವಸ್ಥೆಯಲ್ಲಿ ಸ್ಥಳೀಯರಿಗೆ ಮಾತ್ರವೇ ಪೂರ್ಣ ಉದ್ಯೋಗಗಳನ್ನು ಮೀಸಲಿಡುವುದು ಸಾಧುವೇ, ಸಾಧ್ಯವೇ, ಹಾಗಾದಲ್ಲಿ ಕರ್ನಾಟಕದವರಿಗೆ ಬೇರೆ ರಾಜ್ಯಗಳಲ್ಲಿ ಉದ್ಯೋಗ ಅವಕಾಶಗಳು ನಿರ್ಬಂಧಕ್ಕೆ ಒಳಗಾಗಬಹುದೇ? ಮಣ್ಣಿನ ಮಕ್ಕಳ ವಾದ ಎಷ್ಟು ಸಮಂಜಸ ಎನ್ನುವಂತಹ ಪ್ರಶ್ನೆಗಳು ಕೇಳುತ್ತಲೇ ಬಂದಿವೆ. ಈ ದಿನಮಾನಗಳಲ್ಲಿ ಕೇಂದ್ರ ಸರ್ಕಾರದ ರೈಲ್ವೆ, ಬ್ಯಾಂಕ್, ವಿಮೆ, ಮುಂತಾದ ಬಹುತೇಕ ಕ್ಷೇತ್ರಗಳಲ್ಲಿ ಹೊರ ರಾಜ್ಯಗಳ ಜನರನ್ನೇ ಅಧಿಕ ನೇಮಕ ಮಾಡಿಕೊಳ್ಳುತ್ತಿರುವ ಸ್ಥಿತಿಯನ್ನು ನೋಡಿದಾಗ ಕರ್ನಾಟಕದ ಯುವಜನತೆ ತಾವು ವಂಚಿತರಾಗುತ್ತಿರುವ, ದಾರಿ ಕಾಣದ ಹತಾಶೆಯ ಸ್ಥಿತಿಯಲ್ಲಿ ಇರುವುದು ನಿಜ. ಹೊಸ ಉದ್ಯೋಗದ ಅವಕಾಶಗಳು ಬೆಳೆಯದೇ ನಿರುದ್ಯೋಗ ಸ್ಫೋಟಕ ಸ್ಥಿತಿ ತಲುಪಿದೆ. ಈ ಸ್ಥಿತಿಯಲ್ಲಿ ಕರ್ನಾಟಕ ರಾಜ್ಯ ಸರಕಾರ ಖಾಸಗಿ ರಂಗದಲ್ಲಿ ಸ್ಥಳೀಯರಿಗೆ ಉದ್ಯೋಗ ಮೀಸಲು ನೀಡಬೇಕೆಂಬ ನೀತಿಯ ಜಾರಿಗೆ ಮುಂದಾಗುವುದು ಸಕಾಲಿಕ, ಸಮರ್ಥನೀಯ. ಹಾಗೇ ಎಲ್ಲಾ ಹಂತಗಳಲ್ಲಿಯೂ ಎಸ್.ಸಿ., ಎಸ್.ಟಿ ಸಮುದಾಯಗಳ ಮೀಸಲು ನೀತಿ ಇಲ್ಲಿಗೂ ವಿಸ್ತರಣೆ ಆಗಬೇಕಿದೆ.

ಇಲ್ಲಿ ಸ್ಥಳೀಯರಿಗೆ ಎಷ್ಟು ಸ್ಥಾನ, ಎಂತಹ ಉದ್ಯೋಗಗಳು ಎನ್ನುವ ಬಗ್ಗೆ ಮುಕ್ತವಾದ ಚರ್ಚೆ ನಡೆಯುವುದು ಅಗತ್ಯ. ಈಗ ಮಸೂದೆಯಲ್ಲಿ ಆಡಳಿತಾತ್ಮಕ ಹುದ್ದೆಗಳಲ್ಲಿ ಶೇ. 50, ಆಡಳಿತಾತ್ಮಕವಲ್ಲದ ಹುದ್ದೆಗಳಾದ ಸಿ ಮತ್ತು ಡಿ ದರ್ಜೆಯ ಉದ್ಯೋಗಗಳಲ್ಲಿ ಶೇ.75 ಮೀಸಲಿಡಬೇಕೆಂಬುದು ಮಸೂದೆಯಲ್ಲಿ ಇದೆ ಎನ್ನಲಾಗುತ್ತಿದೆ. ಈ ವಿಷಯದಲ್ಲಿ ಖಾಸಗಿ ಉದ್ಯಮಿಗಳು ಎಂದಿನಂತೆ ಪ್ರತಿಭೆ, ಕೌಶಲ್ಯದ ಕೊರತೆ, ತರಬೇತಿ ಸಾಮರ್ಥ್ಯ ಹೀನತೆಯಂತಹ ಆಕ್ಷೇಪಗಳನ್ನೆತ್ತಿರುವುದು ಅರ್ಥಹೀನ. ಕರ್ನಾಟಕ ಅಂತಹ ಮಾನವ ಸಂಪನ್ಮೂಲಗಳನ್ನು ಸಿದ್ಧಗೊಳಿಸುವ ಅತ್ಯುತ್ತಮ ಶಿಕ್ಷಣ ವ್ಯವಸ್ಥೆಯನ್ನು ಹೊಂದಿದೆ. ಅಂತಹವರು

ಪುಟ 7 ಕ್ಕೆ

ಏಕಲವ್ಯ ಶಾಲೆಗಳಿಗೆ ನೇಮಕಾತಿಯ ಅತಿ ಕೇಂದ್ರೀಕೃತ ವಿಧಾನ:

ಹಿಂತೆಗೆದುಕೊಳ್ಳುವಂತೆ ಬುಡಕಟ್ಟು ವ್ಯವಹಾರಗಳ ಮಂತ್ರಿಗಳಿಗೆ ಬೃಂದಾಕಾರಟ್ ಪತ್ರ

ಭಾರತದಾದ್ಯಂತ ಏಕಲವ್ಯ ಮಾದರಿ ವಸತಿ(ಇಎಂಆರ್) ಶಾಲೆಗಳಲ್ಲಿ ಕಲಿಯುತ್ತಿರುವ ಆದಿವಾಸಿ ವಿದ್ಯಾರ್ಥಿಗಳ ಹಿತಾಸಕ್ತಿಗಳನ್ನು ರಕ್ಷಿಸಲು ಮಧ್ಯಪ್ರವೇಶಿಸಬೇಕು ಎಂದು ಹಿರಿಯ ಸಿಪಿಐ(ಎಂ) ಮುಖಂಡರು ಮತ್ತು ಮಾಜಿ ರಾಜ್ಯಸಭಾ ಸದಸ್ಯರಾದ ಬೃಂದಾ ಕಾರಟ್ ಅವರು, ಒಕ್ಕೂಟ ಸರಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಿ ಜುವಲ್ ಓರಂ ಅವರನ್ನು ವಿನಂತಿಸಿದ್ದಾರೆ.

ಈ ಶಾಲೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಮತ್ತು ಪ್ರಾಂಶುಪಾಲರ ಹುದ್ದೆಗೆ ನೇಮಕಾತಿ ಮಾಡುವ ಪ್ರಸ್ತುತ ವಿಧಾನವು ಅತ್ಯಂತ ದೋಷಪೂರಿತವಾಗಿದ್ದು, ಈ ಶಾಲೆಗಳ ಉದ್ದೇಶವನ್ನೇ ದುರ್ಬಲಗೊಳಿಸುತ್ತದೆ ಎಂಬ ಸಂಗತಿಯತ್ತ ಬೃಂದಾ ಅವರು ಸಚಿವರಿಗೆ ಬರೆದ ಪತ್ರದಲ್ಲಿ ಅವರ ಗಮನ ಸೆಳೆದಿದ್ದಾರೆ.

ಈ ಶಾಲೆಗಳನ್ನು ಸ್ಥಾಪಿಸಿರುವುದು ಉತ್ತಮ ಶೈಕ್ಷಣಿಕ ಆಚರಣೆಗಳನ್ನು ಉತ್ತೇಜಿಸಲು ಮತ್ತು ಆದಿವಾಸಿ ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ಒದಗಿಸಬೇಕೆಂಬ ಆದೇಶದೊಂದಿಗೆ, ಇದು ಬಹುಪಾಲು ಇಲ್ಲಿ ನೇಮಿಸುವ ಶಿಕ್ಷಕ ವರ್ಗವನ್ನು ಅವಲಂಬಿಸಿರುತ್ತದೆ. ಅವರು ಆದಿವಾಸಿ ಸಂಸ್ಕೃತಿಗಳು, ಭಾಷೆಗಳು ಮತ್ತು ಅವಶ್ಯಕತೆಗಳ ಚೌಕಟ್ಟನ್ನು ಅರ್ಥಮಾಡಿಕೊಳ್ಳಲು ಬದ್ಧರಾಗಿರಬೇಕಾಗುತ್ತದೆ ಮತ್ತು ಈ ವಿಷಯದಲ್ಲಿ ಸಂವೇದನಾಶೀಲರಾಗಿ ಇರಬೇಕಾಗುತ್ತದೆ. ಆದರೆ ದುರದೃಷ್ಟವಶಾತ್, ಈ ಏಕಲವ್ಯ ವಸತಿ ಶಾಲೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಮತ್ತು ಪ್ರಾಂಶುಪಾಲರ ಹುದ್ದೆಗೆ ನೇಮಕಾತಿ ಮಾಡುವ ಪ್ರಸ್ತುತ ವಿಧಾನವು ಈ ಶಾಲೆಗಳ ಉದ್ದೇಶವನ್ನು ನಾಶಪಡಿಸದಿದ್ದರೂ, ಅದು ದುರ್ಬಲಗೊಳ್ಳಲಂತೂ ಖಂಡಿತ ಕಾರಣವಾಗಿದೆ.

ಈ ಮೊದಲು ನೇಮಕಾತಿ ರಾಜ್ಯ ಪ್ರಾಧಿಕಾರಗಳ ಮೂಲಕ ನಡೆಯುತ್ತಿತ್ತು. ಆದರೆ ಈಗ, ಕೇಂದ್ರ ಸರ್ಕಾರದ ನಿರ್ಧಾರದಂತೆ,'ರಾಷ್ಟ್ರೀಯ ಬುಡಕಟ್ಟು ವಿದ್ಯಾರ್ಥಿಗಳ ಶಿಕ್ಷಣ ಸಮಾಜ'(ಎನ್.ಇ.ಎಸ್.ಟಿ.ಎಸ್.) ಹೊಸ ನೇಮಕಾತಿ ವಿಧಾನವನ್ನು ಅಂಗೀಕರಿಸಿದೆ. 2023 ರಲ್ಲಿ ಹಣಕಾಸು ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ, ಕೇಂದ್ರೀಯ ಸಂಸ್ಥೆಯಾದ ಎನ್.ಇ.ಎಸ್.ಟಿ.ಎಸ್. ಮುಂದಿನ ಐದು ವರ್ಷಗಳಲ್ಲಿ ಏಕಲವ್ಯ ಶಾಲೆಗಳಿಗೆ 38,000 ಸಿಬ್ಬಂದಿಯನ್ನು ನೇಮಿಸಿಕೊಳ್ಳಲಿದೆ ಎಂದು ಘೋಷಿಸಿದರು. ಇದಕ್ಕೆ ಆದಿವಾಸಿ ಸಂಸ್ಕೃತಿಗಳ ಬಗ್ಗೆ ಯಾವುದೇ ಪರಿಜ್ಞಾನವಿಲ್ಲದ ಕೇಂದ್ರೀಕೃತ ಪರೀಕ್ಷೆಯನ್ನು ರೂಪಿಸಲಾಯಿತು.

ಇದರ ಪ್ರಕಾರ ಎಲ್ಲಾ ಅಭ್ಯರ್ಥಿಗಳು ಇಂಗ್ಲಿಷ್ ಮತ್ತು ಹಿಂದಿ ಎರಡರಲ್ಲೂ "ಭಾಷಾ ಸಾಮರ್ಥ್ಯ" ಹೊಂದಿರಬೇಕೇ ಹೊರತು, ಆದಿವಾಸಿ ಸಮುದಾಯಗಳ ಭಾಷೆಗಳಂತೂ ದೂರ, ರಾಜ್ಯ ಭಾಷೆಗಳಲ್ಲಿಯೂ ಇಂತಹ 'ಸಾಮರ್ಥ್ಯ'ವನ್ನು ಹೊಂದಿರಬೇಕಾಗಿಲ್ಲ ಎಂಬ ಸಂಗತಿಯನ್ನು ಮಂತ್ರಿಗಳ ಗಮನಕ್ಕೆ ತರುತ್ತ ಬೃಂದಾ ಕಾರಟ್, ರಾಜ್ಯ ಭಾಷೆಯನ್ನು ಏಕೆ ಕಡೆಗಣಿಸಬೇಕು, ಈ 'ಸಾಮರ್ಥ್ಯ' ಆದಿವಾಸಿ ಸಂಸ್ಕೃತಿಗಳು ಮತ್ತು ಭಾಷೆಗಳ ಜ್ಞಾನದ ವಿಷಯದಲ್ಲಿಯೂ ಏಕೆ ಒಳಗೊಂಡಿರಬಾರದು, ಹಿಂದಿ ಆಡುಭಾಷೆಯಲ್ಲದ ದಕ್ಷಿಣ ಅಥವಾ ಪೂರ್ವ ಮತ್ತು ಈಶಾನ್ಯ ಭಾರತದ ರಾಜ್ಯಗಳಲ್ಲಿ ಏಕೆ ಹೇರಬೇಕು ಎಂದು ಪ್ರಶ್ನಿಸಿದ್ದಾರೆ. ನೇಮಕಗೊಂಡವರು ಎರಡು ವರ್ಷಗಳಲ್ಲಿ "ಸ್ಥಳೀಯ ಭಾಷೆ" ಕಲಿಯ ಬೇಕು ಎಂದು ಕೇಳಲಾಗಿದೆ, ಆದರೆ ಇದು ಕಾರ್ಯಸಾಧ್ಯವೇ? ಕಾರ್ಯಸಾಧ್ಯವಾದರೂ, ಆ ಎರಡು ವರ್ಷಗಳಲ್ಲಿ ಮಕ್ಕಳಿಗೆ ಕಲಿಯಲು ಭಾಷೆ ಅಡ್ಡಿಯಾದಾಗ ಏನಾಗುತ್ತದೆ? ವಾಸ್ತವವಾಗಿ, ಮಕ್ಕಳೇ ತಮಗೆ ಪರಕೀಯವಾದ ಭಾಷೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ ಮತ್ತು ತಮ್ಮ ಕಲಿಕೆಯಲ್ಲಿ ಅದರ ಎಲ್ಲ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.

ಈ ಏಕಲವ್ಯ ಶಾಲೆಗಳು ಸಾಮಾನ್ಯವಾಗಿ ದೂರದ ಪ್ರದೇಶಗಳಲ್ಲಿ ಇರುತ್ತವೆ. ಸ್ಥಳೀಯರಲ್ಲದ ಶಿಕ್ಷಕರು ಮತ್ತು ಸಿಬ್ಬಂದಿಯ ಗೈರುಹಾಜರಿ ಒಂದಿಲ್ಲೊಂದು ನೆಪದಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ಅನುಭವಕ್ಕೆ ಬಂದಿದೆ. ಈ ರೀತಿ ನೇಮಕಗೊಂಡವರಲ್ಲಿ ಹೆಚ್ಚಿನವರು ತಮ್ಮ ಮನೆಗಳು ಮತ್ತು ಕುಟುಂಬಗಳಿಗೆ ಹತ್ತಿರವಿರುವ ಸ್ಥಳಗಳಿಗೆ ವರ್ಗಾವಣೆಯನ್ನು ಬಯಸುತ್ತಾರೆ. "ಎಲ್ಲಾ ನೇಮಕಗೊಂಡ ಅಭ್ಯರ್ಥಿಗಳು ತಮ್ಮನ್ನು ಕಳಿಸಿದ ಸ್ಥಳದ ಬದಲಾವಣೆಗಾಗಿ ಎನ್.ಇ.ಎಸ್.ಟಿ.ಎಸ್. ಕಚೇರಿಯನ್ನು ಸಂಪರ್ಕಿಸಬಾರದು ಎಂದು ವಿನಂತಿಸಲಾಗಿದೆ. ಪ್ರಸ್ತುತ, ಪೋಸ್ಟಿಂಗ್ ಸ್ಥಳ ಬದಲಾವಣೆಯ ಯಾವುದೇ ವಿನಂತಿಯನ್ನು ಪರಿಗಣಿಸುತ್ತಿಲ್ಲ. ಮೇಲಾಗಿ, ವರ್ಗಾವಣೆಗಳು, [ಅವು] ಸಂಭವಿಸಿದಾಗ, ಎನ್.ಇ.ಎಸ್.ಟಿ.ಎಸ್ ವೆಬ್‌ಸೈಟ್‌ನಲ್ಲಿ ವರ್ಗಾವಣೆ ಪೋರ್ಟಲ್ ಮೂಲಕ ಆಗುತ್ತವೆ ಅದನ್ನು ವರ್ಗಾವಣೆ ನೀತಿಯನ್ನು ಪ್ರಕಟಿಸಿದ ನಂತರ ಅದನ್ನು ಲೈವ್ ಮಾಡಲಾಗುತ್ತದೆ" ಎಂದು ಸಚಿವಾಲಯದ ವೆಬ್‌ಸೈಟ್ ಮತ್ತು ಎನ್.ಇ.ಎಸ್.ಟಿ.ಎಸ್. ನ ವೆಬ್‌ಸೈಟ್ ನಿರ್ದಿಷ್ಟವಾಗಿ ಹೇಳಬೇಕಾಗಿ ಬಂದಿರುವುದು ಕೂಡ ಇದನ್ನು ಸಮರ್ಥಿಸುತ್ತದೆ.

ಇಂತಹ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳ ಹಿತಾಸಕ್ತಿಗಳನ್ನು ಖಾತರಿಪಡಿಸುವ ಉತ್ತಮ ಮಾರ್ಗವೆಂದರೆ, ಏಕಲವ್ಯ ಶಾಲೆಗಳ ಸಿಬ್ಬಂದಿ ಮತ್ತು ಅಧ್ಯಾಪಕರು ವಿದ್ಯಾರ್ಥಿಗಳು ಮಾತನಾಡುವ ಭಾಷೆ ಮತ್ತು ಅವರು ವಾಸಿಸುವ ಸಾಂಸ್ಕೃತಿಕ ಚೌಕಟ್ಟಿನ ಬಗ್ಗೆ ಪರಿಚಿತರಾಗಿರುವವರು ಆಗಿರುವುದು, ಸ್ಥಳೀಯ ನೇಮಕಾತಿಯನ್ನು ಮಾತ್ರ ಪರಿಗಣಿಸಬೇಕು ಎಂದು ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಸೂಚಿಸಿದ್ದಾರೆ.



ವಿಭಜನಾ-ಪೂರ್ವ ಆಂಧ್ರಪ್ರದೇಶದ ಅನುಭವವನ್ನು ಇದಕ್ಕೆ ನಿದರ್ಶನವಾಗಿ ಉಲ್ಲೇಖಿಸಿದ್ದಾರೆ.

ಅಲ್ಲಿ ನಿಯಮಿತ ಹಾಜರಾತಿ ಮತ್ತು ಬೋಧನೆಯನ್ನು ಖಾತ್ರಿಪಡಿಸಲಿಕ್ಕಾಗಿ ಬುಡಕಟ್ಟು ಪ್ರಾಬಲ್ಯವಿರುವ ಪ್ರದೇಶಗಳಲ್ಲಿ ಪರಿಶಿಷ್ಟ ಬುಡಕಟ್ಟಿನ ಶಿಕ್ಷಕರಿಗೆ 100

ಪುಟ 7 ಕ್ಕೆ

ಕೃಷಿ ಸಾಲ ಮನ್ನಾ-ಬೆಂಬಲ ಬೆಲೆ-ಬೆಳೆ ವಿಮೆ-ಕಾರ್ಮಿಕ ಹಕ್ಕುಗಳು, ಕೃಷಿ ಕೂಲಿಕಾರರಿಗೆ ಪಿಂಚಣಿಗಾಗಿ-ವಿದ್ಯುತ್ ಖಾಸಗೀಕರಣದ ವಿರುದ್ಧ ರಣ ಕಹಳೆ

ವಿಶಾಲ ಚಳುವಳಿಯ ಪುನರುಜ್ಜೀವನಕ್ಕೆ 'ಸಂಯುಕ್ತ ಕಿಸಾನ್ ಮೋರ್ಚಾ' ನಿರ್ಧಾರ

ಕಾರ್ಪೋರೇಟ್-ಕೋಮುವಾದಿ ಕೂಟದಿಂದ ದೇಶವನ್ನು ಕಾಪಾಡುವ ಹೋರಾಟಕ್ಕೆ ಮುನ್ನುಡಿ



ಡಾ. ವಿಜು ಕೃಷ್ಣನ್ ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ. ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದ ಡಾ.ವಿಜು ಕೃಷ್ಣನ್ ಅವರನ್ನು 'ಜನಶಕ್ತಿ'ಗಾಗಿ ಸಂದರ್ಶಿಸಿದಾಗ, 18 ನೇ ಲೋಕಸಭಾ ಚುನಾವಣೆ ಫಲಿತಾಂಶ ಹಾಗೂ ಅದರ ನಂತರದ ಪರಿಸ್ಥಿತಿಗಳು, ಸಂಯುಕ್ತ ಕಿಸಾನ್ ಮೋರ್ಚಾ(ಎಸ್.ಕೆ.ಎಂ.) ಸೇರಿದಂತೆ ದೇಶದ ರೈತ-ಕಾರ್ಮಿಕ ಚಳುವಳಿಗಳು ಮತ್ತು ಜನಚಳುವಳಿಗಳ ಮುಂದಿನ ಹೋರಾಟದ ರೂಪುರೇಷೆ-ಯೋಜನೆಗಳ ಕುರಿತು ಹಂಚಿಕೊಂಡ ಮಾಹಿತಿಗಳು ಇಲ್ಲಿವೆ.

ಡಾ. ವಿಜು ಕೃಷ್ಣನ್ ಸಂದರ್ಶನ:

ಸಂದರ್ಶಕರು: ಆರ್. ರಾಮಕೃಷ್ಣ

ಜನಶಕ್ತಿ: 18 ನೇ ಲೋಕಸಭಾ ಚುನಾವಣೆ ಫಲಿತಾಂಶವನ್ನು ಎಸ್.ಕೆ.ಎಂ. ಮುಖಂಡರಾಗಿ ನೀವು ಹೇಗೆ ನೋಡುತ್ತೀರಿ. ಹಾಗೂ ಚುನಾವಣೆಯ ನಂತರದ ಪರಿಸ್ಥಿತಿ ಏನಿದೆ?

ಡಾ.ವಿಜು: ಮೊದಲಿಗೆ ನಾನು ಒಂದು ಮಾತು ಹೇಳಬೇಕು. 18 ನೇ ಲೋಕಸಭಾ ಚುನಾವಣೆಯ ಫಲಿತಾಂಶವು ಬಿಜೆಪಿಗೆ ಹಿನ್ನಡೆಯನ್ನು ತಂದಿದ್ದರೂ ಸಹ ಮೋದಿ ನೇತೃತ್ವದ ಎನ್.ಡಿ.ಎ.-3 ಸರಕಾರವು ಹಿಂದೆ ಜನಚಳುವಳಿಗೆ ಕೊಟ್ಟಿದ್ದ ಭರವಸೆಗಳನ್ನು ಈಡೇರಿಸುವ ದಾರಿಯಲ್ಲಿ ಇಲ್ಲ. ಹೀಗಾಗಿ ರೈತ ವಿರೋಧಿ-ಕಾರ್ಮಿಕ ವಿರೋಧಿ, ದೇಶವಿರೋಧಿ ನೀತಿಗಳ ವಿರುದ್ಧ ಸಂಘರ್ಷವನ್ನು ತೀವ್ರಗೊಳಿಸಬೇಕಾಗಿದೆ.

ಸಂಯುಕ್ತ ಕಿಸಾನ್ ಮೋರ್ಚಾ(ಎಸ್.ಕೆ.ಎಂ.)ದ ರಾಷ್ಟ್ರೀಯ ಮಂಡಳಿ ಸಭೆಯು ಜುಲೈ 10, 2024 ರಂದು ನವದೆಹಲಿಯ ಕಾಮ್ರೇಡ್ ಹರ್ಕಿಶನ್ ಸಿಂಗ್ ಭವನದಲ್ಲಿ ಸಭೆ ಸೇರಿತ್ತು. 17 ರಾಜ್ಯಗಳ 145 ಪ್ರತಿನಿಧಿಗಳು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. 18 ನೇ ಲೋಕಸಭಾ ಚುನಾವಣೆಯ ಫಲಿತಾಂಶಗಳು ಪ್ರಕಟವಾದ ನಂತರ ನಡೆದ ಮೊದಲ ಸಭೆ ಇದು. ಈ ಸಭೆಯು ಜನರ ಬದುಕಿನ ಪ್ರಶ್ನೆಗಳ ಆಧಾರದ ಮೇಲೆ ಐಕ್ಯ ಕಾರ್ಮಿಕ ಚಳುವಳಿಯೊಂದಿಗೆ, ರೈತ-ಕಾರ್ಮಿಕರ ಸಂಯೋಜಿತವಾದ ತೀವ್ರವಾದ ಚಳುವಳಿಯನ್ನು ಮತ್ತೆ ಆರಂಭಿಸಬೇಕೆಂದು ತೀರ್ಮಾನಿಸಿದೆ.

ಕೊರೊನ ಬಿಕ್ಕಟ್ಟಿನ ಕಾಲದಲ್ಲಿ ದೇಶದ ರೈತ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಕೇಂದ್ರದ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರವು ಕಾರ್ಪೋರೇಟ್ ಕಂಪನಿಗಳ ಲೂಟಿಯ ಪರವಾದ 3 ಕುಖ್ಯಾತ ರೈತ ವಿರೋಧಿ ಕಾನೂನುಗಳನ್ನು ತಂದಿದ್ದು ಎಲ್ಲರಿಗೂ ಗೊತ್ತು. ಈ ಜನವಿರೋಧಿ ಕಾನೂನುಗಳ ವಿರುದ್ಧ ಕೊರೊನ ಸೋಂಕಿನ ಭೀತಿಯನ್ನು ಮೀರಿ, ಸರಕಾರ ಹೇರಿದ ಕ್ರೂರ ಲಾಕ್‌ಡೌನ್‌ನ ಪರಿಸ್ಥಿತಿಯಲ್ಲಿ ಒಂದು ವರ್ಷವನ್ನು ದಾಟಿ 384 ದಿನಗಳ ಕಾಲ ಚಳುವಳಿ ನಡೆಯಿತು. ಲಕ್ಷಾಂತರ ರೈತರು ಪಾಲ್ಗೊಂಡಿದ್ದರು. ಭಾರತ ದೇಶದಲ್ಲಿ ಮಾತ್ರವಲ್ಲ, ಜಾಗತಿಕವಾಗಿಯೂ ಗಮನ ಸೆಳೆದ ಈ ಚಾರಿತ್ರಿಕ ಹೋರಾಟದಲ್ಲಿ ಸುಮಾರು 736 ಜನರು ಪ್ರಾಣ ಕಳೆದುಕೊಂಡರೂ ಚಳುವಳಿ ಜಗ್ಗಲಿಲ್ಲ. ಜಗತ್ತಿನ ಜನಚಳುವಳಿಗಳ ಇತಿಹಾಸದಲ್ಲೇ ವಿಶಿಷ್ಟವಾದ ಈ ಚಳುವಳಿಯ ಪರಿಣಾಮವಾಗಿ ಎನ್.ಡಿ.ಎ.-2 ಸರಕಾರವು ರೈತ ಚಳುವಳಿಗಾರರೊಂದಿಗೆ ಒಪ್ಪಂದಕ್ಕೆ ಬರಬೇಕಾಯಿತು.

ಡಿಸೆಂಬರ್ 9, 2021 ರಲ್ಲಿ ಎಸ್.ಕೆ.ಎಂ. ಪ್ರತಿನಿಧಿಗಳೊಂದಿಗೆ ಸರಕಾರ ಮಾಡಿಕೊಂಡ ಲಿಖಿತ ಒಪ್ಪಂದದಲ್ಲಿ ಈ ಕೆಳಕಂಡ ಚಳುವಳಿಯ ಬೇಡಿಕೆಗಳನ್ನು ಸರಕಾರ ಈಡೇರಿಸಿಲು ಒಪ್ಪಿತ್ತು. ಎಲ್ಲ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕವಾದ(ಒಟ್ಟು ಕೃಷಿ ಉತ್ಪಾದನಾ ವೆಚ್ಚ ಮತ್ತು ಅದರ ಶೇ. 50 ರಷ್ಟು ಲಾಭಾಂಶ.-ಸಿ2+50%) ಕನಿಷ್ಟ ಬೆಂಬಲ ಬೆಲೆ ಒದಗಿಸುವುದಕ್ಕೆ ಕಾನೂನು ಗ್ಯಾರಂಟಿ



ಕೊಡಬೇಕು. ವಿದ್ಯುತ್ ಮತ್ತಿತರ ಕ್ಷೇತ್ರಗಳ ಖಾಸಗೀಕರಣ ನೀತಿಗೆ ತಡೆ ಹಾಕಬೇಕು. ಪೂರ್ವಪಾವತಿ ಆಧಾರಿತ ಸ್ಮಾರ್ಟ್ ಮೀಟರ್‌ಗಳ ಅಳವಡಿಕೆ ನಿಲ್ಲಬೇಕು. ಚಳುವಳಿಯಲ್ಲಿ ಮೃತರಾದ ಎಲ್ಲ ರೈತರ ಕುಟುಂಬಗಳಿಗೆ ಪರಿಹಾರ ನೀಡಬೇಕು. ರೈತ ಚಳುವಳಿಕಾರರ ಮೇಲೆ ಹೂಡಿರುವ ಎಲ್ಲ ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕು. ಹುತಾತ್ಮ ರೈತ ಕುಟುಂಬಗಳಿಗೆ ಸೂಕ್ತ ಪರಿಹಾರ ಕೊಡಬೇಕು. ಹುತಾತ್ಮ ರೈತರಿಗೆ ಗೌರವಪೂರ್ವಕವಾದ ಸ್ಮಾರಕವೊಂದನ್ನು ನಿರ್ಮಿಸಬೇಕು. ಕೃಷಿ ಕಳೆಯನ್ನು ಸುಡುವ ರೈತರ ವಿರುದ್ಧ ಪರಿಸರ ಮಾಲಿನ್ಯ ಕಾನೂನು ಅನ್ವಯಿಸಿ ಅಪರಾಧಿಗಳನ್ನಾಗಿಸುವುದಕ್ಕೆ ತಡೆಹಾಕಬೇಕು. ಇವೇ ಸರಕಾರ ಒಪ್ಪಿದ್ದ ಪ್ರಮುಖ ಬೇಡಿಕೆಗಳು.

ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಗಳನ್ನು ಗಮನದಲ್ಲಿರಿಸಿಕೊಂಡು 3 ರೈತದ್ರೋಹಿ ಕಾನೂನುಗಳನ್ನು ವಾಪಸ್ ತೆಗೆದುಕೊಂಡದ್ದು ಬಿಟ್ಟರೆ ಇನ್ನುಳಿದ ಬೇಡಿಕೆಗಳನ್ನು ಈಡೇರಿಸುವ ಯಾವ ಬದ್ಧತೆಯನ್ನೂ ಸರಕಾರ ತೋರಲಿಲ್ಲ. ಈ ಹಿನ್ನೆಲೆಯಲ್ಲಿ ಚಳುವಳಿ ಮುಂದುವರೆಯಿತು.

ಈ ಹೋರಾಟದ ವಿಸ್ತರಣೆಯಾಗಿ ಎಸ್.ಕೆ.ಎಂ. ಮತ್ತು ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ(ಜೆಸಿಟಿಯು)ಗಳ ನೇತೃತ್ವದಲ್ಲಿ ಆಗಸ್ಟ್ 24, 2023 ರಂದು ದೆಹಲಿಯಲ್ಲಿ ರೈತ-ಕಾರ್ಮಿಕರ ರಾಷ್ಟ್ರೀಯ ಸಮಾವೇಶವು ನಡೆಯಿತು. ಈ ಸಮಾವೇಶದಲ್ಲಿ ಎಲ್ಲ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಕನಿಷ್ಟ ಬೆಂಬಲ ಬೆಲೆ, ರೈತರ ಸಾಲ ಮನ್ನಾ, ಕಾರ್ಮಿಕರಿಗೆ ನ್ಯಾಯಬದ್ಧ ಕನಿಷ್ಟ ಕೂಲಿ, ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆಗಳಿಗೆ ಪರಿಹಾರ, ನಾಲ್ಕು ಕಾರ್ಮಿಕ ವಿರೋಧಿ ಕಾಯ್ದೆಗಳ ವಾಪಸಾತಿ, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ನೀತಿಗೆ ತಡೆ, ಉದ್ಯೋಗಗಳ ಗುತ್ತಿಗೀಕರಣಕ್ಕೆ ತಡೆ ಮುಂತಾದವುಗಳಲ್ಲದೇ, ಸೆಕ್ಯುಲಾರ್ (ಮತ ನಿರಪೇಕ್ಷ) ಪ್ರಜಾಸತ್ತಾತ್ಮಕ ಸಂವಿಧಾನದ ರಕ್ಷಣೆ ಸೇರಿದಂತೆ ಹಲವು ಬೇಡಿಕೆಗಳನ್ನು ಅಂಗೀಕರಿಸಿ ಸರಕಾರದ ಮುಂದಿಟ್ಟಿತು.

ಚಳುವಳಿ ನಿರತ ರೈತರ ಮೇಲೆ ಅಧಿಕಾರಸ್ಥರು ತಮ್ಮ ಬೆಂಗಾವಲು ವಾಹನ ಹರಿಸಿ ಕೊಂದ ಲಕ್ಕಿಮ್‌ಪುರ ಖೇರಿ ರೈತರ ಹತ್ಯಾಕಾಂಡವನ್ನು ವಿರೋಧಿಸಿ ಅಕ್ಟೋಬರ್ 3, 2023 ರಂದು ಪ್ರತಿಭಟನೆ ನಡೆಸಲಾಯಿತು. ನವೆಂಬರ್ 26 ರಿಂದ 28, 2023 ರವರೆಗೆ ಎಲ್ಲ ರಾಜ್ಯಗಳ ರಾಜಭವನಗಳ ಮುಂದೆ ಮಹಾಪಡಾವ್, ಜನವರಿ 26, 2024 ರಂದು ದೇಶವ್ಯಾಪಿ 'ಟ್ರ್ಯಾಕ್ಟರ್ ಮಾರ್ಚ್' ಮುಂತಾದ ಸರಣಿ ಹೋರಾಟಗಳನ್ನು ನಡೆಸಲಾಯಿತು. ಮಾರ್ಚ್ 14, 2024 ರಂದು ದೆಹಲಿಯ ರಾಮ್ ಲೀಲಾ ಮೈದಾನದಲ್ಲಿ ಮಹಾಪಂಚಾಯತ್ ಸಂಘಟಿಸಿ 18 ನೇ ಲೋಕಸಭಾ ಚುನಾವಣೆಗಳಲ್ಲಿ ಮೋದಿ ನೇತೃತ್ವದ 'ಬಿಜೆಪಿ ಸರಕಾರದ ನೀತಿಗಳನ್ನು ಬಯಲು ಮಾಡಿ, ಸರಕಾರವನ್ನು ವಿರೋಧಿಸಿ, ಶಿಕ್ಷಿಸಿ' ಎಂಬ ಘೋಷಣೆಗಳನ್ನು ನೀಡಿತು.

ಈ ಒಟ್ಟು ಹೋರಾಟಗಳು ರೈತ-ಕಾರ್ಮಿಕರ ಐಕ್ಯ ಚಳುವಳಿ ದೇಶವ್ಯಾಪಿ ವ್ಯಾಪಕವಾದ ಪರಿಣಾಮವನ್ನು ಬೀರಿದವು. ಹಾಗೆಯೆ ಕೃಷಿ ಬಿಕ್ಕಟ್ಟು, ಉದ್ಯೋಗ, ಆಹಾರ, ಭೂಮಿ ಮುಂತಾದ ಜನರ ಬದುಕಿನ ಪ್ರಶ್ನೆಗಳನ್ನು, ಸಂವಿಧಾನ ರಕ್ಷಣೆಯ ಪ್ರಶ್ನೆಗಳನ್ನು ಜನಮಾನಸದ ಮುಂದೆ ತಂದವು. ಆ ಮೂಲಕ ದೇಶದ ವಿರೋಧ ಪಕ್ಷಗಳು ಒಗ್ಗೂಡಲು ಪೂರಕವಾದ ವಾತಾವರಣವನ್ನು ಸೃಷ್ಟಿಸಿದವು.

ಈ ಒಟ್ಟು ಪ್ರಕ್ರಿಯೆಯಲ್ಲಿ ಸೀಮಿತವಾದರೂ ರೈತ ಮತ್ತು ಕಾರ್ಮಿಕರ ಐಕ್ಯ ಚಳುವಳಿ ಬೆಳೆದು ಬರುತ್ತಿರುವುದನ್ನು ಕಾಣಬಹುದಾಗಿದೆ. ಕೃಷಿ, ಕೈಗಾರಿಕೆ, ಸೇವಾ ವಲಯಗಳನ್ನು ಕಾರ್ಪೋರೇಟೀಕರಣಗೊಳಿಸುವ ನೀತಿಗಳ ವಿರುದ್ಧ ಪರ್ಯಾಯ ಆರ್ಥಿಕ ನೀತಿಗಳಿಗಾಗಿ ಮೂಡಿ ಬರುತ್ತಿರುವ ಈ ಜನಚಳುವಳಿ ಇದು. ಈ ಚಳುವಳಿಯನ್ನು ರೂಪಿಸುವಲ್ಲಿ ಆರಂಭದಿಂದಲೂ ಎಡ ಮತ್ತು ಪ್ರಜಾಸತ್ತಾತ್ಮಕ ರೈತ-ಕಾರ್ಮಿಕ ಸಂಘಟನೆಗಳು ಪ್ರಧಾನವಾಗಿ ಮುತುವರ್ಜಿ ವಹಿಸಿವೆ.

18 ನೇ ಲೋಕಸಭಾ ಚುನಾವಣೆಯ ಫಲಿತಾಂಶ ಬಂದಾಗಿದೆ. ಪ್ರಬಲ ರೈತ ಚಳುವಳಿ ನಡೆದ ಪಂಜಾಬ್, ಹರ್ಯಾಣ, ರಾಜಾಸ್ತಾನ, ಪಶ್ಚಿಮ ಉತ್ತರ ಪ್ರದೇಶಗಳಲ್ಲಿ ಒಟ್ಟಾರೆ ಬಿಜೆಪಿಯು 38 ಲೋಕಸಭಾ ಸ್ಥಾನಗಳನ್ನು ಕಳೆದುಕೊಂಡಿದೆ. ಮಹಾರಾಷ್ಟ್ರದಲ್ಲಿಯೂ ಬಿಜೆಪಿಗೆ ಗಣನೀಯ ಸೋಲು ಎದುರಾಗಿದೆ. ಒಟ್ಟಾರೆ ಗ್ರಾಮೀಣ ಭಾರತದ 159 ಕ್ಷೇತ್ರಗಳಲ್ಲಿ ಬಿಜೆಪಿ ಸೋಲು ಕಂಡಿದೆ. ಈ ಬಾರಿ 400 ಸ್ಥಾನಗಳನ್ನು ಪಡೆಯುತ್ತೇವೆ ಎಂದು ಬೀಗುತ್ತಿದ್ದ ಬಿಜೆಪಿಯು ಇದ್ದ ಸ್ಥಾನಗಳಲ್ಲೇ 63 ಸ್ಥಾನಗಳನ್ನು ಕಳೆದುಕೊಂಡಿತು. ಉತ್ತರ ಪ್ರದೇಶದ ಲಕ್ಕಿಮ್‌ಪುರ ಹತ್ಯಾಕಾಂಡದ ರೂವಾರಿ, ಕೇಂದ್ರ ಮಂತ್ರಿ ಅಜಯ್ ಮಿಶ್ರ ತೇಣಿ, ಎನ್.ಡಿ.ಎ.-2 ಸರಕಾರದ ಕೃಷಿ ಮಂತ್ರಿ ಅರ್ಜುನ್ ಮುಂಡಾ ಜಾರ್ಕಂಡ್‌ನ ಕುಂತಿ ಕ್ಷೇತ್ರದಲ್ಲಿ ಚುನಾವಣೆಯಲ್ಲಿ ಮಣ್ಣು ಮುಕ್ಕಿದರು. ಈ ರೈತ ಚಳುವಳಿಯ ಹಲವು ನಾಯಕರು ಸಂಸತ್ತು ಪ್ರವೇಶಿಸಿದ್ದಾರೆ.

ಲೋಕಸಭೆಯಲ್ಲಿ ಬಹುಮತ ಗಳಿಸಲಾಗದ ಬಿಜೆಪಿ ಪಕ್ಷವು ಈಗ ಜೆಡಿ(ಯು), ಟಿಡಿಪಿಯಂತಹ ಪಕ್ಷಗಳ ಬೆಂಬಲದ ಮೇಲೆ ಅವಲಂಬಿಸಬೇಕಾದ ಪರಿಸ್ಥಿತಿ ಬಂದಿದೆ. ಈ ಸೋಲಿಗೆ ಕೆಲವರು ರಾಹುಲ್ ಗಾಂಧಿ, ಧ್ರುವರಾಠಿ ಮುಂತಾದ ವ್ಯಕ್ತಿಗಳು ಕಾರಣ ಎಂದು ವಿವರಿಸುತ್ತಾರೆ. ಬಿಜೆಪಿಯ ಈ ಸೋಲಿನಲ್ಲಿ ವ್ಯಕ್ತಿಗಳ ಪಾತ್ರ ➚





ಇದೆಯಾದರೂ ದೇಶವ್ಯಾಪಿಯಾದ ರೈತ–ಕಾರ್ಮಿಕ ಚಳುವಳಿ ಹಾಗೂ ಚಳುವಳಿಯ ಭಾಗವಾಗಿ ದೇಶವ್ಯಾಪಿ ನಡೆಸಿದ ಪ್ರಚಾರವೂ ಮುಖ್ಯ ಪಾತ್ರವಹಿಸಿದೆ.

ಜನಶಕ್ತಿ: ನರೇಂದ್ರ ಮೋದಿ ನೇತೃತ್ವದ ಎನ್.ಡಿ.ಎ.–3 ಸರಕಾರದ ಧೋರಣೆ ಬಗೆಗೆ ರೈತ–ಕಾರ್ಮಿಕ ಚಳುವಳಿಯ ನಿಲುವೇನು?

ಡಾ. ವಿಜು: ಎಷ್ಟೆಲ್ಲಾ ಪ್ರಖರ ಚಳುವಳಿ ಮತ್ತು ಅದರ ಪರಿಣಾಮವಾಗಿ ಬಿಜೆಪಿಗೆ ಹಿನ್ನಡೆಯಾದ ನಂತರವೂ ಮೋದಿ ಸರಕಾರದಲ್ಲಿ ರೈತರ ಮೇಲೆ 'ಮಂಡ್‌ಸೌರ್'ನಲ್ಲಿ ಗೋಲಿಬಾರ್ ನಡೆಸಿದ 6 ಜನ ರೈತರನ್ನು ಕೊಂದ ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಶಿವರಾಜ್ ಚೌಹಾಣ್ ಕೃಷಿ ಮಂತ್ರಿಯಾಗಿದ್ದಾರೆ. ಸರಕಾರ ಕೃಷಿ ಉತ್ಪನ್ನಗಳಿಗೆ ನ್ಯಾಯಬದ್ಧವಾದ ಬೆಂಬಲ ಬೆಲೆ ಒದಗಿಸಲಿಲ್ಲ. ಬೆಂಬಲ ಬೆಲೆ ಘೋಷಿಸಿದ 14 ಖಾರಿಫ್ (ಮುಂಗಾರು) ಕೃಷಿ ಉತ್ಪನ್ನಗಳಿಗೆ, ಅದು ಕೃಷಿ ತಜ್ಞ ಸ್ವಾಮಿನಾಥನ್ ಆಯೋಗ ವೈಜ್ಞಾನಿಕ ಶಿಫಾರಸ್ಸಾದ ಸಿ2+50 ಶೇ. ಸೂತ್ರದಂತೆ ಇಲ್ಲ.

2023 ರಲ್ಲಿ ಕ್ವಿಂಟಾಲ್ ಭತ್ತಕ್ಕೆ 2,183 ಕನಿಷ್ಠ ಬೆಂಬಲ ಬೆಲೆ ಘೋಷಿಸಲಾಗಿತ್ತು. 2024 ರಲ್ಲಿ ಕೇವಲ 117 ರೂಪಾಯಿಗಳನ್ನು ಹೆಚ್ಚು ಮಾಡಿ 2,300 ರೂ. ಬೆಂಬಲ ಬೆಲೆ ಘೋಷಿಸಲಾಗಿದೆ. ಅದೇ ರೀತಿ ಕ್ವಿಂಟಲ್ ಗೋಧಿಗೆ 2023 ರಲ್ಲಿ 2,125 ರೂ. ಇದ್ದ ಬೆಂಬಲ ಬೆಲೆಯನ್ನು ಕೇವಲ 150 ಹೆಚ್ಚಿಸಿ 2,275 ರೂ.ಗೆ ಏರಿಸಲಾಗಿದೆ. ಈ ದರಗಳು ಕೃಷಿ ವೆಚ್ಚ ಮತ್ತು ಬೆಲೆ ಆಯೋಗ(ಸಿ.ಎ.ಸಿ.ಪಿ.) ಶಿಫಾರಸ್ಸು ಮಾಡಿದ ಬೆಂಬಲ ಬೆಲೆಯ ಸಮೀಪವೂ ಇಲ್ಲ.

ಇತ್ತೀಚೆಗೆ ಒರಿಸ್ಸಾ ಮತ್ತು ಚತ್ತೀಸಗಡಗಳಲ್ಲಿ ಭತ್ತಕ್ಕೆ 3,100 ರೂ. ಕನಿಷ್ಠ ಬೆಂಬಲ ಬೆಲೆ ನೀಡುವುದಾಗಿ ಅಲ್ಲಿನ ರಾಜ್ಯ ಸರಕಾರಗಳು ಘೋಷಿಸಿವೆ. ಇದು ಜಾರಿಯಾಗುತ್ತದೆಯೇ, ಸಮರ್ಪಕವಾಗಿ ಜಾರಿಯಾಗುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ. ಆದರೆ ಸಿಪಿಐ(ಎಂ) ನೇತೃತ್ವದ ಕೇರಳದ ಎಲ್.ಡಿ.ಎಫ್. ಸರಕಾರವು ಕ್ವಿಂಟಲ್ ಭತ್ತಕ್ಕೆ 2,820 ರೂಪಾಯಿಗಳನ್ನು ನಿಗದಿಪಡಿಸಿ ಜಾರಿ ಮಾಡಿದೆ. ಕೇರಳ ರಾಜ್ಯಕ್ಕೆ ಕೇಂದ್ರ ಸರಕಾರ ಕೊಡಬೇಕಿದ್ದ 1,800 ಕೋಟಿ ರೂಪಾಯಿಗಳ ಅನುದಾನವನ್ನು ನೀಡದೇ ಅಸಹಕಾರ ತೋರಿದರೂ ಸಹ ಈ ರೈತ ಪರವಾದ ನೀತಿ ಜಾರಿಮಾಡಲು ಕೇರಳ ಸರಕಾರಕ್ಕೆ ಸಾಧ್ಯವಾಗಿದೆ ಎಂಬುದನ್ನು ಗಮನಿಸಲಾಗಿದೆ.

ಇದಲ್ಲದೇ ಕೊಟ್ಟ ಭರವಸೆಗೆ ವಿರುದ್ಧವಾಗಿ ಕೇಂದ್ರ ಸರಕಾರ ಸ್ಮಾರ್ಟ್ ವಿದ್ಯುತ್ ಮೀಟರ್‌ಗಳನ್ನು ಅಳವಡಿಸಲು ಹೊರಟಿದೆ. ಚಳುವಳಿಯಲ್ಲಿ ಮೃತರಾದ ರೈತರ ಕುಟುಂಬಗಳಿಗೆ ಇಂದಿಗೂ ಪರಿಹಾರವನ್ನು ನೀಡಿಲ್ಲ. ರೈತರ ಮೇಲಿನ ಮೊಕದ್ದಮೆಗಳು ವಾಪಸ್ಸಾಗಲಿಲ್ಲ.

ದೇಶದ ಅಗಾಧ ವೈವಿಧ್ಯತೆ ಹಾಗೂ ಪ್ರಜಾಪ್ರಭುತ್ವಕ್ಕೆ ಮಾರಕವಾದ 'ಒಂದು ರಾಷ್ಟ್ರ–ಒಂದು ಚುನಾವಣೆ' ಎಂಬ ವಿಷಯವನ್ನು ಮುಂಚೂಣಿಗೆ ತರಲಾಗುತ್ತಿದೆ. 'ಒಂದು ರಾಷ್ಟ್ರ–ಒಂದು ಪರೀಕ್ಷೆ' ಎಂಬ ನೆಲೆಯಲ್ಲಿ ವೈದ್ಯಕೀಯ ಪ್ರವೇಶ ಪರೀಕ್ಷೆಯಾದ 'ನೀಟ್'ನಂತಹ ಪರೀಕ್ಷೆಗಳನ್ನು ಕೇಂದ್ರೀಕರಣಗೊಳಿಸಲಾಗಿದೆ. ಈ ಪರೀಕ್ಷೆಗಳಲ್ಲಿ ಸಾಕಷ್ಟು ಹಗರಣ, ಅಕ್ರಮಗಳು ನಡೆದಿರುವುದು ಬಯಲಾಗಿದೆ. ಲಕ್ಷಾಂತರ ವಿದ್ಯಾರ್ಥಿಗಳು, ಪೋಷಕರು ಆತಂಕಕ್ಕೆ ಒಳಗಾಗಿದ್ದಾರೆ. ಶೋಷಿತ ಸಮುದಾಯಗಳ, ಬಡ ಮತ್ತು ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ರಾಜ್ಯ ಸರಕಾರಗಳ ಹಕ್ಕುಗಳಿಗೂ ಸಂಚಕಾರ ಬಂದಿದೆ. ಯುವಜನರು, ಕಾರ್ಮಿಕರು, ರೈತರು ಮುಂತಾದ ನಾನಾ ವಿಭಾಗಗಳ ಜನರಲ್ಲಿ ಸರಕಾರ ವಿರೋಧಿ ಭಾವನೆ ಬೆಳೆಯುತ್ತಿದೆ. ಆದರೆ ಕೋಮುವಾದಿ ಶಕ್ತಿಗಳು ಜನರ ಗಮನವನ್ನು ಬೇರೆ ಕಡೆಗೆ ಸೆಳೆಯಲು ಕುತಂತ್ರಗಳನ್ನು ನಡೆಸಿವೆ. ಅಲ್ಪಸಂಖ್ಯಾತರ ಮೇಲೆ ಹಲ್ಲೆಗಳು ನಡೆಸಲಾಗುತ್ತಿದೆ. ಗೋಮಾಂಸ ಇಟ್ಟುಕೊಂಡಿದ್ದರೆಂಬ ಸುಳ್ಳು ಆರೋಪಗಳ ಮೇಲೆ ಉತ್ತರ ಪ್ರದೇಶದಲ್ಲಿ ಮೂವರು ಮುಸ್ಲಿಮರನ್ನು ಕೊಲ್ಲಲಾಗಿದೆ. ರಾಜಸ್ತಾನದಲ್ಲಿ ಹಸುಗಳನ್ನು ಸಾಗಿಸುತ್ತಿದ್ದಾರೆಂಬ ಆರೋಪದಲ್ಲಿ, ನಿಂಬೆಹಣ್ಣು ಸಾಗಿಸುತ್ತಿದ್ದ ವಾಹನದಲ್ಲಿದ್ದ ಮುಸ್ಲಿಮರ ಮೇಲೆ ತೀವ್ರವಾದ ಹಲ್ಲೆ ನಡೆಸಲಾಗಿದೆ. ಇಂತಹ ಹಲವಾರು ಹಲ್ಲೆ, ಕೊಲೆಗಳು ವರದಿಯಾಗುತ್ತಿವೆ.

ಆದರೆ ಈ ಎಲ್ಲ ಪಿತೂರಿಗಳನ್ನು ಮೀರಿ ಜನಚಳುವಳಿಗಳನ್ನು ತೀವ್ರಗೊಳಿಸುವ ದೃಢ ನಿಶ್ಚಯ ಕೈಗೊಳ್ಳಲಾಗಿದೆ. ಈ ಹಿಂದಿನಿಂದ ಒತ್ತಾಯಿಸಲಾಗುತ್ತಿರುವ ಬೇಡಿಕೆಗಳಲ್ಲದೇ ಪ್ರಸ್ತುತ ಸಂದರ್ಭದ ಅಗತ್ಯಕ್ಕೆ ತಕ್ಕಂತೆ ಮತ್ತೆ ಕೆಲವು ಪ್ರಮುಖ ಬೇಡಿಕೆಗಳನ್ನು ಸರಕಾರದ ಮುಂದೆ ಇಡಲಾಗಿದೆ.

ಜನಶಕ್ತಿ: ಈ ಹೊಸ ಹಂತದ ಚಳುವಳಿಯ ಪ್ರಧಾನ ಬೇಡಿಕೆಗಳು ಏನು?

ಡಾ. ವಿಜು: ಚಳುವಳಿಗಾರರಿಗೆ ಈ ಹಿಂದೆ ಕೊಟ್ಟ ಭರವಸೆಗಳನ್ನು ಈಡೇರಿಸಬೇಕು. ಅಲ್ಲದೇ,

ಕೃಷಿಗಾಗಿಯೇ ಪ್ರತ್ಯೇಕವಾದ ಬಜೆಟ್ ಮಂಡಿಸಬೇಕು. ಕೃಷಿಯ ಅಗತ್ಯಗಳಾದ ಬೀಜ, ಗೊಬ್ಬರ, ಕೀಟ ನಾಶಕ, ಕೃಷಿ ಉಪಕರಣಗಳು, ಟ್ರಾಕ್ಟರ್, ಡಿಸೆಲ್–ಪೆಟ್ರೋಲ್ ಮುಂತಾದವುಗಳ ಮೇಲೆ ಯಾವುದೇ ಜಿ.ಎಸ್.ಟಿ. ವಿಧಿಸಬಾರದು. ತೆರಿಗೆ ವಿಧಿಸುವ ವಿಚಾರದಲ್ಲಿ ರಾಜ್ಯ ಸರಕಾರಗಳ ಹಕ್ಕುಗಳಿಗೆ ಧಕ್ಕೆ ಆಗಿರುವುದನ್ನು ನಿವಾರಿಸಿ ರಾಜ್ಯಗಳ ಹಕ್ಕುಗಳನ್ನು ಕಾಪಾಡಬೇಕು. ಕೃಷಿಯಲ್ಲಿ ಹಾಗೂ ಕೃಷಿ ಉತ್ಪನ್ನಗಳ ಮಾರಾಟದಲ್ಲಿ ಕಾರ್ಪೋರೇಟ್ ಕಂಪನಿಗಳಿಗೆ ಅವಕಾಶವಿರಬಾರದು. ಕೇಂದ್ರ ಸರಕಾರದಲ್ಲಿ ಸಹಕಾರ ಇಲಾಖೆಯನ್ನು ರದ್ದು ಮಾಡಬೇಕು. ಕೇಂದ್ರ ಸರಕಾರವು ಅಧಿಕಾರ ಕೇಂದ್ರೀಕರಣದ ನೀತಿ ಕೈ ಬಿಟ್ಟು, ಸಹಕಾರ ಕ್ಷೇತ್ರವನ್ನು ರಾಜ್ಯಗಳ ಜವಾಬ್ದಾರಿಗೆ ಬಿಡಬೇಕು. ರಾಜ್ಯ ಸರಕಾರಗಳಿಗೆ ಅಗತ್ಯ ಹಣಕಾಸು ನೆರವು ನೀಡಬೇಕು. ದೇಶದ ಸಂವಿಧಾನ ಬದ್ಧ ಒಕ್ಕೂಟ ತತ್ವವನ್ನು ದೇಶದ ಒಕ್ಕೂಟ ಸ್ವರೂಪವನ್ನು ಗೌರವಿಸಬೇಕು. 'ಬಲಿಷ್ಠ ದೇಶಕ್ಕಾಗಿ ಬಲಿಷ್ಠ ರಾಜ್ಯಗಳು' ಎಂಬ ನೀತಿಯ ಮಹತ್ವವನ್ನು ಒಪ್ಪಿಕೊಳ್ಳಬೇಕು ಮುಂತಾದ ಬೇಡಿಕೆಗಳನ್ನು ಈ ಚಳುವಳಿ ಒಳಗೊಳ್ಳಲಿದೆ.

ನಾನಾ ಯೋಜನೆಗಳಿಗಾಗಿ ಭೂಮಿ ಕಳೆದುಕೊಳ್ಳುವ ರೈತರಿಗೆ ಸಮರ್ಪಕವಾದ ಪರಿಹಾರದ ಖಾತರಿ, ಈ ಸಂಬಂಧದ 2013 ರ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೆ ತರಬೇಕು. ರೈತರ ಆತ್ಮಹತ್ಯೆಗಳ ತಡೆಗೆ ಸಮಗ್ರ ಕ್ರಮ, ಕಾಡುಪ್ರಾಣಿಗಳ ಹಾವಳಿಗೆ ಶಾಶ್ವತ ಪರಿಹಾರ ಮತ್ತು ದಾಳಿಯಲ್ಲಿ ಬಲಿಯಾದ ಕುಟುಂಬಗಳಿಗೆ 1 ಕೋಟಿ ಪರಿಹಾರ, ಅರಣ್ಯ ಭೂಮಿ ಹಕ್ಕು ಕಾಯ್ದೆಯ ಸಮರ್ಪಕ ಜಾರಿ, ಕೃಷಿ ಕೂಲಿಕಾರರಿಗೆ ತಿಂಗಳಿಗೆ 10 ಸಾವಿರ ಪಿಂಚಣಿ ಸೌಲಭ್ಯ, ಖಚಿತ ಪುನರ್‌ವಸತಿಯನ್ನು ಖಾತ್ರಿ ಪಡಿಸಿದ ನಂತರ ಮಾತ್ರವೇ ಗುಡಿಸಲು (ಸ್ಲಂ)ನಿವಾಸಿಗಳ ಭೂಮಿ ವಶ ಮುಂತಾದ ಬೇಡಿಕೆಗಳನ್ನು ಚಳುವಳಿ ಒಳಗೊಂಡಿದೆ.

ಹೋರಾಟವು ಕೇಂದ್ರ ಸರಕಾರ ಜನವಿರೋಧಿ ನೀತಿಗಳ ವಿರುದ್ಧ ಕೇಂದ್ರೀಕರಿಸಿದ್ದರೂ ಸ್ಥಳೀಯ ವಿಷಯಗಳನ್ನೂ ಜೊತೆಗೂಡಿಸಿಕೊಂಡು ಈ ಚಳುವಳಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು. ಬಗರ್ ಹುಕುಂ ಸಾಗುವಳಿ ಭೂಮಿ ಸೇರಿದಂತೆ ಭೂಮಿಯ ಪ್ರಶ್ನೆ, ಮನೆ ನಿವೇಶನದ ಪ್ರಶ್ನೆ, ಪ್ರವಾಹ ಮತ್ತು ಮಳೆ ಹಾನಿಯ ಪ್ರಶ್ನೆಗಳನ್ನು ಚಳುವಳಿ ಒಳಗೊಳ್ಳಲಿದೆ. ಬೆಳೆ ಹಾನಿಗೆ ಸಂಬಂಧಿಸಿದಂತೆ ರಾಜಸ್ತಾನದಲ್ಲಿ 2017–23 ರ ನಡುವಿನ ಅವಧಿಯಲ್ಲಿ 1,300 ಕೋಟಿ ರೂಪಾಯಿಗಳಷ್ಟು ವಿಮಾ ಪರಿಹಾರವನ್ನು ಎ.ಐ.ಕೆ.ಎಸ್. ನೇತೃತ್ವದ ಚಳುವಳಿಯ ಮೂಲಕ ಸಂತ್ರಸ್ತ ರೈತರಿಗೆ ಕೊಡಿಸುವುದು ಸಾಧ್ಯವಾಗಿದೆ. ಈ ಸಾಧನೆ ಈಗಿನ ಚಳುವಳಿಗೆ ಮಾದರಿಯೂ ಸ್ಫೂರ್ತಿಯೂ ಆಗಿದೆ. ರೈತ ವಿರೋಧಿಯಾದ ಮತ್ತು ಕಾರ್ಪೋರೇಟ್ ಪರವಾದ ಪಧಾನ ಮಂತ್ರಿ ಫಸಲ್ ಭಿಮಾ ಯೋಜನೆಯನ್ನು ರದ್ದು ಪಡಿಸಿ ಉತ್ತಮ ವಿಮಾ ಯೋಜನೆ ರೂಪಿಸಲು ಆಗ್ರಹಿಸಲಾಗಿದೆ. ಈ ಚಳುವಳಿಯು ಕೇವಲ ಆರ್ಥಿಕ ಸ್ವರೂಪದ ಬೇಡಿಕೆಗಳಿಗೆ ಸೀಮಿತಗೊಳ್ಳದೇ ದೇಶದ ಭವಿಷ್ಯವನ್ನು ಕಾಪಾಡುವ ಸೈದ್ಧಾಂತಿಕ ಪ್ರಶ್ನೆಗಳನ್ನು ಒಳಗೊಳ್ಳಲಿದೆ. ದೇಶಕ್ಕೆ ಗಂಭೀರ ಹಾನಿ ಮಾಡುತ್ತಿರುವ ಕಾರ್ಪೋರೇಟ್ ಲೂಟಿಯ ವಿರುದ್ಧದ ಹೋರಾಟದ ಜೊತೆಗೆ ಕಾರ್ಪೋರೇಟ್–ಕೋಮುವಾದಿ ಕೂಟದಿಂದ ಜನರ ಬದುಕಿನ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ, ಹಾಗೂ ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರು ರೂಪಿಸಿಕೊಟ್ಟ ಮತನಿರಪೇಕ್ಷ ಸಂವಿಧಾನದ ರಕ್ಷಣೆಗಾಗಿಯೂ ಹೋರಾಟ ನಡೆಯಲಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಯಾವುದೇ ಪಾತ್ರವಹಿಸದೇ, ಸ್ವಾತಂತ್ರ್ಯ ಚಳುವಳಿಗೆ ದ್ರೋಹ ಬಗೆದಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘ–ಆರೆಸ್ಸೆಸ್‌ನ ವಿದ್ರೋಹದ ಪಾತ್ರದ ಬಗೆಗೆ ಸಹ ಜನರಲ್ಲಿ ಅರಿವು ಮೂಡಿಸಲಾಗುವುದು. ಕೇಂದ್ರ ಸರಕಾರ ಸರ್ವಾಧಿಕಾರಿ–ಫ್ಯಾಸಿಸ್ಟ್ ಪ್ರವೃತ್ತಿಯ ವಿರುದ್ಧ, ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಜನರಲ್ಲಿ ಜಾಗೃತಿ ಮೂಡಿಸಲಾಗುವುದು.



ಜನಶಕ್ತಿ: ಮುಂದಿನ ಚಳುವಳಿಯ ನಿರ್ದಿಷ್ಟ ಸ್ವರೂಪ ಏನು?

ಡಾ. ವಿಜು: ಹಲವು ಹಂತಗಳ ಯೋಜನೆ ರೂಪಿಸಲಾಗಿದೆ.

1. ಜುಲೈ 16–18–ಮನವಿ ಸಲ್ಲಿಕೆ

ಎಸ್.ಕೆ.ಎಂ. ಪ್ರತಿನಿಧಿಗಳು ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರನ್ನು ಭೇಟಿ ಮಾಡಿ ಚಳುವಳಿಯ ಬೇಡಿಕೆಗಳ ಕುರಿತ ಆಗ್ರಹ ಪತ್ರವನ್ನು ಸಲ್ಲಿಸುವುದು. ಹಾಗೆಯೇ ದೇಶದ ಪ್ರಧಾನಿ ಮತ್ತು ಲೋಕಸಭೆ ಮತ್ತು ರಾಜ್ಯ ಸಭೆಯಲ್ಲಿನ ವಿರೋಧ ಪಕ್ಷಗಳ ಮುಖಂಡರನ್ನು ಭೇಟಿ ನಿಗದಿಪಡಿಸಲು ಕೋರುವುದು.

2. ಆಗಸ್ಟ್ 9, 2024–'ಕ್ವಿಟ್ ಕಾರ್ಪೋರೇಟ್'

ಆಗಸ್ಟ್ 9ರ ಐತಿಹಾಸಿಕ ಕ್ವಿಟ್ ಇಂಡಿಯಾ ಚಳುವಳಿಯ ದಿನದಂದು 'ಕಾರ್ಪೋರೇಟ್ ಕಂಪನಿಗಳೇ ತೊಲಗಿ' ಎಂಬ ಚಳುವಳಿ ನಡೆಸುವುದು. ಭಾರತವು ವಿಶ್ವ ವಾಣಿಜ್ಯ ಒಪ್ಪಂದ(ಡಬ್ಲ್ಯೂ.ಟಿ.ಓ.) ಒಪ್ಪಂದದಿಂದ ಹೊರಬರುವಂತೆ ಮತ್ತು ಕೃಷಿಯ ಕಾರ್ಪೋರೇಟೀಕರಣಕ್ಕೆ ತಡೆ ಹಾಕುವಂತೆ ಆಗ್ರಹಿಸುವುದು.

3. 'ಬಿಜೆಪಿಯನ್ನು ಸೋಲಿಸಿ, ಶಿಕ್ಷಿಸಿ'

ಸದ್ಯದಲ್ಲಿಯ ನಡೆಯಲಿರುವ ಹರ್ಯಾಣ, ಮಹಾರಾಷ್ಟ್ರ, ಜಾರ್ಖಂಡ್ ಮತ್ತು ಜಮ್ಮು–ಕಾಶ್ಮೀರಗಳ ಚುನಾವಣೆಯಲ್ಲಿ, ಕಾರ್ಮಿಕ–ಕೂಲಿಕಾರ ಮುಂತಾದ ವರ್ಗ ಸಂಘಟನೆಗಳು ಮತ್ತು ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳು ಮುಂತಾದ ಸಾಮೂಹಿಕ ಸಂಘಟನೆಗಳೊಂದಿಗೆ ಸೇರಿ ಎಸ್.ಕೆ.ಎಂ.ನ ಘೋಷಣೆಯಾದ 'ಬಿಜೆಪಿಯ ವಂಚನೆಯನ್ನು ಬಯಲು ಮಾಡಿ, ಬಿಜೆಪಿಯನ್ನು ವಿರೋಧಿಸಿ, ಶಿಕ್ಷಿಸಿ' ಎಂಬ ಕರೆಯ ಆಧಾರದಲ್ಲಿ ತೀವ್ರತರದ ಪ್ರಚಾರಾಂದೋಲನವನ್ನು ನಡೆಸುವುದು. ಈ ಆಂದೋಲನದ ಭಾಗವಾಗಿ ವಾಹನ ಜಾಥಾ, ಪಾದಯಾತ್ರೆ, ಮಹಾಪಂಚಾಯತ್‌ಗಳನ್ನು ಸಂಘಟಿಸುವುದು. ಸ್ಥಳೀಯ ಸಮಸ್ಯೆಗಳನ್ನು ಜೊತೆಗೂಡಿಸಿಕೊಳ್ಳುವುದು. ಬಡ–ಮಧ್ಯಮ–ಶ್ರೀಮಂತ ರೈತರನ್ನಲ್ಲದೇ, ಕಾರ್ಪೋರೇಟ್ ಲೂಟಿಯ ವಿರುದ್ಧ ನಿಂತಿರುವ ಶ್ರೀಮಂತ ರೈತರನ್ನು ಚಳುವಳಿಯಲ್ಲಿ ಒಳಗೊಳ್ಳುವುದು. ಪಂಜಾಬ್ ರಾಜ್ಯದಲ್ಲಿ ನೀರಿನ ಕೊರತೆ ವಿರುದ್ಧ, ಪಾಕಿಸ್ತಾನದೊಂದಿಗಿನ ವ್ಯಾಪಾರ ವಹಿವಾಟುಗಳಿಗೆ ಅಡ್ಡಿಗಳನ್ನು ನಿವಾರಿಸಬೇಕು, ಪರಸ್ಪರ ದೇಶಗಳ ನಡುವಿನ ಸಂಚಾರವನ್ನು ಸರಾಗಗೊಳಿಸಬೇಕು ಎಂಬ ಬೇಡಿಕೆಗಳ ಆಧಾರದಲ್ಲಿ ಹಲವು ಹಂತಗಳ ಚಳುವಳಿ ನಡೆಯಿಲಿದೆ.

ಈ ಪ್ರಶ್ನೆಗಳ ಆಧಾರದಲ್ಲಿ ಎಸ್.ಕೆ.ಎಂ. ಭಾಗವಾದ ನಾನಾ ರೈತ ಸಂಘಟನೆಗಳು, ಈ ಚಳುವಳಿಯ ಭಾಗಿಯಾಗಿರುವ ಕಾರ್ಮಿಕರ ಜಂಟಿ ಹೋರಾಟ ಸಮಿತಿಗಳು, ಕಾರ್ಮಿಕ–ಕೂಲಿಕಾರರ ಮುಂತಾದ ವರ್ಗ ಸಂಘಟನೆಗಳು, ನಾನಾ ಸಾಮೂಹಿಕ ಸಂಘಟನೆಗಳು, ವಿವಿಧ ಹಂತಗಳ ಎಸ್.ಕೆ.ಎಂ. ಸಮಿತಿಗಳು ಸಭೆ ಸೇರಿ ಹೋರಾಟದ ರೂಪುರೇಷೆಗಳ ಕುರಿತು ಚರ್ಚಿಸಿ ಉತ್ತಮ ಸಮನ್ವಯದೊಂದಿಗೆ ಬಲಿಷ್ಠ ಚಳುವಳಿ ರೂಪಿಸಲು ಈ ಕೂಡಲೇ ಕಾರ್ಯ ಪ್ರವೃತ್ತರಾಗಬೇಕಿದೆ. ರೈತ–ಕೂಲಿಕಾರ–ಕಾರ್ಮಿಕರ ಐಕ್ಯತೆಯ ಆಧಾರದ ಈ ಜನಚಳುವಳಿಯನ್ನು ಹಳ್ಳಿ ಹಳ್ಳಿಗಳ ಮಟ್ಟಕ್ಕೆ ಕೊಂಡೊಯ್ಯಬೇಕಿದೆ.

ರೈತ ಚಳುವಳಿಕಾರರು ದೆಹಲಿ ಪ್ರವೇಶಿಸದಂತೆ ತಡೆಗೋಡೆ ನಿರ್ಮಿಸಿ, ರಸ್ತೆಗಳಿಗೆ ಕಬ್ಬಿಣದ ಮುಳ್ಳು ಜಡಿದು, ಬೇಲಿಹಾಕಿ ನಿಷೇಧ–ನಿರ್ಬಂಧ ವಿಧಿಸಿದ ಕೇಂದ್ರ ಬಿಜೆಪಿ ಸರಕಾರದ ಎಲ್ಲ ದೌರ್ಜನ್ಯ–ದಬ್ಬಾಳಿಕೆ–ಕ್ರೂರ ಹಿಂಸೆಗಳನ್ನು ಎದುರಿಸಿ ಇಂದು ಹಲವು ರೈತ ಹೋರಾಟಗಾರರು ಪಾರ್ಲಿಮೆಂಟ್ ಪ್ರವೇಶಿಸಿದ್ದಾರೆ. ದೇಶದ ಜನಾಂದೋಲನ ಒಂದು ಹಂತದ ಮುನ್ನಡೆ ಸಾಧಿಸಿದೆ. ಈ ಮುನ್ನಡೆಯನ್ನು ಇನ್ನೂ ದೊಡ್ಡ ವಿಜಯದ ಕಡೆಗೆ ಕೊಂಡೊಯ್ಯಬೇಕಿದೆ.

ತ್ರಿಪುರಾದಲ್ಲಿ ದಾಳಿಗಳು ಪ್ರತಿಪಕ್ಷಗಳ ಸರ್ವನಾಶದ ಹುನ್ನಾರ: ಸಿಪಿಐ(ಎಂ) ಖಂಡನೆ

ಆಗಸ್ಟ್ 8, 2024 ರಂದು ತ್ರಿಪುರಾದಲ್ಲಿ ನಡೆಯಲಿರುವ ಮೂರು ಹಂತಗಳ ಪಂಚಾಯತ್ ಚುನಾವಣಾ ಪೂರ್ವದಲ್ಲಿ ಆಡಳಿತಾರೂಢ ಬಿಜೆಪಿಯು ಹಿಂಸಾತ್ಮಕ ದಾಳಿಗಳ ಸರಣಿಯನ್ನು ಹರಿಯಬಿಟ್ಟಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಯ ದಿನಾಂಕ ಘೋಷಣೆಯಾದಾಗಿನಿಂದಲೂ ಸಿಪಿಐ(ಎಂ) ಮತ್ತು ಪ್ರತಿಪಕ್ಷಗಳ ಅಭ್ಯರ್ಥಿಗಳು ಮತ್ತು ಅವರ ಬೆಂಬಲಿಗರ ಮೇಲೆ ಆಡಳಿತ ಪಕ್ಷಕ್ಕೆ ನಿಷ್ಠರಾಗಿರುವ ಗೂಂಡಾಗಳ ನಿರಂತರ ದಾಳಿಗಳು ನಡೆಯುತ್ತಿವೆ.



ಸಿಪಿಐ(ಎಂ) ಅಭ್ಯರ್ಥಿಗಳು ಮತ್ತು ಅವರ ಬೆಂಬಲಿಗರ ವಿರುದ್ಧ ಅಮಾನುಷ ಹಲ್ಲೆ ನಡೆಸುವ ಮೂಲಕ, ಅವರು ನಾಮಪತ್ರ ಸಲ್ಲಿಸದಂತೆ ಬಲವಂತವಾಗಿ ತಡೆಯಲಾಗಿದೆ. ಜುಲೈ 13 ರಂದು ಅಂತಹ ಒಂದು ಘಟನೆಯಲ್ಲಿ ದಕ್ಷಿಣ ತ್ರಿಪುರಾ ಜಿಲ್ಲಾ ಪರಿಷತ್ತಿನ ಸಿಪಿಐ(ಎಂ) ಅಭ್ಯರ್ಥಿ ಬಾದಲ್ ಶಿಲ್ ಅವರನ್ನು ಬಿಜೆಪಿ ಗೂಂಡಾಗಳು ಕೊಂದರು. ಈ ಕ್ರೂರ ದಾಳಿಯ ಪರಿಣಾಮವಾಗಿ ಪಕ್ಷದ ನೂರಾರು ಮುಖಂಡರು ಮತ್ತು ಕಾರ್ಯಕರ್ತರು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ವಿವಿಧ ಸ್ಥಳಗಳಲ್ಲಿ ಚುನಾವಣಾ ಅಧಿಕಾರಿಗಳು ಕರೆದಿದ್ದ ಸರ್ವಪಕ್ಷ ಸಭೆಗಳಲ್ಲಿ ಭಾಗವಹಿಸದಂತೆ ವಿರೋಧ ಪಕ್ಷದ ನಾಯಕರನ್ನು ಬಲವಂತವಾಗಿ ತಡೆಯಲಾಯಿತು. ನಾಮಪತ್ರ ಸಲ್ಲಿಸಲು ಪ್ರಯತ್ನಿಸುತ್ತಿರುವ ಯಾವುದೇ ವಿರೋಧ ಪಕ್ಷದ ಅಭ್ಯರ್ಥಿಯನ್ನು ಕೊಲ್ಲುವುದಾಗಿ ಬಿಜೆಪಿ ನಾಯಕರು ಬೆದರಿಕೆ ಹಾಕಿದ್ದಾರೆ. ಪ್ರತಿಪಕ್ಷ ನಾಯಕರನ್ನು ಹೊತ್ತೊಯ್ಯುತ್ತಿದ್ದ ವಾಹನಗಳ ಮೇಲೆ ಪೊಲೀಸ್ ಸಿಬ್ಬಂದಿಯ ಸಮ್ಮುಖದಲ್ಲಿ ದಾಳಿ ಮಾಡಲಾಗಿದೆ.

ಪಕ್ಷದ ಪ್ರಮುಖ ನಾಯಕರ ಮೇಲೆ ಹಲವು ಕಡೆ ಹಲ್ಲೆ ನಡೆಸಲಾಗಿದೆ. ಸಿಪಿಐ(ಎಂ) ಮೆರವಣಿಗೆಗಳ ಮೇಲೆ ಕಲ್ಲು ತೂರಾಟ ಮತ್ತು ಸಿಪಿಐ(ಎಂ) ಮುಖಂಡರ ನಿವಾಸಗಳ ಮೇಲೆ ಬಾಂಬ್ ಎಸೆದ ಹಲವಾರು ಘಟನೆಗಳು ರಾಜ್ಯದಲ್ಲಿ ವರದಿಯಾಗಿವೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ರಾಜ್ಯ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಗೆದ್ದಾಗಿನಿಂದ ಬಿಜೆಪಿ ರಾಜ್ಯದಲ್ಲಿ ಪ್ರತಿಪಕ್ಷಗಳನ್ನು ಸರ್ವನಾಶ ಮಾಡುವ ತನ್ನ ಅಜೆಂಡಾವನ್ನು ಗುರಿಯಿಟ್ಟು ಅನುಸರಿಸುತ್ತಿದೆ. 2018 ರಿಂದ ಪ್ರಾರಂಭವಾದ ಈ ಹಂತಕ ದಾಳಿಗಳಲ್ಲಿ, ಪಕ್ಷದ 30 ಸದಸ್ಯರು ಮತ್ತು ಕಾರ್ಯಕರ್ತರು ಕೊಲ್ಲಲ್ಪಟ್ಟಿದ್ದಾರೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಈ ಬೆದರಿಸುವ ತಂತ್ರಗಳಿಂದಾಗಿ ಇಡೀ ರಾಜ್ಯದಲ್ಲಿ ಭಯೋತ್ಪಾದನೆಯ ವಾತಾವರಣ ಸೃಷ್ಟಿಯಾಗಲು ಕಾರಣವಾಗಿದ್ದು, ಚುನಾವಣೆಯನ್ನು ಮುಕ್ತ ಮತ್ತು ನ್ಯಾಯಯುತವಾಗಿ ನಡೆಸುವುದರ ಬಗ್ಗೆ ತೀವ್ರ ಆತಂಕಗಳನ್ನು ಹರಡಿದೆ ಎಂದು ಹೇಳಿದೆ.

ಎಲ್ಲಾ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಮತ್ತು ಮುಕ್ತ ಮತ್ತು ನ್ಯಾಯಸಮ್ಮತವಾಗಿ ಚುನಾವಣೆಗಳು ನಡೆಯುವಂತೆ ನೋಡಿಕೊಳ್ಳಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಅದು ಒತ್ತಾಯಿಸಿದೆ.

ಹೈಕೋರ್ಟಿಗೆ ಅರ್ಜಿ

ಮುಂಬರುವ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ತಮ್ಮ ಅಭ್ಯರ್ಥಿಗಳಿಗೆ ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸುವಂತೆ ಆಗ್ರಹಿಸಿ ಸಿಪಿಐ(ಎಂ) ಸಲ್ಲಿಸಿರುವ ಅರ್ಜಿಯನ್ನು ತ್ರಿಪುರಾ ಹೈಕೋರ್ಟ್ ವಿಚಾರಣೆಗೆ ಸ್ವೀಕರಿಸಿದ್ದು ಜುಲೈ 18ರಂದು ವಿಚಾರಣೆ ನಡೆಯಲಿದೆ ಎಂದು ಜುಲೈ 17 ರಂದು ಅಗರ್ತಲಾದಲ್ಲಿ ಪತ್ರಿಕಾಗೋಷ್ಠಿಯಲ್ಲಿ ತ್ರಿಪುರಾದಲ್ಲಿ ಎಡರಂಗದ ಸಂಚಾಲಕರಾದ ನಾರಾಯಣ್ ಕರ್ ತಿಳಿಸಿದ್ದಾರೆ. ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವಂತೆ ಬಲವಂತ ಮಾಡುತ್ತಿರುವುದರಿಂದಾಗಿ ಮತ್ತು ನಾಮಪತ್ರ ಸಲ್ಲಿಸಿದ ನಂತರ ಒಬ್ಬ ಅಭ್ಯರ್ಥಿಯ ಮೇಲೆ ಹಲ್ಲೆ ನಡೆಸಲಾಗಿದೆಯಾದ್ದರಿಂದ ಈ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದು ಕರ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಮುಖಂಡರುಗಳಾದ ಮಾಣಿಕ್ ಡೇ, ನರೇಶ್ ಜಮಾತಿಯಾ, ಮತ್ತು ಕಾಂ. ರಾಧಾಚರಣ್ ದೆಬ್ ಬರ್ಮ ಭಾಗವಹಿಸಿದ್ದರು.



ಸಿಪಿಐ(ಎಂ) ತನ್ನ ಅರ್ಜಿಯಲ್ಲಿ ನಾಲ್ಕು ಪ್ರಮುಖ ಬೇಡಿಕೆಗಳನ್ನು ಪಟ್ಟಿ ಮಾಡಿದೆ:

1. ಪಂಚಾಯತ್ ಚುನಾವಣೆಗಳಿಗೆ ಆನ್‌ಲೈನ್‌ನಲ್ಲಿ ನಾಮಪತ್ರ ಸಲ್ಲಿಸುವುದನ್ನು ಆರಂಭಿಸಬೇಕು.
2. ಜಿಲ್ಲಾ ಕೇಂದ್ರಗಳಲ್ಲಿ ನಾಮಪತ್ರಗಳನ್ನು ಸಲ್ಲಿಸುವಂತೆ ಅನುವು ಮಾಡಿಕೊಡಲು ಒಂದು ಹೆಚ್ಚುವರಿ ಆರ್.ಒ. ತೆರೆಯಬೇಕು.
3. ನಾಮಪತ್ರ ಸಲ್ಲಿಸಲು ಕಾಲಮಿತಿಯನ್ನು ವಿಸ್ತರಿಸಬೇಕು.
4. ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಯಾವುದೇ ತೊಂದರೆಯಿಲ್ಲದೆ ಸಲ್ಲಿಸಲು ಸಾಧ್ಯವಾಗುವಂತೆ ಪ್ರವೇಶ ರಸ್ತೆ ಮತ್ತು ಬ್ಲಾಕ್ ಆಫೀಸ್ ಪ್ರದೇಶವನ್ನು ತೆರವುಗೊಳಿಸಬೇಕು.

ಮುಸ್ಲಿಂ ಮಹಿಳೆಯ ಜೀವನಾಂಶ ಕುರಿತ ಸುಪ್ರಿಂ ಕೋರ್ಟ್ ತೀರ್ಪಿಗೆ ಎ.ಐ.ಡಿ.ಡಬ್ಲ್ಯು.ಎ. ಸ್ವಾಗತ

“ಸೆಕ್ಷನ್ 125ರ ಕೆಲವು ಲೋಪದೋಷಗಳನ್ನು ನ್ಯಾಯಾಲಯ ಪರಿಶೀಲಿಸಬೇಕಾಗಿದೆ”

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ), ವಿಚ್ಛೇದಿತ ಮುಸ್ಲಿಂ ಮಹಿಳೆ ಸಿ.ಆರ್.ಪಿ.ಸಿ. ಯ ಸೆಕ್ಷನ್ 125ರ ಅಡಿಯಲ್ಲಿ ಜೀವನಾಂಶವನ್ನು ಪಡೆಯಲು ಅರ್ಹರಾಗಿರುತ್ತಾರೆ ಎಂಬ ಇತ್ತೀಚಿನ ಸುಪ್ರೀಂ ಕೋರ್ಟ್ ತೀರ್ಪನ್ನು ಸ್ವಾಗತಿಸುತ್ತಾ, ಅದೇ ಸಮಯದಲ್ಲಿ ಈ ಸೆಕ್ಷನ್ ಅಡಿಯಲ್ಲಿ ಇರುವ ಕೆಲವು "ಲೋಪದೋಷಗಳು" ಮತ್ತು "ಪ್ರತಿಗಾಮಿ ನಿಬಂಧನೆಗಳನ್ನು" ಪರಿಶೀಲಿಸಬೇಕಾದ ಅಗತ್ಯವಿದೆ ಎಂದು ಹೇಳಿದೆ.

ಜುಲೈ 11 ರಂದು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಅಗಸ್ಟಿನ್ ಜಾರ್ಜ್ ಮಸಿಹ್ ಅವರ ಸುಪ್ರೀಂ ಕೋರ್ಟ್ ಪೀಠವು ಮಹಿಳೆಯರು ಯಾವುದೇ ಪಂಥಕ್ಕೆ ಸೇರಿದ್ದರೂ, ವಿವಿಧ ಸಮುದಾಯಗಳ ವೈಯಕ್ತಿಕ ಕಾನೂನುಗಳು ಅಥವಾ ಮುಸ್ಲಿಂ ಮಹಿಳೆಯರು (ವಿಚ್ಛೇದನದ ಮೇಲಿನ ಹಕ್ಕುಗಳ ರಕ್ಷಣೆ) ಕಾನೂನಿನ ಹೊರತಾಗಿಯೂ, ಸಿ.ಆರ್.ಪಿ.ಸಿ.(ಕ್ರಿಮಿನಲ್ ಪ್ರೊಸಿಜರ್ ಕೋಡ್) ಸೆಕ್ಷನ್ 125 ರ ಅಡಿಯಲ್ಲಿ ಜೀವನಾಂಶಕ್ಕೆ ಅರ್ಹರಾಗುತ್ತಾರೆ ಎಂದು ತೀರ್ಪು ನೀಡಿದೆ. ಜೀವನಾಂಶ ಪಡೆಯಲು ಯಾವ ಕಾನೂನನ್ನು ಆಶ್ರಯಿಸಬೇಕು ಎಂಬುದನ್ನು ಮುಸ್ಲಿಂ ಮಹಿಳೆಯರು ನಿರ್ಧರಿಸಬೇಕು ಎಂದೂ ಈ ಸುಪ್ರಿಂ ಕೋರ್ಟ್ ಪೀಠ ಹೇಳಿತ್ತು.

ಈ ಸೆಕ್ಷನ್ 125ರ ಒಂದು ನಿಬಂಧನೆಯಲ್ಲಿ “ಪತಿಯು ತನ್ನ ತೊರೆದುಹೋದ ಪತ್ನಿಯೊಂದಿಗೆ ವಾಸಿಸಲು ಮುಂದಾದರೆ ಮತ್ತು ಅವಳು ನಿರಾಕರಿಸಿದರೆ”, ‘ನಿರಾಕರಣೆಯ ಕಾರಣಗಳನ್ನು’ ಪರಿಗಣಿಸುವುದನ್ನು” ನ್ಯಾಯಾಲಯದ ವಿವೇಚನೆಗೆ ಬಿಡಲಾಗಿದೆ. ಅದೇ ರೀತಿ, ಪರಸ್ಪರ ಒಪ್ಪಿಗೆಯಿಂದ ಪ್ರತ್ಯೇಕವಾಗಿ ವಾಸಿಸುವ ಹೆಂಡತಿ ಅಥವಾ ಸಮರ್ಪಕ ಕಾರಣವಿಲ್ಲದೆ ಪತಿಯೊಂದಿಗೆ ವಾಸಿಸಲು ನಿರಾಕರಿಸುವ ಹೆಂಡತಿ ಜೀವನಾಂಶಕ್ಕೆ ಅರ್ಹರಲ್ಲ ಎಂದು ಈ ಸೆಕ್ಷನ್ ಹೇಳುತ್ತದೆ.

ಇದನ್ನು ಎತ್ತಿ ತೋರಿಸುತ್ತಾ, ಎ.ಐ.ಡಿ.ಡಬ್ಲ್ಯು.ಎ. ಭಾರತದಂತಹ ಪಿತೃಪ್ರಧಾನ ಸಮಾಜದಲ್ಲಿ, “ಈ ಸಮರ್ಪಕ ಕಾರಣಗಳು ಅಸ್ತಿತ್ವದಲ್ಲಿವೆಯೇ ಎಂದು ಸಾಬೀತುಪಡಿಸುವುದು ಯಾವಾಗಲೂ ಕಷ್ಟಕರವಾಗಿದೆ. ಅಲ್ಲದೆ ಜೀವನಾಂಶದ ಹಕ್ಕು ಕುಟುಂಬದೊಳಗೆ ಹೆಂಡತಿಯ ಕೊಡುಗೆಯನ್ನು ಆಧರಿಸಿದೆ ಮತ್ತು ಅಂತಹ ಹಕ್ಕನ್ನು ಅವಳು ತೊರೆದುಹೋದ ನಂತರ ಅಥವಾ ಮದುವೆ ಮುರಿದುಹೋದ ನಂತರ ಆಕೆಯ ನಡವಳಿಕೆಯ ಬಗ್ಗೆ ಆರೋಪಗಳಿಂದ ನಿರರ್ಥಕಗೊಳ್ಳುವುದಿಲ್ಲ. ಆದಾಗ್ಯೂ, ಈ ನಿಬಂಧನೆಗಳನ್ನು ಯಾವುದೇ ನ್ಯಾಯಾಲಯವು ಎಂದಿಗೂ ವಿಮರ್ಶಿಸಿಲ್ಲ” ಎಂದು ಅಭಿಪ್ರಾಯ ಪಟ್ಟಿದೆ.

ಜೀವನಾಂಶ ಮೊತ್ತದ ಅಸಮರ್ಪಕತೆಯ ಬಗ್ಗೆ ಅಥವಾ ಮಹಿಳೆಯರು ಕೌಟುಂಬಿಕ ನ್ಯಾಯಾಲಯದಿಂದ ಪಡೆದ ತಿಂಗಳಿಗೆ 20,000ರೂ. ವನ್ನು ಮತ್ತೆ ನೀಡುವ ಬಗ್ಗೆ ಕೂಡ ನ್ಯಾಯಾಲಯವು ಗಮನಹರಿಸಿಲ್ಲ ಎಂದಿರುವ ಎ.ಐ.ಡಿ.ಡಬ್ಲ್ಯು.ಎ. "ಸಣ್ಣ ಅಸಮರ್ಪಕ ಮೊತ್ತವನ್ನು ನೀಡಿದಲ್ಲಿ ಜೀವನಾಂಶದ ಹಕ್ಕು ಮತ್ತು ಅರ್ಹತೆಯು ಅರ್ಥಹೀನವಾಗುತ್ತದೆ. ಎಲ್ಲಾ ಮತ–ಸಂಪ್ರದಾಯಗಳ ಮಹಿಳೆಯರು ಈ ಅಸಮರ್ಪಕತೆ ಮತ್ತು ನ್ಯಾಯಾಲಯಗಳಿಂದ ಜೀವನಾಂಶ ನೀಡಿಕೆಗಳ ಜಾರಿ ಕೊರತೆಯಿಂದ ಬಳಲುತ್ತಿದ್ದಾರೆ" ಎಂದು ಹೇಳಿದೆ.

"ಜೀವನಾಂಶ ಹಕ್ಕು ತೊರೆದುಹೋದ ಅಥವಾ ಬೇರ್ಪಟ್ಟ ಮಹಿಳೆಯ ನಿರ್ವಹಣೆಗೆ ಸಾಕಾಗುವುದಿಲ್ಲ. ಸರ್ಕಾರವು ಮದುವೆಯಲ್ಲಿ ಮಹಿಳೆಯರನ್ನು ಸಮಾನ ಪಾಲುದಾರರೆಂದು ಮತ್ತು ವೈವಾಹಿಕ ಮನೆಯ ಆಸ್ತಿಗಳಿಗೆ, ಅದು ಅಸ್ತಿತ್ವದಲ್ಲಿ ಇರುವಲ್ಲಿ, ಅರ್ಧದಷ್ಟು ಆಸ್ತಿಗಳಿಗೆ ಅರ್ಹರಾಗಿರುತ್ತಾರೆ ಎಂದು ಮಾನ್ಯ ಮಾಡಬೇಕಾದ ಸಮಯವೀಗ ಬಂದಿದೆ” ಎಂದೂ ಎ.ಐ.ಡಿ.ಡಬ್ಲ್ಯು.ಎ. ಹೇಳಿದೆ.

ಲೋಕಸಭೆ ಚುನಾವಣೆಯ ಫಲಿತಾಂಶಗಳ ನಂತರ ಹಲವು ರಾಜ್ಯಗಳಲ್ಲಿ ‘ಮಾಬ್ ಲಿಂಚಿಂಗ್’ ಸರಣಿ–ಎನ್‌ಎಪಿಎಂ ಖಂಡನೆ

ಲೋಕಸಭೆ ಚುನಾವಣೆಯ ನಂತರ ದೇಶಾದ್ಯಂತ ನಡೆಯುತ್ತಿರುವ ಕೋಮುವಾದಿ ದಾಳಿಗಳು ಮತ್ತು ‘ಜನಜಂಗುಳಿ ಹತ್ಯೆ’ (ಮಾಬ್ ಲಿಂಚಿಂಗ್)ಗಳನ್ನು ‘ರಾಷ್ಟ್ರೀಯ ಜನಾಂದೋಲನಗಳ ಮೈತ್ರಿಕೂಟ’(ಎನ್‌ಎಪಿಎಂ) ಖಂಡಿಸಿದೆ. ಅಂತಹ ಎಲ್ಲಾ ಘಟನೆಗಳ ಬಗ್ಗೆ ಮುಕ್ತ ಮತ್ತು ನ್ಯಾಯಯುತ ತನಿಖೆ ನಡೆಸಬೇಕು ಮತ್ತು ಅಂತಹ ಘಟನೆಗಳನ್ನು ವರದಿ ಮಾಡಿದ ಪತ್ರಕರ್ತರ ವಿರುದ್ಧದ ಎಫ್‌ಐಆರ್‌ಗಳನ್ನು ತಕ್ಷಣವೇ ಹಿಂಪಡೆಯಬೇಕು ಎಂದು ಅದು ಒತ್ತಾಯಿಸಿದೆ.

ಉತ್ತರಪ್ರದೇಶ, ಛತ್ತೀಸ್‌ಗಢ, ಪಶ್ಚಿಮಬಂಗಾಳ, ಗುಜರಾತ್, ಮಧ್ಯಪ್ರದೇಶ ಮತ್ತು ಜಾರ್ಖಂಡ್ ನಂತಹ ವಿವಿಧ ರಾಜ್ಯಗಳಲ್ಲಿ 13ಕ್ಕೂ ಹೆಚ್ಚು ಜನಜಂಗುಳಿ ಹತ್ಯೆ ಪ್ರಕರಣಗಳ ವರದಿಗಳು ಬಂದಿವೆ.

ಇಂತಹ ಘಟನೆಗಳಲ್ಲಿ “ಅಪರಾಧ ಎಸಗಿದವರನ್ನು ರಕ್ಷಿಸುವಲ್ಲಿ ಮತ್ತು ಧಾರ್ಮಿಕ ಅಲ್ಪಸಂಖ್ಯಾತರು ಹಾಗೂ ಜಾತಿ–ದಮನಕ್ಕೆ ಒಳಗಾದ ಜನರನ್ನು ಗುರಿಯಾಗಿಸುವಲ್ಲಿ ರಾಜ್ಯ ಆಡಳಿತ ಮತ್ತು ಪೊಲೀಸರ ಶಾಮೀಲಿನತ್ತ ಬೊಟ್ಟು ಮಾಡುತ್ತ, ಅದನ್ನು ಖಂಡಿಸ ಬಯಸುತ್ತೇವೆ. ಕ್ಷಿಪ್ರ ಕ್ರಮ ಕೈಗೊಳ್ಳುವ ಬದಲು, ಉತ್ತರ ಪ್ರದೇಶ ಸರ್ಕಾರವು ಪತ್ರಕರ್ತರಾದ ಝೂಕಿರ್ ಅಲಿ ತ್ಯಾಗಿ, ವಾಸಿಂ ಅಕ್ರಮ್ ತ್ಯಾಗಿ, ಆಸಿಫ್ ರಾಣಾ, ಸೈಫ್ ಅಲಹಬಾದಿ ಮತ್ತು ಅಹ್ಮದ್ ರಝಾ ಖಾನ್ ಅವರ ವಿರುದ್ಧ ದಮನ ಕ್ರಮಕ್ಕೆ ಇಳಿದಿರುವ ಬಗ್ಗೆ ಮತ್ತು ಈ ಘಟನೆಗಳನ್ನು ವರದಿ ಮಾಡುವ/ ಹಂಚಿಕೊಳ್ಳುವ ಕೆಲಸವನ್ನು ಮಾಡಿದ್ದಕ್ಕಾಗಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿರುವುದನ್ನು ಕಂಡು ದಿಗಿಲಾಗಿದೆ” ಎಂದು ಎನ್‌ಎಪಿಎಂನ ಹೇಳಿಕೆ ಆಘಾತ ವ್ಯಕ್ತಪಡಿಸಿದೆ.

ಕೋಮು ದಾಳಿಗಳ ವಿರುದ್ಧ ಒಗ್ಗಟ್ಟಿನ ಪ್ರತಿರೋಧಕ್ಕೆ ಕರೆ ನೀಡುತ್ತಾ, ಎನ್‌ಎಪಿಎಂ, ಜನಜಂಗುಳಿ–ಹತ್ಯೆ ಮತ್ತು ಕೋಮು ಹಿಂಸಾಚಾರದ ಎಲ್ಲಾ ಪ್ರಕರಣಗಳ ಉನ್ನತ ಮಟ್ಟದ ಮೇಲ್ವಿಚಾರಣೆಯ ಅಗತ್ಯವಿದೆ ಎಂದು ಹೇಳಿದೆ ಮತ್ತು "ದ್ವೇಷ ಹರಡುವ, ಕೋಮು ಉದ್ವಿಗ್ನತೆಗಳಿಗೆ ಮತ್ತು ಜನಜಂಗುಳಿ ಹತ್ಯೆಗಳಿಗೆ ಉತ್ತೇಜನ ನೀಡುವ ಮಾಧ್ಯಮ ಗುಂಪುಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು” ಎಂದೂ ಆಗ್ರಹಿಸಿದೆ.

ಭಾರತದ ವ್ಯೂಹಾತ್ಮಕ ಸ್ವಾಯತ್ತೆ ಸಹಿಸದ ಅಮೆರಿಕ

ಪ್ರಕಾಶ್ ಕಾರತ್

ಪ್ರಧಾನಿ ನರೇಂದ್ರ ಮೋದಿ ಜುಲೈ 9–10ರಂದು ಮಾಸ್ಕೋಗೆ ನೀಡಿದ ಭೇಟಿ, ಭಾರತ ಮತ್ತು ರಷ್ಯಾ ನಡುವಿನ ವಾರ್ಷಿಕ ಶೃಂಗಸಭೆಗಳ ಪುನರುಜ್ಜೀವವನ್ನು ಸಂಕೇತಿಸುತ್ತದೆ. ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುತಿನ್ 2021ರಲ್ಲಿ ಭಾರತಕ್ಕೆ ಬಂದಿದ್ದಾಗ ಹಿಂದಿನ ಶೃಂಗಸಭೆ ನಡೆದಿತ್ತು. ಭೇಟಿಯು ಭಾರತ ಮತ್ತು ರಷ್ಯಾ ನಡುವಿನ ವ್ಯೂಹಾತ್ಮಕ ಪಾಲುದಾರಿಕೆಯನ್ನು ಇನ್ನಷ್ಟು ಬಲಪಡಿಸಲು ನೆರವಾಗಿತ್ತು.

ಮಾಸ್ಕೋ ಮಾತುಕತೆಗಳ ನಂತರ ಹೊರಡಿಸಲಾದ ಸಂಯುಕ್ತ ದೂರದೃಷ್ಟಿ ಹೇಳಿಕೆಯು, ಹಿಂದಿನ ಸಭೆಗಳಂತಲ್ಲದೆ ಆರ್ಥಿಕ ಸಹಕಾರ ಮತ್ತು ವಾಣಿಜ್ಯದ ಮೇಲೆ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಿದೆ. 2030ರ ಹೊತ್ತಿಗೆ ವಾಣಿಜ್ಯ ವ್ಯವಹಾರವನ್ನು 100 ಶತಕೋಟಿ ಡಾಲರ್‌ಗೆ ಏರಿಸುವ ನಿರ್ಧಾರವನ್ನು ಪ್ರಕಟಿಸಲಾಗಿದೆ. ಪಾಶ್ಚಿಮಾತ್ಯ ದೇಶಗಳ ನಿರ್ಬಂಧದ ಹಿನ್ನೆಲೆಯಲ್ಲಿ, ರಿಯಾಯಿತಿ ದರದಲ್ಲಿ ರಷ್ಯಾದಿಂದ ಭಾರತ ದೊಡ್ಡ ಪ್ರಮಾಣದಲ್ಲಿ ತೈಲವನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದ ಇದೊಂದು ಕಾರ್ಯಸಾಧುವಾದ ಗುರಿಯಾಗಿದೆ.

ಮಿಲಿಟರಿ ಮತ್ತು ಮಿಲಿಟರಿ ತಾಂತ್ರಿಕ ಸಹಕಾರದ ಅಂತರ್ ಸರಕಾರಿ ಆಯೋಗದ ಮುಂದಿನ ಸಭೆಯನ್ನು ಈ ವರ್ಷದ ದ್ವಿತೀಯಾರ್ಧದೊಳಗೆ ಮಾಸ್ಕೋದಲ್ಲಿ ನಡೆಸುವುದಾಗಿಯೂ ಹೇಳಿಕೆ ಘೋಷಿಸಿದೆ. ಮಿಲಿಟರಿ ಸಹಕಾರವನ್ನು ಜಂಟಿ ಸಂಶೋಧನೆ ಮತ್ತು ಅಭಿವೃದ್ಧಿ, ಸಹ–ಅಭಿವೃದ್ಧಿ ಮತ್ತು ಮುಂದುವರಿದ ರಕ್ಷಣಾ ತಂತ್ರಜ್ಞಾನ ಮತ್ತು ವ್ಯವಸ್ಥೆಗಳ ಜಂಟಿ ಉತ್ಪಾದನೆಗೆ ಗಮನ ಹರಿಸಲಾಗುತ್ತದೆ (ರೀಓರಿಯೆಂಟ್ ಮಾಡಲಾಗುತ್ತದೆ). ಮಿಲಿಟರಿ ಸಲಕರಣೆಗಳ ಖರೀದಿಯಲ್ಲಿ ರಷ್ಯಾದೊಂದಿಗೆ ಭಾರತದ ನಿಕಟ ಸಂಬಂಧ ಹಾಗೂ ಸಹ–ಉತ್ಪಾದನೆಯತ್ತ ಸಾಗುತ್ತಿರುವ ಹಿನ್ನೆಲೆಯಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ.

ಮಾಸ್ಕೋಗೆ ಮೋದಿ ಭೇಟಿ ಮತ್ತು ಪುತಿನ್ ಜೊತೆಗಿನ ಶೃಂಗಸಭೆಯ ಬಗ್ಗೆ ಅಮೆರಿಕ ಮತ್ತು ಜೋ ಬೈಡೆನ್ ಆಡಳಿತದ ವಕ್ತಾರರು ಟೀಕಿಸಿದ್ದಾರೆ. 'ರಷ್ಯಾವನ್ನು ಒಂದು ದೀರ್ಘಕಾಲೀನ ನಂಬಲರ್ಹ ಪಾಲುದಾರ ಎಂದು ನಂಬುವುದು ಒಳ್ಳೆಯದಲ್ಲ' ಎಂದು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸಲಿವಾನ್ ಹೇಳಿದ್ದಾರೆ. ಮೋದಿ ಮಾಸ್ಕೋ ಭೇಟಿಯ ಸಮಯದಲ್ಲೇ ವಾಷಿಂಗ್ಟನ್‌ನಲ್ಲಿ ನ್ಯಾಟೋ ಕೂಟದ ಶೃಂಗಸಭೆ ನಡೆದಿದ್ದರಿಂದ ಅಮೆರಿಕಕ್ಕೆ ವಿಶೇಷವಾಗಿ ಇರಿಸುಮುರಿಸು ಉಂಟಾಗಿದೆ. ಯಾಕೆಂದರೆ, ಯೂಕ್ರೇನ್ ಯುದ್ಧದ ವಿಚಾರದಲ್ಲಿ ರಷ್ಯಾವನ್ನು ಒಟ್ಟಾಗಿ ಎದುರಿಸುವುದು ಹಾಗೂ ರಷ್ಯಾ ಯಾವ ರೀತಿಯಲ್ಲಿ ಜಾಗತಿಕವಾಗಿ ಪ್ರತ್ಯೇಕಗೊಂಡಿದೆ ಎಂದು ತೋರಿಸುವುದು ನ್ಯಾಟೋ ಶೃಂಗದ ಉದ್ದೇಶವಾಗಿತ್ತು. ಆದರೆ, ಮೋದಿಯವರ ಭೇಟಿಯಿಂದಾಗಿ ರಷ್ಯಾವನ್ನು ಆ ರೀತಿಯಲ್ಲಿ ಬಿಂಬಿಸುವ ಯತ್ನ ಭಂಗಗೊಂಡಿದೆ.

ಭಾರತ ಈಗ ತನ್ನ ಒಂದು ವ್ಯೂಹಾತ್ಮಕ ಪಾಲುದಾರ ಎಂದು ಅಮೆರಿಕ ಬಿಂಬಿಸುತ್ತಿದ್ದು ಅದೇ ರೀತಿಯಲ್ಲಿ ವರ್ತಿಸುವ ನಿರೀಕ್ಷೆಯಿದೆ.

"ಭಾರತ–ಅಮೆರಿಕ ರಕ್ಷಣಾ ಪಾಲುದಾರಿಕೆಯು ಜಗತ್ತಿನಲ್ಲೇ ಹೆಚ್ಚು ಪರಿಣಾಮ ಬೀರುವಂಥ ಭಾಗಿದಾರಿಕೆಯಾಗಿದೆ" ಎಂದು ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿರುವ ಎರಿಕ್ ಗಾರ್ಸೆಟಿ ಎಚ್ಚರಿಕೆ ನೀಡಿದ್ದಾರೆ. ಆದರೆ, 'ಈ ಬಾಂಧವ್ಯವನ್ನು ಹಗುರವಾಗಿ ತೆಗೆದುಕೊಳ್ಳಬೇಡಿ' ಎಂದಿದ್ದಾರೆ. 'ಭಾರತ ತನ್ನ ವ್ಯೂಹಾತ್ಮಕ ಸ್ವಾಯತ್ತೆಯನ್ನು ಇಷ್ಟಪಡುತ್ತದೆ ಎನ್ನುವುದು ನನಗೆ ಗೊತ್ತಿದೆ. ಆದರೆ ಸಂಘರ್ಷದ ಸಮಯದಲ್ಲಿ ವ್ಯೂಹಾತ್ಮಕ ಸ್ವಾಯತ್ತೆಯಂಥ ಯಾವುದೇ ವಿಚಾರ ಲೆಕ್ಕಕ್ಕೆ ಬರುವುದಿಲ್ಲ' ಎಂದೂ ಬೇರೊಂದು ಹೇಳಿಕೆಯಲ್ಲಿ ಎರಿಕ್ ಹೇಳಿದ್ದಾರೆ.

ಅಮೆರಿಕದೊಂದಿಗೆ ವ್ಯೂಹಾತ್ಮಕ ಮತ್ತು ರಕ್ಷಣಾ ಸಂಬಂಧಗಳ ವಿಚಾರದಲ್ಲಿ ತನಗೆ ವಿವಿಧ ಬದ್ಧತೆಗಳಿವೆ ಎಂದು ಅಮೆರಿಕವು ಮೋದಿ ಸರಕಾರಕ್ಕೆ ಎಚ್ಚರಿಕೆ ನೀಡುತ್ತಿದ್ದು ಅದಕ್ಕೆ ತಕ್ಕದಾಗಿ ನಡೆದುಕೊಳ್ಳಲಿದೆ. 2003ರಲ್ಲಿ ಇರಾಕ್ ಮೇಲೆ ಅಮೆರಿಕ ಆಕ್ರಮಣ ಮಾಡಿದ ಕಾಲದಂತಲ್ಲದೆ ಹಾಗೂ ಅಮೆರಿಕದ ಆ ಮಿಲಿಟರಿ ಕಾರ್ಯಾಚರಣೆಯನ್ನು ಭಾರತ ಟೀಕಿಸಿದಂತೆ ಆಗಿರದೆ ಈಗ ಕಾಲ ಬದಲಾಗಿದೆ. ಆ ಕಾಲದಲ್ಲಿ ಅಮೆರಿಕದೊಂದಿಗೆ ಭಾರತ ನಾನಾ ಮಿಲಿಟರಿ ಮತ್ತು ವ್ಯೂಹಾತ್ಮಕ ಒಪ್ಪಂದಗಳನ್ನು ಮಾಡಿಕೊಂಡಿರಲಿಲ್ಲ. ಆಗಿನ್ನೂ ಅದು ಅಮೆರಿಕದ ವ್ಯೂಹಾತ್ಮಕ ಪಾಲುದಾರ ಆಗಿರಲಿಲ್ಲ. ಈಗ ಅಮೆರಿಕ ಮತ್ತು ನ್ಯಾಟೋ ಕೂಟ ನೆರವು ನೀಡುತ್ತಿರುವ ಯೂಕ್ರೇನ್ ಸಂಘರ್ಷದಂಥ ವಿಚಾರದಲ್ಲಿ ಭಾರತ ತನ್ನ ವ್ಯೂಹಾತ್ಮಕ ಸ್ವಾಯತ್ತೆಯನ್ನು ಚಲಾಯಿಸುವಂತಿಲ್ಲ ಎಂದು ಈಗ ಅಮೆರಿಕನ್ನರು ಹೇಳುತ್ತಾರೆ. ಈ ಸನ್ನಿವೇಶದಲ್ಲಿ ಮೋದಿ ಸರಕಾರಕ್ಕೆ ಕಲಿಯಲು ಕೆಲವು ಪಾಠಗಳಿವೆ. ಭೇಟಿಯ ಬೆನ್ನಲ್ಲೇ ಅಮೆರಿಕದ ರಾಷ್ಟ್ರೀಯ ಸಲಹೆಗಾರ ಸಲಿವಾನ್ ಭಾರತದ ಎನ್‌ಎಸ್‌ಎ ಅಜಿತ್ ದೋವಲ್‌ರೊಂದಿಗೆ ಮಾತನಾಡಿದರು. ಕ್ವಾಡ್ ವಿದೇಶಾಂಗ ಸಚಿವರ ಸಭೆಯನ್ನು ಜುಲೈ ಅಂತ್ಯದೊಳಗೆ ಜಪಾನ್‌ನಲ್ಲಿ ನಡೆಸುವ ಹಾಗೂ ವರ್ಷಾಂತ್ಯದ ವೇಳೆ ಕ್ವಾಡ್ ರಾಷ್ಟ್ರಗಳ ನಾಯಕರ ಶೃಂಗಸಭೆಯನ್ನು ನಡೆಸುವ ವಿಷಯವನ್ನು ಉಭಯ ಎನ್‌ಎಸ್‌ಎಗಳು ಚರ್ಚಿಸಿದರೆಂದು ವರದಿಯಾಗಿದೆ. ಭಾರತ–ಪೆಸಿಫಿಕ್ ವಲಯದ ಅಮೆರಿಕ ನೇತೃತ್ವದ ವೇದಿಕೆಗೆ ಭಾರತ ಸಂಪೂರ್ಣ ಬದ್ಧವಾಗಿದೆ ಎಂದು ಅಮೆರಿಕಕ್ಕೆ ಭರವಸೆ ನೀಡಲು ಭಾರತ ಪ್ರಯತ್ನಿಸುತ್ತಿದೆ. ಬೈಡೆನ್ ಆಡಳಿತದ ಅಂತಿಮ ಕಾಲವಾದ ಕಾರಣ ಇತಿಮಿತಿಗಳು ಇರುತ್ತವೆ ಎನ್ನುವುದು ಗೊತ್ತಿದ್ದೂ ಅಮೆರಿಕದ ಹಾಗೂ ಏಷ್ಯಾ–ಪೆಸಿಫಿಕ್ ವಲಯದಲ್ಲಿ ತನ್ನ ವ್ಯೂಹಾತ್ಮಕ ಮತ್ತು ಮಿಲಿಟರಿ ಗುರಿಗಳಲ್ಲಿ ಪಾಲ್ಗೊಳ್ಳುವಂತೆ ಭಾರತದ ಮೇಲೆ ಇನ್ನಷ್ಟು ಒತ್ತಡ ಹೇರಲು ಅಮೆರಿಕ ಪ್ರಯತ್ನಿಸಲಿದೆ.



ವಿರೋಧಾಭಾಸ

ಭಾರತದ ವಿದೇಶಾಂಗ ನೀತಿ ಮತ್ತು ವ್ಯೂಹಾತ್ಮಕ ದೃಷ್ಟಿಕೋನದಲ್ಲಿ ವಿರೋಧಾಭಾಸಗಳು ಬರುವುದು ಇಲ್ಲೇ ಆಗಿದೆ. ಭಾರತ, ಈಗ ವಿಸ್ತರಿಸಲಾಗಿರುವ ಬ್ರಿಕ್ಸ್ ಕೂಟ ಮತ್ತು ಷಾಂಘಾಯ್ ಸಹಕಾರ ಸಂಸ್ಥೆಯ (ಎಸ್‌ಸಿಒ) ಒಂದು ಪ್ರಮುಖ ಸದಸ್ಯ ದೇಶವಾಗಿದೆ. ದಕ್ಷಿಣ ಗೋಳಾರ್ಧದ ಮುಂಚೂಣಿ ಧ್ವನಿಯಾಗ ಬೇಕೆನ್ನುವುದು ಭಾರತದ ಬಯಕೆಯಾಗಿದೆ. ಆದರೆ, ಏಷ್ಯಾದಲ್ಲಿ ಅಮೆರಿಕದ ಬಾಲಬಡುಕ ಆಗಿರುವುದರಿಂದ ಅದರ ವ್ಯೂಹಾತ್ಮಕ ಸ್ವಾಯತ್ತೆ ಈಗಾಗಲೇ ರಾಜಿಗೆ ಒಳಗಾಗಿದೆ. ಅಮೆರಿಕದ ಬಗ್ಗೆ ಹೇಳುವುದಾದರೆ, 'ಮೌಲ್ಯದ ಹಂಚಿಕೆ' ಮತ್ತು 'ಎರಡು ಮಹಾನ್ ಪ್ರಜಾಪ್ರಭುತ್ವಗಳು ಒಟ್ಟಿಗೇ ಬರುತ್ತಿವೆ' ಎಂಬ ದೊಡ್ಡ ದೊಡ್ಡ ಮಾತುಗಳ ಹೊರತಾಗಿಯೂ ಭಾರತವನ್ನು ಚೀನಾ–ವಿರೋಧಿ ಶಕ್ತಿ ಎಂಬಷ್ಟಕ್ಕೆ ಮಾತ್ರ ಸೀಮಿತವಾಗಿ 'ಮೌಲ್ಯ ಹಂಚಿಕೆ' ಪರಿಕಲ್ಪನೆಯಲ್ಲಿ ಭಾರತವನ್ನು ಅಮೆರಿಕ ಕಾಣುತ್ತದೆ.

ಮೋದಿ ಸರಕಾರ ಮಾಡಬೇಕಾದ್ದೇನು?

ಅಮೆರಿಕದ ಈ ಉದ್ದೇಶವು ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅನುಗುಣವಾಗಿಲ್ಲ ಎನ್ನುವುದನ್ನು ಮೋದಿ ಸರಕಾರ ಮನಗಾಣಬೇಕು. ಭಾರತದ ವ್ಯೂಹಾತ್ಮಕ ಸ್ವಾಯತ್ತೆ ಬಗ್ಗೆ ಸರಕಾರಕ್ಕೆ ನಿಜವಾಗಿಯೂ ಕಾಳಜಿಯಿದ್ದರೆ ಮತ್ತು ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುವುದಾದರೆ, ಚೀನಾದೊಂದಿಗಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಲು ಅದು ಹೆಚ್ಚು ಕ್ರಮಗಳನ್ನು ಕೈಗೊಳ್ಳಬೇಕು. ವಿಶೇಷವಾಗಿ, ಗಡಿ ಪ್ರಶ್ನೆ ಮೇಲೆ ಗಮನವನ್ನು ಕೇಂದ್ರೀಕರಿಸಬೇಕು. ಈ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದರೆ ಭಾರತ ತನ್ನ ವ್ಯೂಹಾತ್ಮಕ ಸ್ವಾಯತ್ತೆಯನ್ನು ಉಳಿಸಿಕೊಳ್ಳುವ ವಿಚಾರದಲ್ಲಿ ಹಾಗೂ ತನ್ನ ರಾಷ್ಟ್ರೀಯ ಹಿತಾಸಕ್ತಿಗಳನ್ನು ಹೆಚ್ಚಿಸುವ ವಿವಿಧ ನೀತಿಗಳನ್ನು ರೂಪಿಸುವಲ್ಲಿ ಇನ್ನೂ ಉತ್ತಮ ಸ್ಥಿತಿಯಲ್ಲಿ ಇರುತ್ತದೆ. ಇದು, ಅಮೆರಿಕದೊಂದಿಗಿನ ರಕ್ಷಣಾ ಒಡಂಬಡಿಕೆಗಳಿಂದ ಹೊರಬರಲು ನೆರವಾಗುವ ಸಾಧ್ಯತೆಯೂ ಇದೆ.

ಅನು: ವಿಶ್ವ

ಏಕಲವ್ಯ ಶಾಲೆಗಳಿಗೆ ನೇಮಕಾತಿ....... ಪುಟ 3 ರಿಂದ

ಶೇ. ಮೀಸಲಾತಿ ಇತ್ತು. ಇದನ್ನು ನ್ಯಾಯಮೂರ್ತಿ ಅರುಣ್ ಮಿಶ್ರಾ ನೇತೃತ್ವದ ಸುಪ್ರೀಂ ಕೋರ್ಟ್‌ನ ಪೀಠವು ರದ್ದುಗೊಳಿಸಿದಾಗ ನೇಮಕಾತಿ ನಿಯಮಗಳನ್ನು ಬದಲಾಯಿಸಲಾಯಿತು, ಇದರಿಂದಾಗಿ ಹೊಸ ನೇಮಕಾತಿಗಳಲ್ಲಿ ಬುಡಕಟ್ಟೇತರ ವಿಭಾಗಗಳವರೇ ದೊಡ್ಡ ಸಂಖ್ಯೆಯಲ್ಲಿದ್ದುದು, ಇವರ ಹಾಜರಿ ಬಹಳ ಅನಿಯಮಿತವಾಗಿರುವುದು ಮತ್ತು ಇದರಿಂದಾಗಿ ತೊಂದರೆಗೊಳಗಾದವರು ವಿದ್ಯಾರ್ಥಿಗಳು ಎಂಬುದು ಕಂಡು ಬಂತು.

ಈಗ ಎನ್.ಇ.ಎಸ್.ಟಿ.ಎಸ್. ನ ವಿಪರೀತವಾಗಿ ಕೇಂದ್ರೀಕರಿಸಲ್ಪಟ್ಟ ನೇಮಕಾತಿ ವಿಧಾನದಿಂದಾಗಿ ತೆಲಂಗಾಣದಲ್ಲಿ ಜೆಎಸ್‌ಎ (ಜೂನಿಯರ್ ಸೆಕ್ರೆಟಾರಿಯಟ್ ಅಸಿಸ್ಟೆಂಟ್ಸ್)ಯ ಖಾಲಿ ಹುದ್ದೆಗಳಲ್ಲಿ ನೇಮಕಗೊಂಡ 47 ರಲ್ಲಿ 44 ಹರಿಯಾಣ ರಾಜ್ಯಕ್ಕೆ ಸೇರಿದವರು ಮತ್ತು ತೆಲಂಗಾಣದಿಂದ ಯಾರೂ ಇಲ್ಲ ಎಂದು ವರದಿಯಾಗಿದೆ. ಏಕೆಂದರೆ ತೆಲಂಗಾಣದಿಂದ ಬಂದವರು ಹಿಂದಿಯಲ್ಲಿ "ಸಾಮರ್ಥ್ಯ" ಹೊಂದಿರುವುದಿಲ್ಲ, ಆದರೆ ತೆಲುಗಿನಲ್ಲಿ "ಸಾಮರ್ಥ್ಯ" ಹೊಂದಿರುತ್ತಾರೆ. ಆದರೆ ಅದನ್ನು ಸಾಮರ್ಥ್ಯ ಎಂದು ಪರಿಗಣಿಸಲಾಗುವುದಿಲ್ಲ ಎಂಬ ಸಂಗತಿಯತ್ತ ಗಮನಸೆಳೆದಿರುವ ಬೃಂದಾ ಅವರ ಪತ್ರ, ಇದು ಸ್ಪಷ್ಟವಾಗಿ ನಮ್ಮ ಸಂವಿಧಾನದ ಒಕ್ಕೂಟ ಗುಣಲಕ್ಷಣದ ಮೇಲೆ ಆಕ್ರಮಣವಾಗಿದೆ ಮತ್ತು ಏಕಲವ್ಯ ಶಾಲೆಗಳ ಉದ್ದೇಶಕ್ಕೆ ಹಾನಿಕಾರಕವಾಗಿದೆ ಎಂದಿದೆ.

ಏಕಲವ್ಯ ಮಾದರಿ ವಸತಿ ಶಾಲೆ ಬುಡಕಟ್ಟು ವಿದ್ಯಾರ್ಥಿಗಳಿಗೆ ಸಹಾಯಕವಾಗುವ ಒಂದು ಪ್ರಮುಖ ಸಂಸ್ಥೆಯಾಗಿದೆ. ಆದರೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈಗಿನ ನೇಮಕಾತಿ ವಿಧಾನವನ್ನು ಹಿಂತೆಗೆದುಕೊಳ್ಳಬೇಕು ಎಂದು ಬುಡಕಟ್ಟು ವ್ಯವಹಾರಗಳ ಮಂತ್ರಿಗಳನ್ನು ಆಗ್ರಹಿಸಿರುವ ಬೃಂದಾ ಕಾರಟ್ ಈ ವಿಷಯವನ್ನು ಸೂಕ್ತವಾಗಿ ಪರಿಶೀಲಿಸಬೇಕು ಎಂದು ವಿನಂತಿಸಿದ್ದಾರೆ.

ಸ್ಥಳೀಯರಿಗೆ ಉದ್ಯೋಗ ಮೀಸಲು ಮಸೂದೆ.... ಪುಟ 3 ರಿಂದ

ದೇಶ ವಿದೇಶಗಳಲ್ಲಿಯೂ ಸಮರ್ಥವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಒಂದು ವೇಳೆ ಅಂತಹ ಕೌಶಲ್ಯ ಬೇಕೆಂದರೆ ಸನ್ನದ್ದಗೊಳಿಸಿಕೊಳ್ಳುವ ಶಕ್ತಿ ರಾಜ್ಯದಲ್ಲಿದೆ.

ಸದ್ಯ ಮಸೂದೆಯ ಮಂಡನೆಯನ್ನು ಮುಂದಕ್ಕೆ ಹಾಕಿರುವಾಗ ಸರ್ಕಾರ ಒಂದು ಗಟ್ಟಿ ನಿರ್ಧಾರ ತೆಗೆದುಕೊಳ್ಳುವುದು ಅಗತ್ಯ. ಈ ಮಸೂದೆಯನ್ನು ಸಾರ್ವಜನಿಕ ಸಲಹೆ ಸೂಚನೆಗಳಿಗೂ ತೆರೆದಿಡಬಹುದು. ಸಂಬಂಧಿಸಿದ ವಲಯಗಳೊಡನೆ ಸೂಕ್ತ ಸಮಯದಲ್ಲಿ ಸಮಾಲೋಚನೆ ಮಾಡಬಹುದು. ಆದರೆ ಇಲ್ಲಿಂದಲೇ ವಲಸೆ ಹೋಗಬೇಕಾಗಬಹುದು ಎಂಬ ಖಾಸಗಿ ಉದ್ದಿಮೆದಾರರ ಗೊಡ್ಡು ಬೆದರಿಕೆಗೆ ಸರ್ಕಾರ ಮಣಿಯಬೇಕಿಲ್ಲ. ಇದು ಕರ್ನಾಟಕದ ಜನತೆಯ ಹಕ್ಕು, ಅಗತ್ಯ ಅವಕಾಶಕ್ಕಾಗಿನ ಆಗ್ರಹ. ಈಗಲಾದರೂ ಕಾಂಗ್ರೆಸ್ ಸರ್ಕಾರ ಸ್ಥಳೀಯರಿಗೆ ಮೀಸಲಾತಿ ಜಾರಿಗೊಳಿಸುವ ರಾಜಕೀಯ ಇಚ್ಛಾಶಕ್ತಿ ತೋರಲಿ. ವಿರೋಧ ಪಕ್ಷಗಳನ್ನು ಒಳಗೊಂಡು ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ನಿಲುವನ್ನು ಸ್ಪಷ್ಟ ಪಡಿಸಲಿ.

ರಾಜ್ಯ ಸರಕಾರ ಇಲ್ಲಿ ಒಂದು ಎಚ್ಚರಿಕೆ ವಹಿಸಬೇಕಾಗಿದೆ. ದೇಶದ ಸಂವಿಧಾನವು ತನ್ನ ಪ್ರಜೆಗಳಿಗೆ ಕೊಡ ಮಾಡುವ ದೇಶದಲ್ಲಿ ಎಲ್ಲಿಯಾದರೂ ವಾಸ ಮಾಡುವ, ಉದ್ಯೋಗ ಮಾಡುವ, ಜೀವನೋಪಾಯ ರೂಪಿಸಿಕೊಳ್ಳುವ ಪ್ರಜೆಗಳ ಮೂಲಭೂತ ಹಕ್ಕನ್ನು ಆಧಾರವಾಗಿರಿಸಿಕೊಂಡು ಸ್ಥಳೀಯರಿಗೆ ಮೀಸಲಾತಿಯನ್ನು ವಿರೋಧಿಸುವವರು ನ್ಯಾಯಾಲಯದ ಮೆಟ್ಟಿಲು ಹತ್ತಲೂ ಬಹುದು. ದೇಶದ ಪ್ರಜೆಗಳಿಗೆ ಇಂತಹ ಮೂಲಭೂತ ಹಕ್ಕು ಇದೆ ಎನ್ನುವಾಗಲೇ ಭಾರತವು ಒಂದು ಒಕ್ಕೂಟ ಎಂಬುದನ್ನು ನಾವು ಮರೆಯುವಂತಿಲ್ಲ. ತಾಂತ್ರಿಕ ಪ್ರಶ್ನೆಗಳ ಆಧಾರದಲ್ಲಿಯೋ, ಅಥವಾ ಬೇರೆ ಯಾವುದೋ ಲೋಪ–ದೋಷದ ಕಾರಣದಿಂದಲೋ ಸ್ಥಳೀಯರಿಗೆ ಮೀಸಲಾತಿ ನೀಡುವ ಈ ಕಾಯ್ದೆಯು ನ್ಯಾಯಾಲಯ ಪರಿಶೀಲನೆಯಲ್ಲಿ ಬಿದ್ದು ಹೋಗದಂತೆಯೂ ಸೂಕ್ತ ಎಚ್ಚರಿಕೆಯನ್ನು ಸರಕಾರ ವಹಿಸಬೇಕಿದೆ.

ಕರಾವಳಿ ಜಿಲ್ಲೆಗಳಲ್ಲಿ ಮಳೆ



ಮುಖ್ಯಮಂತ್ರಿ ಹಾಗೂ ಕೇಂದ್ರ ಹೆದ್ದಾರಿ ಮಂತ್ರಿ ಉತ್ತರ ಕನ್ನಡ ಜಿಲ್ಲೆಗೆ ಬಂದು ಸಮಸ್ಯೆ ಬಗೆಹರಿಸಿ:

ಉತ್ತರ ಕನ್ನಡ ಜಿಲ್ಲೆಯಲ್ಲಿ ಬಾರೀ ಮಳೆ ಮತ್ತು ಬಿರುಗಾಳಿಯಿಂದಾಗಿ ಕಳೆದ ಕೆಲವು ದಿನಗಳಿಂದ ವ್ಯಾಪಕವಾಗಿ ಗುಡ್ಡ ಕುಸಿತ ಮತ್ತು ನೆರೆಹಾವಳಿ ಹಾಗೂ ಇತರ ಪ್ರಕೃತಿ ವಿಕೋಪಗಳು ಸಂಭವಿಸುತ್ತಿವೆ. ಇದರಿಂದ ಜನರು ಜೀವ ಕಳೆದುಕೊಳ್ಳುವಂತಾಗಿದೆ. ಜನಜೀವನ ತತ್ತರಿಸುವಂತಾಗಿದೆ ಮತ್ತು ಜನರಲ್ಲಿ ನಿರಂತರ ಅಭದ್ರತೆ ಹಾಗೂ ಆತಂಕ ಮನೆಮಾಡಿದೆ. ಅನೇಕ ಕಡೆಗಳಲ್ಲಿ ಒಂದು ಊರಿನಿಂದ ಇನ್ನೊಂದು ಊರಿಗೆ ಸಂಪರ್ಕವೇ ಇಲ್ಲದಂತಾಗಿ ವ್ಯಾಪಾರೋದ್ಯಮ ಮಾತ್ರವಲ್ಲದೇ, ತುರ್ತು ಚಿಕಿತ್ಸೆ ಪಡೆಯಲು ಸುಸಜ್ಜಿತ ಆಸ್ಪತ್ರೆಗೆ ಹೊರಜಿಲ್ಲೆ–ಹೊರ ರಾಜ್ಯಗಳಿಗೆ ಹೋಗಲಿಕ್ಕೂ ಆಗದ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ.

ಸಂಪೂರ್ಣ ಅವೈಜ್ಞಾನಿಕ ಕಾಮಗಾರಿಗಳು:

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಐ.ಆರ್.ಬಿ. ಕಂಪನಿಗಳು ಹತ್ತಾರು ವರ್ಷಗಳಲ್ಲಿ ನಡೆಸಿದ ಸಂಪೂರ್ಣ ಅವೈಜ್ಞಾನಿಕ ಮತ್ತು ಮನಸೋಇಚ್ಛೆ ಅಮಾನವೀಯ ಕಾಮಗಾರಿಗಳ ಕ್ರಮದಿಂದಾಗಿ, ಹಾಗೂ ಸೀಬರ್ಡ ನೌಕಾನೆಲೆಯ ಕಾರಣಕ್ಕೆ ನಿರ್ಮಾಣಗೊಂಡ ಸಮುಚ್ಛಯಗಳಿಂದಾಗಿ ಕಾರವಾರ ತೀರ ಪ್ರದೇಶದಲ್ಲಿ ಅತಿಹೆಚ್ಚು ದುರ್ಘಟನೆಗಳು ಸಂಭವಿಸಿವೆ. ಜಿಲ್ಲಾಡಳಿತವು ಅವಘಡ ನಿರ್ವಹಣೆಯನ್ನು ಮಾಡುವ ಪ್ರಯತ್ನ ಮಾಡುತ್ತಿದೆಯಾದರೂ, ಸಮರೋಪಾದಿಯಲ್ಲಿ ಆಗಬೇಕಾದ ಕೆಲಸಕ್ಕೆ ಅಗತ್ಯ ಇರುವಷ್ಟು ಯಂತ್ರೋಪಕರಣಗಳು, ತಜ್ಞರ ತಂಡ ಸಾಕಷ್ಟು ಪೂರೈಕೆ ಆಗಿಲ್ಲವೆಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಹೆದ್ದಾರಿ ಪ್ರಾಧಿಕಾರ ಮತ್ತು ಐ.ಆರ್.ಬಿ. ಸ್ಥಳೀಯ ಆಡಳಿತಕ್ಕೆ ಸ್ಪಂದಿಸುವಂತೆ ಮಾಡಲು ಮುಖ್ಯಮಂತ್ರಿ ಹಾಗೂ ಕೇಂದ್ರ ಸರ್ಕಾರದ ಹೆದ್ದಾರಿ ಮತ್ತು ರಸ್ತೆ ಸಾರಿಗೆ ಇಲಾಖೆಯ ಮಂತ್ರಿ ಕೂಡಲೇ ಜಿಲ್ಲೆಗೆ ಆಗಮಿಸಿ ಸಮಸ್ಯೆ ಬಗೆಹರಿಸಲು ಮುಂದಾಗಬೇಕಾಗಿದೆ.

ಆಡಳಿತ ಎಚ್ಚೆತ್ತು ಕೊಳ್ಳಬೇಕಿತ್ತು:

ಕಾಮಗಾರಿಯು ಅವೈಜ್ಞಾನಿಕವಾಗಿದ್ದಾಗ ಅತಿವೃಷ್ಟಿ ಹಾಗೂ ಪ್ರಕೃತಿ ವಿಕೋಪ ತಡೆಗಟ್ಟುವ, ನಿಭಾಯಿಸುವ ವಿಧಾನ ಸರಿ ಇಲ್ಲದಿದ್ದಾಗ ಮಾರಣಾಂತಿಕ ಅನಾಹುತಗಳು ಸಂಭವಿಸುತ್ತವೆ ಎಂಬ ಅರಿವು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಇರಬೇಕಿತ್ತು. ಕಳೆದ ವರ್ಷ ಕಳಚೆ, ಅರಬೈಲ್ ಹಾಗೂ ಅಣಶಿ ಗುಡ್ಡ ಕುಸಿತವಾದಾಗಲೆ ಎಚ್ಚೆತ್ತುಕೊಳ್ಳಬೇಕಿತ್ತು. ಸೀಬರ್ಡ ನೌಕಾನೆಲೆ, ಅಣುವಿದ್ಯುತ್ ಸ್ಥಾವರ, ಚತುಷ್ಪಥ ಯೋಜನೆಗಳು ಜಾರಿಯಾಗಿರುವ ಈ ಮೂವತ್ತು ವರ್ಷಗಳ ಅವಧಿಯಲ್ಲಿ ಸಂಸತ್ತಿನಲ್ಲಿ ಜಿಲ್ಲೆಯನ್ನು ಪ್ರತಿನಿಧಿಸಿದವರು, ಅದರ ಸಾಧಕ ಬಾಧಕಗಳನ್ನು ಅಭ್ಯಸಿಸಿ ಪಾರ್ಲಿಮೆಂಟಿನಲ್ಲಿ ಧ್ವನಿ ಎತ್ತಲಿಲ್ಲ. ಹಾಗೆಯೇ ರಾಜ್ಯದಲ್ಲಿ ಶಾಸಕರುಗಳು ಮಂತ್ರಿಗಳೂ ಪೂರ್ಣ ಕಾಳಜಿ ವಹಿಸಲಿಲ್ಲ. ಜಿಲ್ಲೆಗೆ ಜನಸ್ನೇಹಿ ಪರಿಸರ ಮತ್ತು ಕೃಷಿ ಪೂರಕ ಯೋಜನೆ ತರಲು ಪ್ರಯತ್ನಿಸಲೇ ಇಲ್ಲ. ಐ.ಆರ್.ಬಿ. ಒಂದು ದೈತ್ಯ ಕಂಪನಿ. ಇದಕ್ಕೆ ರಾಷ್ಟ್ರೀಯ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಅತಿಯಾದ ಲಾಭ ತುಂಬಿರುತ್ತದೆ. ಸಾಮಾನ್ಯ ಜನತೆ ಇಂತಹ ಕಂಪನಿಗಳನ್ನು ಎದುರು ಹಾಕಿಕೊಳ್ಳುವುದು ಕಷ್ಟಸಾಧ್ಯವಿರುವಾಗ ಸರ್ಕಾರ ಜನರ ರಕ್ಷಣೆಗೆ ನಿಲ್ಲಬೇಕಾಗುತ್ತದೆ.

ಪ್ರಕೃತಿ ವಿಕೋಪದ ಮುನ್ನೋಟವಿಲ್ಲದ ಸರ್ಕಾರದ ಅಭಿವೃದ್ಧಿ ಪ್ರಣಾಳಿಕೆಯು ನಿರ್ಮಿಸಿದ ದುರಂತದ ಸಾಲು ಜಿಲ್ಲೆಯನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡಲಿದೆ. ಹಾಗಾಗಿ ಈ ಕೂಡಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಗತ್ಯ ವೈಜ್ಞಾನಿಕ ಕ್ರಮ ಕೈಗೊಳ್ಳಬೇಕಾದೆ. ಈ ದುರ್ಘಟನೆಗೆ ಕಾರಣರಾದವರ ಮೇಲೆ ನಿರ್ದಾಕ್ಷಿಣ್ಯವಾಗಿ ನಿಷ್ಪಕ್ಷಪಾತವಾಗಿ ಮೊಕದ್ದಮೆ ದಾಖಲಿಸಬೇಕಾದೆ. ಜೀವಹಾನಿ, ಬೆಳೆಹಾನಿ ಹಾಗೂ ಇನ್ನಿತರೇ ಯಾವುದೇ ರೂಪದ ಕಷ್ಟನಷ್ಟಕ್ಕೆ ಗರಿಷ್ಟ ಮೊತ್ತದ ಸಹಾಯಧನ ನೀಡಬೇಕು. ಅವಲಂಬಿತರಿಗೆ ಖಾಯಂ ಉದ್ಯೋಗ, ಖಾಯಂ ಮನೆ ನಿರ್ಮಾಣ ಒದಗಿಸಿಕೊಡಬೇಕು. ಕಾಳಜಿ ಕೇಂದ್ರದಲ್ಲಿ ಇರುವವರಿಗೆ ಗುಣಮಟ್ಟದ ಆಹಾರ ಪದಾರ್ಥ, ಆರೋಗ್ಯ ಸಾಧನ, ದೈಹಿಕ ಹಾಗೂ ಮಾನಸಿಕ ಆಘಾತಕ್ಕೆ ಒಳಗಾದವರ ಬಗ್ಗೆ ವಿಶೇಷ ವೈದ್ಯಕೀಯ ನೆರವು, ಗುಣಮಟ್ಟದ ಉಚಿತ ಚಿಕಿತ್ಸೆ, ಉತ್ತಮ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಮಾಡಬೇಕು. ಇಂತಹ ಸ್ಥಳಗಳಲ್ಲಿ ಲಿಂಗಸಂವೇದನೆಯೊಂದಿಗೆ ಮೂಲಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕು.

ಸೂಕ್ತ ಪರಿಹಾರಕಾರ್ಯ ಕೈಗೊಳ್ಳಬೇಕು

ಜಿಲ್ಲೆಯಲ್ಲಿ ಕೆಲಸ ಸ್ಥಗಿತವಾಗಿ ನಿಂತಿರುವ ವಾಹನಗಳ ಕಾರ್ಮಿಕರಿಗೆ ಪರಿಹಾರ ನೀಡಬೇಕು ಹಾಗೂ ಅವರಿಗೆ ವಿಶ್ರಾಂತಿ ಪಡೆಯಲು ಸ್ಥಳಾವಕಾಶ ನೀಡಬೇಕು. ಅರಣ್ಯ ಅತಿಕ್ರಮಣ ಸಾಗುವಳಿದಾರರನ್ನೂ ಒಳಗೊಂಡು ಯಾವುದೇ ಸ್ವರೂಪದಲ್ಲಿ ಅನಾಹುತಕ್ಕೆ ಒಳಗಾದವರಿಗೆ ಸೂಕ್ತ ಪರಿಹಾರ ನೀಡಬೇಕು. ಅತಿಯಾದ ಮಳೆ, ನೆರೆಹಾವಳಿ, ಕೊಳಚೆಯಿಂದ ಅನಾರೋಗ್ಯಕರ ವಾತಾವರಣ ಮತ್ತು ರೋಗ ರುಜಿನ ತಡೆಗಟ್ಟಲು ಸಾಮೂಹಿಕವಾಗಿ, ವ್ಯಾಪಕವಾಗಿ ಸೊಳ್ಳೆನಾಶಕ ಸಿಂಪಡಿಸಲು, ಅರಣ್ಯ ಇಲಾಖೆಯ ನೆಲದ ಸಾರ ಕೊಚ್ಚಿ ಹೋಗುವುದನ್ನು ತಪ್ಪಿಸಲು, ನೀರಿಂಗಿಸುವ ತೋಡುಗಳನ್ನು ಮಾಡಿಸಲು, ಜನಸ್ನೇಹಿಯಾಗಿ ಸ್ಪಂದಿಸಲು ಮುಂದಾಗಬೇಕು.

ಜಿಲ್ಲೆಯಲ್ಲಿ ಸಂಭವಿಸಿದ ಈ ದುರ್ಘಟನೆಯ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ, ಕೇಂದ್ರ ಸರ್ಕಾರದ ಹೆದ್ದಾರಿ ಮತ್ತು ರಸ್ತೆ ಸಾರಿಗೆ ಮಂತ್ರಿಗಳು ಹಾಜರಿದ್ದು, ಉಸ್ತುವಾರಿ ಮಂತ್ರಿಗಳು, ಸಂಸದರು, ಶಾಸಕರುಗಳನ್ನು, ಎಲ್ಲಾ ರಾಜಕೀಯ ಪಕ್ಷಗಳನ್ನು, ಸಂಘ ಸಂಸ್ಥೆಗಳನ್ನು, ಗಣ್ಯರನ್ನು, ತಜ್ಞರನ್ನು, ಅರಣ್ಯ ಇಲಾಖೆ, ಹೆದ್ದಾರಿ ಇಲಾಖೆ, ಲೋಕೋಪಯೋಗಿ ಇಲಾಖೆ ಕರೆದು ತುರ್ತಾಗಿ ಎಲ್ಲಾ ಕಾಮಗಾರಿಗಳನ್ನು ವ್ಯವಸ್ಥಿತವಾಗಿ ಪೂರ್ಣಗೊಳಿಸಲು, ಜಿಲ್ಲೆಯ ಪರಿಸರ ಪೂರಕ ಅಭಿವೃದ್ಧಿಗೆ ಮುಂದಾಗಬೇಕಿದೆ.

ಯಮುನಾ ಗಾಂವ್ಕರ್,
ಸಿಪಿಐ(ಎಂ) ಉತ್ತರ ಕನ್ನಡ ಜಿಲ್ಲಾ ಕಾರ್ಯದರ್ಶಿ

ರಾಷ್ಟ್ರೀಯ ಹೆದ್ದಾರಿಗಳ ದುಸ್ಥಿತಿ, ಅವೈಜ್ಞಾನಿಕ ರಸ್ತೆ ಅಭಿವೃದ್ಧಿ, ಕಳಪೆ ಇಂಜಿನಿಯರಿಂಗ್ ಗುಡ್ಡಗಳ ಕುಸಿತಕ್ಕೆ ಕಾರಣ

ರಾಷ್ಟ್ರೀಯ ಹೆದ್ದಾರಿಗಳ ದುಸ್ಥಿತಿ, ಅವೈಜ್ಞಾನಿಕ ರಸ್ತೆ ಅಭಿವೃದ್ಧಿ, ಕಳಪೆ ಇಂಜಿನಿಯರಿಂಗ್ ಇವುಗಳೇ ಕರಾವಳಿ ಪ್ರದೇಶಗಳಲ್ಲಿನ ಗುಡ್ಡಗಳ ಕುಸಿತಕ್ಕೆ ಕಾರಣ. ಕೇಂದ್ರ ಸರಕಾರ ಮತ್ತು ಅದರ ಅಧೀನದ ಹೆದ್ದಾರಿ ಪ್ರಾಧಿಕಾರವೇ ಇದಕ್ಕೆ ಸಂಪೂರ್ಣ ಹೊಣೆ. ನಮ್ಮಿಂದ ಏನೂ ಮಾಡಲಾಗುವುದಿಲ್ಲ ಎಂದು ರಾಜ್ಯ ಸರಕಾರ, ಜಿಲ್ಲಾಡಳಿತಗಳು ಅಸಹಾಯಕತೆ ವ್ಯಕ್ತಪಡಿಸಿ ಸುಮ್ಮನಾಗುವುದು ಸರಿಯಲ್ಲ. ಟೋಲ್ ರಸ್ತೆಗಳೂ ಸೇರಿದಂತೆ ಎಲ್ಲಾ ಸರಿಯಾಗಿ ಹೊಂಡ ಮುಚ್ಚಲು, ಹೆದ್ದಾರಿಗಳ ಮೇಲೆ ಮಳೆ ನೀರು ನಿಲ್ಲದಂತೆ ಮಾಡುವ, ನೀರು ಸರಾಗವಾಗಿ ಚರಂಡಿ ಸೇರುವಂತೆ ಮಾಡುವ ಯೋಗ್ಯ ಇಂಜಿನಿಯರ್ ಗಳು, ಅಧಿಕಾರಿಗಳು ಹೆದ್ದಾರಿ ಪ್ರಾಧಿಕಾರದಲ್ಲಿ ಇರದಿರುವುದು ನಾಚಿಕೆಗೇಡು.

ಮಂಗಳೂರಿನಂತಹ ಪ್ರಮುಖ ನಗರದಿಂದ ಬೆಂಗಳೂರು ಸಂಪರ್ಕಿಸುವ ಮೂರು ಘಾಟ್ ರಸ್ತೆಗಳಲ್ಲಿ ಎರಡು ಘಾಟ್ ರಸ್ತೆಗಳು ಮಳೆಯ ಅಬ್ಬರಕ್ಕೆ ಈಗಾಗಲೆ ಮುಚ್ಚಲ್ಪಟ್ಟಿದೆ. ಚಾರ್ಮಾಡಿ ಘಾಟ್ ಯಾವ ಕ್ಷಣದಲ್ಲೂ ಮುಚ್ಚಲ್ಪಡಬಹುದು. ಎರಡು ದಶಕಗಳ ದೀರ್ಘ ಅವಧಿಯಲ್ಲಿ ಈ ಘಾಟ್ ಗಳನ್ನು ಅಡೆತಡೆಯಿಲ್ಲದ ಸಂಪರ್ಕ ರಸ್ತೆಯಾಗಿಸಲು ಪ್ರಾಧಿಕಾರಕ್ಕೆ ಸಾಧ್ಯವಾಗಿಲ್ಲ.

ಶಿರಾಡಿ ಘಾಟ್ ರಸ್ತೆಯನ್ನು ಪುಟ 10 ಕ್ಕೆ






18ನೇ ಲೋಕಸಭಾ ಚುನಾವಣೆಗಳ ಫಲಿತಾಂಶಗಳು ಮೋದಿ, ಬಿಜೆಪಿ, ಆರೆಸ್ಸೆಸ್ ಗಳಿಗೆ ನೈತಿಕ ಮತ್ತು ರಾಜಕೀಯ ಸೋಲು ಮಾತ್ರವಲ್ಲ, ತನ್ನ ಜನವಿರೋಧಿ ನೀತಿಗಳನ್ನು ಬದಲಿಸುವಂತೆ ಎಚ್ಚರಿಕೆ ಕೂಡಾ. ಆದರೆ ಬಿಜೆಪಿ ಮತ್ತು ಅದರ ಮೋದಿ–ಶಾ ನಾಯಕತ್ವ ತಮ್ಮ ರಾಜಕೀಯ ನೈತಿಕ ಸೋಲಿನಿಂದ ಪಾಠ ಕಲಿಯುವುದು ಒತ್ತಟ್ಟಿಗಿರಲಿ, ಇಂತಹ ಒಂದು ಫಲಿತಾಂಶ ಬಂದಿದೆ ಎಂಬ ವಾಸ್ತವವನ್ನೇ ನಿರಾಕರಿಸಿವೆ. ''ವಿಶೇಷ ಏನೂ ಆಗಿಲ್ಲ'' ''ಪರಿಸ್ಥಿತಿ ಮಾಮೂಲಾಗಿದೆ'' (ಬಿಸಿನೆಸ್ ಏಸ್ ಯೂಶೂವಲ್) ಎಂಬಂತೆ ನಟಿಸುತ್ತಿದ್ದಾರೆ. ಆದರೆ ಚುನಾವಣಾ ಫಲಿತಾಂಶಗಳ ಪರಿಣಾಮವಾಗಿ ಬಿಜೆಪಿ ಪಕ್ಷದೊಳಗೆ ಮತ್ತು ಬಿಜೆಪಿ–ಆರೆಸ್ಸೆಸ್ ನಡುವೆ ಸಂಬಂಧಗಳು ಹದಗೆಟ್ಟಿದ್ದನ್ನು ನಿರಾಕರಿಸುವುದು ಮತ್ತು ''ಏನೂ ಆಗೇ ಇಲ್ಲ'' ಅಥವಾ ''ಪರಿಸ್ಥಿತಿ ಮಾಮೂಲಾಗಿದೆ'' ಅಂತ ನಟಿಸುವುದು ಸಾಧ್ಯವಾಗಿಲ್ಲ. ಇದರ ಭಾಗವಾಗಿ ಉತ್ತರ ಪ್ರದೇಶದಲ್ಲಿ ಯೋಗಿ–ಶಾ ತಿಕ್ಕಾಟ ಅನುದಿನವೂ ಬಹಿರಂಗವಾಗಿ ನಡೆಯುತ್ತಿದೆ. ಹಲವು ರಾಜ್ಯಗಳಲ್ಲಿ ತಿಕ್ಕಾಟ ಈ ಹಾದಿಯಲ್ಲಿದೆ. ಈ ಕುರಿತ ವಿಶ್ಲೇಷಣೆ ಇಲ್ಲಿದೆ.



ಮೋದಿ–ಶಾ, ಯೋಗಿ, ಭಾಗವತ್ ಮತ್ತು ಕಾರ್ಪೋರೇಟ್ ಗಳು

ವಸಂತರಾಜ ಎನ್.ಕೆ.



ಬಿಜೆಪಿಗೆ ಬಹುಮತ ನೀಡದ 18ನೇ ಲೋಕಸಭಾ ಚುನಾವಣೆಗಳ ಫಲಿತಾಂಶಗಳು, ಅದಕ್ಕೆ ಜನಾದೇಶದ ನಿರಾಕರಣೆ ಮತ್ತು ಅದರ ಆರ್ಥಿಕ–ರಾಜಕೀಯ ನೀತಿಗಳ ತಿರಸ್ಕಾರವೆಂಬುದರ ಬಗ್ಗೆ ಯಾವುದೇ ಸಂದೇಹವಿಲ್ಲ. ಹಿಂದಿನ ಸರಕಾರ, ಪ್ರಣಾಳಿಕೆ, "ಸರಕಾರದ ಸಾಧನೆಗಳ" ಬಗ್ಗೆ ಚುನಾವಣಾ ಪ್ರಚಾರ ಎಲ್ಲವೂ ಮೋದಿ ಹೆಸರಲ್ಲಿದ್ದು, ಎನ್.ಡಿ.ಎ ಹೆಸರಲ್ಲಿ ಏನೂ ಇಲ್ಲದಿರುವಾಗ ಅದಕ್ಕೆ ಬಹುಮತ ಬಂದಿದ್ದರೂ, ಎನ್.ಡಿ.ಎ. ಗೂ ಜನಾದೇಶವಿದೆ ಎಂದು ಹೇಳುವಂತಿಲ್ಲ. ಈ ಫಲಿತಾಂಶ ಮೋದಿ, ಬಿಜೆಪಿ, ಆರೆಸ್ಸೆಸ್ ಗಳಿಗೆ ನೈತಿಕ ಮತ್ತು ರಾಜಕೀಯ ಸೋಲು ಮಾತ್ರವಲ್ಲ, ತನ್ನ ಜನವಿರೋಧಿ ನೀತಿಗಳನ್ನು ಬದಲಿಸುವಂತೆ ಎಚ್ಚರಿಕೆ ಎಂದು ಸಹ ಖಂಡಿತ ಹೇಳಬಹುದು.

'ಪರಿಸ್ಥಿತಿ ಮಾಮೂಲಾಗಿದೆ' (ಬಿಸಿನೆಸ್ ಏಸ್ ಯೂಶೂವಲ್) ಎಂಬ ನಟನೆ

ಆದರೆ ಬಿಜೆಪಿ ಮತ್ತು ಅದರ ಮೋದಿ–ಶಾ ನಾಯಕತ್ವ ತಮ್ಮ ರಾಜಕೀಯ ನೈತಿಕ ಸೋಲಿನಿಂದ ಪಾಠ ಕಲಿಯುವುದು ಒತ್ತಟ್ಟಿಗಿರಲಿ, ಇಂತಹ ಒಂದು ಫಲಿತಾಂಶ ಬಂದಿದೆ ಎಂಬ ವಾಸ್ತವವನ್ನೇ ನಿರಾಕರಿಸಿವೆ. ಹೊಸ ಎನ್.ಡಿ.ಎ ಸರಕಾರವನ್ನು ಮೋದಿ 3.0 ಸರಕಾರವೆಂದು ಕರೆಯಲಾಗುತ್ತಿದೆ. ಅಮಿತ್ ಶಾ, ನಿರ್ಮಲಾ ಸೀತಾರಾಮನ್ ರಿಂದ ಹಿಡಿದು ತಮ್ಮ ಪರಿಣತಿಯ ಅಭಾವ, ವೈಫಲ್ಯಗಳಿಂದ ಕುಖ್ಯಾತರಾದ ಹೆಚ್ಚುಕಡಿಮೆ ಎಲ್ಲ ಸಚಿವರಿಗೆ ಅದೇ ಸಚಿವಾಲಯಗಳನ್ನು ಕೊಡಲಾಯಿತು. ಚುನಾವಣೆಯಲ್ಲಿ ಸೋತ ಅಥವಾ ಟಿಕೆಟ್ ಕೊಡದ/ಸ್ಪರ್ಧಿಸದ ಸಚಿವರು ಮತ್ತು ಅನುರಾಗ್ ಠಾಕುರ್, ನಾರಾಯಣ ರಾಣೆ ಮಾತ್ರ ಇದಕ್ಕೆ ಅಪವಾದವಾಗಿದ್ದರು. ಹಿಂದಿನಂತೆ ಜೆ.ಡಿ.ಯು ತೆಲುಗು ದೇಶಂ ನಂತಹ ಎನ್.ಡಿ.ಎ ಕೂಟದ ಪಕ್ಷಗಳಿಗೂ ಯಾವುದೇ ಪ್ರಮುಖ ಸಚಿವ ಖಾತೆ ಕೊಡಲಿಲ್ಲ. 150ಕ್ಕೂ ಹೆಚ್ಚು ಸಂಸದರನ್ನು ನಿಯಮಬಾಹಿರವಾಗಿ ಅಮಾನತು ಮಾಡಿದ ಭಾರತದ ಚರಿತ್ರೆಯಲ್ಲೇ ಅತ್ಯಂತ ಕುಖ್ಯಾತ ಸ್ಪೀಕರ್ ನ್ನು ಸಹ ಬದಲಿಸಲಿಲ್ಲ ಮತ್ತು ಉಪ ಸ್ಪೀಕರ್ ಹುದ್ದೆಯನ್ನೂ ಖಾಲಿ ಇಡಲಾಗಿದೆ.

ಪ್ರಧಾನಿ, ಸಚಿವರು, ಪಕ್ಷದ ನಾಯಕರು ವಿರೋಧ ಪಕ್ಷಗಳ ಮೇಲೆ ದಾಳಿ ಮಾಡುವ 'ಅ–ಸಂಸದೀಯ' ಹೇಳಿಕೆಗಳನ್ನು ಸಂಸತ್ತಿನ ಒಳಗೂ, ಹೊರಗೂ ಮುಂದುವರೆಸಿದ್ದಾರೆ. ವಿರೋಧ ಪಕ್ಷಗಳ ನಾಯಕರ ವಿರುದ್ಧ ಇಡಿ–ಸಿಬಿಐ ಛೂ ಬಿಡುವ ಜೈಲಿಗಟ್ಟುವ ಸತತ ಹುನ್ನಾರವನ್ನು ಸುಪ್ರೀಂ ಕೋರ್ಟಿನ ಕಡಿವಾಣದ ನಡುವೆಯೂ ಮುಂದುವರೆಸಿದ್ದಾರೆ. ಮುಂದುವರೆಯುತ್ತಿರುವ ಮಣಿಪುರದಲ್ಲಿನ ಹಿಂಸಾಚಾರ. ಬೆಲೆಏರಿಕೆ, ನಿರುದ್ಯೋಗವಲ್ಲದೆ ಹೊಸ ಸರಕಾರದ ಹೊಸ ಮಹಾ ಪ್ರಮಾದಗಳು, ಸರಣಿ ವೈಫಲ್ಯಗಳನ್ನೂ ಒಪ್ಪಿಕೊಳ್ಳಲೂ, ಅದಕ್ಕೆ ಜವಾಬ್ದಾರಿ ಹಾಗು ಅದರ ಪರಿಹಾರಕ್ಕೆ ಕ್ರಮಗಳನ್ನು ತೆಗೆದುಕೊಳ್ಳಲೂ ತಯಾರಿಲ್ಲ. ಅವು ಪ್ರಮಾದಗಳು, ವೈಫಲ್ಯಗಳು ಅಲ್ಲವೇ ಅಲ್ಲ ಎಂಬ ಎಂದಿನ ಮೊಂಡುವಾದ ಮುಂದುವರೆಸಿವೆ. ನೀಟ್ ಹಗರಣ ಮತ್ತು ಇತರ ಎನ್.ಟಿ.ಎ ಪ್ರಮಾದಗಳು, ಹಲವು ಬಿಜೆಪಿ ರಾಜ್ಯಗಳಲ್ಲೂ ಪ್ರಶ್ನೆಪತ್ರ ಲೀಕ್ ಗಳು, ಎಕ್ಸಿಟ್ ಪೋಲ್ ಸಂಬಂಧಿತ ಶೇರು ಮಾರುಕಟ್ಟೆ ಹಗರಣ, ಭೀಕರ ಸರಣಿ ರೈಲು ಅಫಘಾತಗಳು, ಕಾಶ್ಮೀರ ಕಣಿವೆಯಿಂದ ಜಮ್ಮು ಗೂ ಹಬ್ಬಿದ ಭಯೋತ್ಪಾಧಕ ಚಟುವಟಿಕೆಗಳು, ಡಬ್ಬಲ್ ಇಂಜಿನ್ ಸರಕಾರದ ಬಿಹಾರದಲ್ಲಿ ಸರಣಿ ಸೇತುವೆ ಕುಸಿತಗಳು, ಹುತಾತ್ಮ ಅಗ್ನಿವೀರರ ಕುಟುಂಬಗಳಿಗೆ ಪರಿಹಾರದ ಅಭಾವ? ಹೀಗೆ ಹೊಸ ಸರಕಾರಕ್ಕೆ ತಿಂಗಳು ತುಂಬುವ ಮೊದಲೇ ಹೊಸ ಪ್ರಮಾದಗಳು, ವೈಫಲ್ಯಗಳು ಸಾಲುಗಟ್ಟಿ ಎರಗಿವೆ.

ಒಟ್ಟಿಗೆ ಮೋದಿ–ಶಾ ಮತ್ತು ಬಿಜೆಪಿ, "ವಿಶೇಷ ಏನೂ ಆಗಿಲ್ಲ" "ಪರಿಸ್ಥಿತಿ ಮಾಮೂಲಾಗಿದೆ" (ಬಿಸಿನೆಸ್ ಏಸ್ ಯೂಶೂವಲ್) ಎಂಬಂತೆ ನಟಿಸುತ್ತಿದ್ದಾರೆ. ಗೋದಿ ಮಾಧ್ಯಮಗಳಲ್ಲಿ ಹೆಚ್ಚಿನವು ಇದಕ್ಕೆ ತಾಳ ಹಾಕುತ್ತಿವೆ. 'ಎಕ್ಸಿಟ್ ಪೋಲ್' ಸುಳ್ಳು ಬಟ್ಟಾ ಬಯಲಾಗಿ ತಾವೇ ಬೆತ್ತಲೆಯಾದರೂ, ತಮಗೂ, ಮೋದಿ–ಶಾ ನಾಯಕತ್ವಕ್ಕೂ, ಅವರ ಸರಕಾರಕ್ಕೂ ಏನೂ ಆಗಿಲ್ಲ, "ಪರಿಸ್ಥಿತಿ ಮಾಮೂಲಾಗಿದೆ" ಎಂಬಂತೆ ಅವೂ ನಟಿಸುತ್ತಿವೆ.

ಬಿಜೆಪಿಯೊಳಗೂ ಬಿಜೆಪಿ–ಆರೆಸ್ಸೆಸ್ ಸಂಬಂಧದಲ್ಲೂ ಟೆಂಶನ್

ಆದರೆ ಚುನಾವಣಾ ಫಲಿತಾಂಶಗಳ ಪರಿಣಾಮವಾಗಿ ಬಿಜೆಪಿ ಪಕ್ಷದೊಳಗೆ ಮತ್ತು ಬಿಜೆಪಿ–ಆರೆಸ್ಸೆಸ್ ನಡುವೆ ಸಂಬಂಧಗಳು ಹದಗೆಟ್ಟಿದ್ದನ್ನು ನಿರಾಕರಿಸುವುದು ಮತ್ತು "ಏನೂ ಆಗೇ ಇಲ್ಲ" ಅಥವಾ "ಪರಿಸ್ಥಿತಿ ಮಾಮೂಲಾಗಿದೆ" ಅಂತ ನಟಿಸುವುದು ಸಾಧ್ಯವಾಗಿಲ್ಲ. ಯಾಕೆಂದರೆ ಇದು ಅನುದಿನವೂ ಬಹಿರಂಗವಾಗಿ ನಡೆಯುತ್ತಿದೆ. ಚುನಾವಣಾ ಫಲಿತಾಂಶ ಪ್ರಕಟವಾಗುತ್ತಿದ್ದಂತೆ, ಮುಖ್ಯಸ್ಥ ಭಾಗವತ್ ಸೇರಿದಂತೆ ಆರೆಸ್ಸೆಸ್ ನಾಯಕರು ಮೋದಿ–ಶಾ ನಾಯಕತ್ವದ ಮೇಲೆ ಪರೋಕ್ಷವಾದರೂ ತೀಕ್ಷ್ಣ ಟೀಕಾ ಪ್ರಹಾರ ಮಾಡಿದರು. "ಸೇವಕರಿಗೆ ದುರಹಂಕಾರ ಇರಬಾರದು" ಮತ್ತು "ಮಣಿಪುರದಲ್ಲಿ ವರ್ಷವಾದರೂ ಶಾಂತಿ ನೆಲೆಸಿಲ್ಲ" ಎಂಬ ಟೀಕೆ ಭಾರೀ ಚರ್ಚೆಗೆ ಒಳಗಾಯಿತು. "ಬಿಜೆಪಿ ಈಗ ಬೆಳೆದಿದೆ, ಅದಕ್ಕೆಆರೆಸ್ಸೆಸ್ ನ ಅಗತ್ಯವಿಲ್ಲ, ಈಗ ಅದು ಸ್ವತಂತ್ರವಾಗಿ ಕೆಲಸ ಮಾಡಲು ಸಕ್ಷಮವಾಗಿದೆ" ಎಂಬ ಬಿಜೆಪಿ ಅಧ್ಯಕ್ಷ ಜೆ.ಪಿ ನಡ್ಡಾ ಅವರ ಪ್ರತಿ–ಹೇಳಿಕೆ ಬಿಜೆಪಿ–ಆರೆಸ್ಸೆಸ್ ನಡುವೆ ಬಿರುಕು ಢಾಳಾಗಿರುವಂತೆ ಕಂಡಿತು.

ಬಹುಮತ ತರಲು ವಿಫಲವಾಗಿರುವುದರಿಂದ ಆರೆಸ್ಸೆಸ್, ಸರಕಾರದ ಮೋದಿ–ಶಾ ನಾಯಕತ್ವ ಬದಲಾಯಿಸಿ, ಬದಲಿ ನಾಯಕತ್ವಕ್ಕೆ ಒತ್ತಾಯಿಸಬಹುದು. ನಿತಿನ್ ಗಡ್ಕರಿ, ರಾಜನಾಥ್, ಯೋಗಿ ಯಂತಹ ತಮಗೆ 'ವಿಧೇಯ'ರಾದವರನ್ನು ಪ್ರಧಾನಿಯಾಗಿಸಬಹುದು. ಬಿಜೆಪಿ ಪಾರ್ಲಿಮೆಂಟರಿ ಪಕ್ಷದ ಸಭೆಯಲ್ಲಿ ಮೋದಿ ನಾಯಕತ್ವಕ್ಕೆ ಸವಾಲು ಬರಬಹುದು ಎಂದೆಲ್ಲ ಊಹಾಪೋಹಗಳು ಹರಡಿದವು. ಭಾಗವತ್–ಯೋಗಿ ಭೇಟಿ ಇವಕ್ಕೆ ಪುಕ್ಕ ಕೊಟ್ಟಿತ್ತು. ಆದರೆ ಬಿಜೆಪಿ ಪಾರ್ಲಿಮೆಂಟರಿ ಪಕ್ಷದ ಸಭೆಯನ್ನೇ ನಡೆಸದೆ ನಿತೀಶ್–ನಾಯ್ಡು ಜತೆ ಮಾತನಾಡಿ ನೇರವಾಗಿ ಎನ್.ಡಿ.ಎ ರಂಗದ ಪಾರ್ಲಿಮೆಂಟರಿ ಸಭೆಯನ್ನೇ ನಡೆಸಿ, ಮೋದಿ–ಶಾ ಈ ಸವಾಲನ್ನು ಮೊಳಕೆಯಲ್ಲೇ ಚಿವುಟಿ ಹಾಕಿದರು. ಆ ಮೇಲೆ ತಮಗೆ ಬೇಕಾದ ಸಚಿವ ಸಂಪುಟ, ಸ್ಪೀಕರ್ ಆಯ್ಕೆ ಮಾಡಿದರು.

ಆದರೆ ತೀವ್ರ ಹಿನ್ನಡೆ ಕಂಡ ಉತ್ತರ ಪ್ರದೇಶ, ಮಹಾರಾಷ್ಟ್ರ, ಹರಿಯಾಣ ಗಳಲ್ಲಿ ತೀವ್ರವಾಗಿ ಮತ್ತು ಉಳಿದ ರಾಜ್ಯಗಳಲ್ಲಿ ಸಹ ಪಕ್ಷದೊಳಗೆ ತೀವ್ರ ಭಿನ್ನಮತ ಹೊಗೆಯಾಡಲಾರಂಭಿಸಿತ್ತು. ಮೋದಿ–ಶಾ ನಾಯಕತ್ವ ಮತ್ತು ಅದರ ಹಲವು ತಪ್ಪು ನಿರ್ಣಯಗಳು, ನೀತಿಗಳೇ ಸೋಲಿಗೆ ಕಾರಣ ಎಂದು ನೇರವಾಗಿ ಬಹಿರಂಗವಾಗಿ ಆರೋಪಿಸಿವಷ್ಟು ಭಿನ್ನಮತ, ಆಕ್ರೋಶ ಮತ್ತು ಬಂಡಾಯ ಸಹ ಬೆಳೆಯಿತು. ಇತ್ತೀಚೆಗಿನ 13 ಉಪಚುನಾವಣೆಗಳಲ್ಲಿ ಬಿಜೆಪಿ ಗಾದ ತೀವ್ರ ಹಿನ್ನಡೆ ಮತ್ತು ಬಿಜೆಪಿ ಎಲ್ಲ ರಾಜ್ಯಗಳಲ್ಲಿ ಹಮ್ಮಿಕೊಂಡಿರುವ ಚುನಾವಣಾ ಸೋಲುಗಳ "ಆತ್ಮಾವಲೋಕನ" ಗಳಿಂದಾಗಿ ಇದು ಇನ್ನಷ್ಟು ತೀವ್ರವಾಗಿದೆ. ಇದು ಸಾಲದೆಂಬಂತೆ ಉತ್ತರ ಪ್ರದೇಶದಲ್ಲಿ 10 ಸೇರಿದಂತೆ ಮುಂಬರುವ ಉಪಚುನಾವಣೆಗಳು ಮತ್ತು ಮೂರು ರಾಜ್ಯಗಳಲ್ಲಿ (ಮಹಾರಾಷ್ಟ್ರ, ಹರಿಯಾಣ, ಜಾರ್ಖಂಡ್) ಮುಂಬರುವ ವಿಧಾನ ಸಭಾ ಚುನಾವಣೆಗಳಲ್ಲಿ ಸಹ ಸೋಲಿನ ಭೀತಿ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿವೆ. ಭಾಗವತ್ ಸಹ "ಭಗವಂತನಾಗುವ ಆಸೆ ಇರೋರಿಗೆ ಮುಂದೇನು ಅಂತ ಗೊತ್ತಿಲ್ಲ" ಎಂದು ಮತ್ತೆ ಮೋದಿಯ ಪರೋಕ್ಷ ಟೀಕೆ ಮಾಡಿದರು.

ಹೀಗಾಗಿ ಬಿಜೆಪಿ ಪಕ್ಷದ ಒಳಗೂ ಮೋದಿ–ಶಾ ನಿರಂಕುಶ ಕೇಂದ್ರೀಕರಣದ ವಿರುದ್ಧ ಹಲವು ಕಡೆ ಬಂಡಾಯದ ಅಲೆಗಳು ಏಳುತ್ತಲಿವೆ. ಇದು ಹಲವು ಕಾರಣಗಳಿಂದಾಗಿ ಉತ್ತರ ಪ್ರದೇಶದಲ್ಲಿ ಸ್ಫೋಟಕ ಪರಿಸ್ಥಿತಿ ಉಂಟು ಮಾಡಿದೆ. ಒಂದು ಕಡೆ ಅಮಿತ್ ಶಾ ತನ್ನ ಭವಿಷ್ಯದ (ಆರೆಸ್ಸೆಸ್ ಮೋದಿಯನ್ನು ನಿವೃತ್ತಿಗೊಳಿಸಲು ನಿರ್ಧರಿಸಿದ ಸಂದರ್ಭದಲ್ಲಿ) ಪ್ರತಿಸ್ಪರ್ಧಿಯಾದ ಯೋಗಿಯನ್ನು ಈಗಲೇ ಮಣಿಸಬೇಕು ಎಂದು ಹೊರಟಿದ್ದಾರೆ. ಈ ಭವಿಷ್ಯ ಬಹಳ ದೂರವಿರಲಿಕ್ಕಿಲ್ಲ. ಮುಂಬರುವ ರಾಜ್ಯಗಳ ವಿಧಾನ ಸಭಾ ಚುನಾವಣೆಗಳ ನಂತರವೇ (ಅಂದರೆ ಇದೇ ಅಕ್ಟೋಬರ್ ನಲ್ಲೇ) ಸಹ ಆಗಬಹುದು. ಹೀಗಾಗಿ ಉತ್ತರ ಪುಟ 10 ಕ್ಕೆ





ಕೃಪೆ: ಪಿ.ಮಹಮ್ಮದ್, ವಾ.ಭಾ.



ಮೋದಿ–ಶಾ, ಯೋಗಿ, ಭಾಗವತ್ ಮತ್ತು ಕಾರ್ಪೊರೇಟ್ ಗಳು.....

ಪುಟ 9 ರಿಂದ

ಪ್ರದೇಶದಲ್ಲಿ ಬಿಜೆಪಿ ಗೆ ಆದ ಅವಮಾನಕಾರಿ ಸೋಲನ್ನು ಮುಖ್ಯಮಂತ್ರಿಯ ಯೋಗಿಯ ತಲೆಗೆ ಕಟ್ಟಿ ಅವರ 'ತಲೆದಂಡ' ತೆಗೆದುಕೊಳ್ಳುವ ತಯಾರಿಯನ್ನು ಶಾ ನಡೆಸಿದ್ದಾರೆ. ಮಾತ್ರವಲ್ಲ ತಮ್ಮ ಶಿಷ್ಯ ಮತ್ತು ಉಪಮುಖ್ಯಮಂತ್ರಿ ಕೇಶವ ಪ್ರಸಾದ ಮೌರ್ಯ ಅವರನ್ನು ಮುಖ್ಯಮಂತ್ರಿ ಯಾಗಿ ಅಥವಾ ಪಕ್ಷದ ರಾಜ್ಯ ಅಧ್ಯಕ್ಷರಾಗಿ ಹೊರಿಸಲು ಹೊರಟಿದ್ದಾರೆ. ಚುನಾವಣೆಯ ನಂತರ ಯೋಗಿ ಕರೆದ ಯಾವುದೇ ಸಚಿವ ಸಂಘುಟ ಸಭೆಯಲ್ಲಿ ಮೌರ್ಯ ಭಾಗವಹಿಸಿಲ್ಲ.

ಉತ್ತರ ಪ್ರದೇಶದ ಸೋಲಿನ ಕುರಿತ "ಆತ್ಮಾವಲೋಕನ" ಸಭೆಯಲ್ಲಿ ಮೌರ್ಯ ಮತ್ತು ಯೋಗಿ ಟೀಕೆ–ಪ್ರತಿಟೀಕೆ ಗಳನ್ನು ಮಾಡಿದ್ದಾರೆ. "ಅತಿ ಆತ್ಮವಿಶ್ವಾಸ" ಸೋಲಿಗೆ ಕಾರಣ (ಮೋದಿ ಯ 'ಚಾರ್ ಸೌ ಪಾರ್' ಹೇಳಿಕೆಯ ಪರೋಕ್ಷ ಟೀಕೆ) ಎಂದು ಯೋಗಿ ಹೇಳಿದರೆ, "ಸರಕಾರ ಮತ್ತು ಪಕ್ಷಗಳಲ್ಲಿ ಪಕ್ಷದ್ದೇ ಪರಮಾಧಿಕಾರ" ಆಗದ್ದು (ಯೋಗಿಯ ಕಳಪೆ ಸರಕಾರದ ಪರೋಕ್ಷ ಟೀಕೆ) ಎಂದು ಮೌರ್ಯ ಹೇಳಿದ್ದಾರೆ. ಶಾ ಮುಂಬರುವ ಉಪಚುನಾವಣೆಗಳ ಮೊದಲೇ ಯೋಗಿಗೆ 'ಖೊಕ್' ಕೊಡಬೇಕು ಎಂದು ಬಯಸಿದ್ದಾರೆ. ಆದರೆ ಯೋಗಿ ಗೆ ಸ್ವತಃ ಭಾಗವತ್, ಆರೆಸ್ಸೆಸ್ ಮತ್ತು ಶಾಸಕರ ನಡುವೆ ಬೆಂಬಲವಿರವುದರಿಂದ ಅದು ಸುಲಭವಲ್ಲ ಎನ್ನಲಾಗಿದೆ. ಅವರು ಇತ್ತೀಚೆಗೆ ರಾಜ್ಯಪಾಲರನ್ನು ಭೇಟಿಯಾಗಿದ್ದು, ಮೌರ್ಯ ರನ್ನು ಸಂಪುಟದಿಂದ ಕೈಬಿಡುವಂತೆ ಶಿಫಾರಸು ಮಾಡಿದ್ದಾರೆ ಎನ್ನಲಾಗಿದೆ. ಹೀಗೆ ಈ ಮುಖಾಮುಖಿ ಮುಂದುವರೆದರೆ ಇದು ಮೋದಿ–ಆರೆಸ್ಸೆಸ್ ಮುಖಾಮುಖಿ ಯೂ ಆಗಿ, ತನ್ನ ಸೀಟಿಗೂ ಕುತ್ತು ಬರಬಹುದು ಎಂಬ ಆತಂಕದಿಂದ ಮೋದಿ 'ಕದನವಿರಾಮ' ಕ್ಕೆ ಒತ್ತಡ ಹಾಕುತ್ತಿದ್ದಾರೆ. ಕನಿಷ್ಠ ಉಪಚುನಾವಣೆಗಳ ವರೆಗೆ ಶಾ ರನ್ನು ಸುಮ್ಮನಿರಿಸುವಂತೆ ಪ್ರಯತ್ನಿಸುತ್ತಿದ್ದಾರೆ ಎನ್ನಲಾಗಿದೆ. ಭಾಗವತ್ ಸಹ ರಾಜಿಗೆ ಪ್ರಯತ್ನಿಸುತ್ತಿದ್ದಾರೆ ಎನ್ನಲಾಗಿದೆ. ಆದರೆ ಇದಕ್ಕಾಗಿ ಜುಲೈ 20 ರಂದು ಲಕ್ನೋ ನಲ್ಲಿ ಕರೆಯಲಾಗಿದ್ದ ಆರೆಸ್ಸೆಸ್–ಬಿಜೆಪಿ ಜಂಟಿ ಸಭೆ ಅಕಾಸ್ಮಾತ್ತಾಗಿ ರದ್ದಾಗಿರುವುದು ಪರಿಸ್ಥಿತಿಯ ಗಂಭೀರತೆಯನ್ನು ತೋರಿಸುತ್ತದೆ.

ಪ್ರಜಾಸತ್ತಾತ್ಮಕ ಶಕ್ತಿಗಳು ಮತ್ತು ಶಾ–ಯೋಗಿ, ಮೊದಿ–ಭಾಗವತ್ ಮುಖಾಮುಖಿ

ಇನ್ನೊಂದು ಕಡೆ ಪ್ರಜಾಸತ್ತಾತ್ಮಕ ಶಕ್ತಿಗಳು ಮತ್ತು ಅವರ ಬೆಂಬಲಿಗರು ಚುನಾವಣಾ ಫಲಿತಾಂಶದ ನಂತರದಿಂದಲೂ ಮೋದಿ–ಶಾ ನಾಯಕತ್ವಕ್ಕೆ ಕಡಿವಾಣ ಬಿದ್ದರೆ ಮಾತ್ರ ಪರಿಸ್ಥಿತಿ ಉತ್ತಮವಾಗಲು ಸಾಧ್ಯ. ಮೋದಿ–ಶಾ ನಾಯಕತ್ವ ಬಿಜೆಪಿ ಗೆ ಬಹುಮತ ತರಲು ವಿಫಲವಾದ್ದರಿಂದ ಇದನ್ನು ಬಿಜೆಪಿ ಪಾರ್ಲಿಮೆಂಟರಿ ಪಕ್ಷ ಅಥವಾ ಆರೆಸ್ಸೆಸ್ ನಾಯಕತ್ವ ಸಹಜವಾಗಿಯೇ ಮಾಡುವುದು ಎಂದು ನಿರೀಕ್ಷಿಸಿದ್ದರು. ಭಾಗವತ್ ಟೀಕೆ ಈ ನಿರೀಕ್ಷೆಯನ್ನು ಎತ್ತರಿಸಿತ್ತು. ಇದು ಹುಸಿಯಾದಾಗ ನಿತೀಶ್–ನಾಯ್ಡು ಈ ಕೆಲಸ ಮಾಡಬಹುದು ಎಂಬ ಹೊಸ ನಿರೀಕ್ಷೆಯತ್ತ ಜಾರಿದರು. ಅದೂ ಹುಸಿಯಾಗುತ್ತಿದ್ದಂತೆ ಉತ್ತರ ಪ್ರದೇಶದಲ್ಲಿ ಶಾ–ಯೋಗಿ ಮುಖಾಮುಖಿ, ಯೋಗಿ–ಭಾಗವತ್ ಸಖ್ಯ, ಪರೋಕ್ಷ ಮೋದಿ–ಭಾಗವತ್ ತಿಕ್ಕಾಟ ಮತ್ತು ಇತ್ತೀಚಿನ ಉಪಚುನಾವಣಾ ಫಲಿತಾಂಶಗಳು ಹೊಸ ನಿರೀಕ್ಷೆಯನ್ನು ಹುಟ್ಟಿಸಿವೆ.

ಆದರೆ ಈ ನಿರೀಕ್ಷೆಯು ಎಷ್ಟು ವಾಸ್ತವಿಕ ಎಂದು ಅವು ಆಧರಿಸಿರುವ ಎರಡು ನಂಬಿಕೆಗಳನ್ನು ವಿಶ್ಲೇಷಿಸಿದರೆ ತಿಳಿಯುತ್ತದೆ. ಮೋದಿ–ಶಾ ನಾಯಕತ್ವವೇ ನಿರಂಕುಶ ಕೇಂದ್ರೀಕೃತ ಪ್ರಜಾಪ್ರಭುತ್ವ–ವಿರೋಧಿ ಆಳ್ವಿಕೆ ಮತ್ತು ಕಠೋರ ಜನ–ವಿರೋಧಿ ಸಾಮಾಜಿಕ–ಆರ್ಥಿಕ ನೀತಿಗಳಿಗೆ ಕಾರಣ ಎಂಬುದು ಇದರ ಹಿಂದಿರುವ ಒಂದು ನಂಬಿಕೆ. ಆರೆಸ್ಸೆಸ್ ಈ ನೀತಿಗಳನ್ನು ಅಥವಾ ಅವುಗಳ ಕಠೋರತೆಯನ್ನು ಕಡಿಮೆ ಮಾಡಲು ಬಯಸುತ್ತದೆ ಎಂಬುದು ಇನ್ನೊಂದು ನಂಬಿಕೆ. ಇವೆರಡೂ ಈಗಿನ ಆಳ್ವಿಕೆ ಕಾರ್ಪೊರೇಟ್–ಕೋಮುವಾದಿ ಜೋಡಣೆ–ಹೊಂದಾಣಿಕೆ ಎಂಬ ವಾಸ್ತವಾಂಶವನ್ನು ಪರಿಗಣಿಸುವುದಿಲ್ಲ. ಸೂಪರ್ ಲಾಭ ಗಳಿಸುವ ನವ–ಉದಾರವಾದಿ ನೀತಿಗಳನ್ನು ಜಾರಿ ಮಾಡಬೇಕಾದರೆ ದುಡಿಯುವ ಜನರನ್ನು ಒಡೆಯುವ ಕೋಮುವಾದಿ ಶಕ್ತಿಗಳು ಕಾರ್ಪೊರೇಟ್ ಗಳಿಗೆ ಅನಿವಾರ್ಯ. ಹಾಗಾಗಿ ಕಾರ್ಪೊರೇಟ್–ಕೋಮುವಾದಿ ಜೋಡಣೆ–ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಆರೆಸ್ಸೆಸ್–ಬಿಜೆಪಿ ಇದಕ್ಕೆ ಅತ್ಯುತ್ತಮ ವಾಹನ. ಆರೆಸ್ಸೆಸ್–ಬಿಜೆಪಿ ಯಲ್ಲಿ ಈ ಕಾರ್ಪೊರೇಟ್–ಕೋಮುವಾದಿ ಜೋಡಣೆ–ಹೊಂದಾಣಿಕೆಗೆ ಈಗ ಮೋದಿ–ಶಾ ಸೂಕ್ತ ನಾಯಕರೆಂದೇ ಅವರನ್ನು ಕಾರ್ಪೊರೇಟ್ ಗಳು ಬೆಂಬಲಿಸುತ್ತಾರೆ.

ಆರೆಸ್ಸೆಸ್ ನ "ಹಿಂದೂರಾಷ್ಟ್ರ"ದ ಕುರಿತು ಕಾರ್ಪೊರೇಟ್ ಗಳಿಗೆ ಯಾವುದೇ ಹಿಂಜರಿಕೆಯಿಲ್ಲ. ಹಾಗೆನೇ ಕಾರ್ಪೊರೇಟ್ ಸಹಕಾರವಿಲ್ಲದೆ "ಹಿಂದೂ ರಾಷ್ಟ್ರ" ಸಾಧ್ಯವಿಲ್ಲವೆಂದು ಆರೆಸ್ಸೆಸ್ ಗೂ ಗೊತ್ತು. ಸೈದ್ಧಾಂತಿಕವಾಗಿಯೂ ಕಾರ್ಪೊರೇಟ್ ಪ್ರಾಬಲ್ಯವು ಆರೆಸ್ಸೆಸ್ ಪರಿಕಲ್ಪನೆಯ ಅಸಮಾನ ಶ್ರೇಣಿಕೃತ "ಹಿಂದೂ ರಾಷ್ಟ್ರ"ಕ್ಕೆ ಸರಿಹೊಂದುತ್ತದೆ. ಮೋದಿ–ಶಾ ವಿಶ್ವಾಸ ಕಳೆದುಕೊಂಡು ಜನತೆಯನ್ನು ಮರುಳು ಮಾಡಲಾರರು ಮತ್ತು ಬೇರೆ ಯಾರಾದರೂ ಅದನ್ನು ಮಾಡಬಲ್ಲರಾದರೆ ಅವರನ್ನು ಕಾರ್ಪೊರೇಟ್ ಗಳು ಬೆಂಬಲಿಸುವವು. ನಿತೀಶ್–ನಾಯ್ಡು ಗಳನ್ನು ಎನ್.ಡಿ.ಎ. ಸರಕಾರಕ್ಕೆ ಬೆಂಬಲಿಸುವಂತೆ ಮಾಡುವಲ್ಲಿ ಕಾರ್ಪೊರೇಟ್ ಕೈಯೂ ಇಲ್ಲದಿಲ್ಲ. ಹಾಗಾಗಿ ಅವರು ಮೋದಿ–ಶಾ ವಿರುದ್ಧ ಬಂಡಾಯವೇಳಲಿಲ್ಲ. ಚುನಾವಣೆಗಳಲ್ಲಿ ಹಿನ್ನಡೆಯ ಕುರಿತ ಆತ್ಮಾವಲೋಕನದ ಭಾಗವಾಗಿ ಕಠೋರ ಕೋಮುವಾದಿ ಮತ್ತು ನವ–ಉದಾರವಾದಿ ನೀತಿಗಳೇ ಸೋಲಿಗೆ ಕಾರಣವೆಂದು ಯಾವುದೇ ಆರೆಸ್ಸೆಸ್–ಬಿಜೆಪಿ ಬಣ ಅಥವಾ ನಾಯಕ ಸೊಲ್ಲೆತ್ತಿಲ್ಲ ಎಂಬುದು ಬಿಜೆಪಿಯೊಳಗೆ ಮತ್ತು ಬಿಜೆಪಿ–ಆರೆಸ್ಸೆಸ್ ಗಳ ನಡುವೆ ನಡೆಯುತ್ತಿರುವ ತಿಕ್ಕಾಟದಲ್ಲಿ ಕಾರ್ಪೊರೇಟ್–ಕೋಮುವಾದಿ ಜೋಡಣೆ–ಹೊಂದಾಣಿಕೆಯ ಧೋರಣೆಯನ್ನಾಗಲಿ, ಅದರ ಕಠೋರ ಜನ–ವಿರೋಧಿ ಜಾರಿಯನ್ನಾಗಲಿ (ತಾತ್ಕಾಲಿಕ ತಂತ್ರವಾಗಿ ಸಹ)ವಿರೋಧಿಸುತ್ತಿಲ್ಲವೆಂಬುದನ್ನು ಗಮನಿಸಬೇಕು.

ಮೋದಿ–ಶಾ ಮತ್ತು ಆರೆಸ್ಸೆಸ್ ತಿಕ್ಕಾಟಕ್ಕೆ ವಸ್ತುನಿಷ್ಠ ನೆಲೆಯಿದೆಯೆ?

ಬಿಜೆಪಿಯೊಳಗಿನ ಮತ್ತು ಬಿಜೆಪಿ–ಆರೆಸ್ಸೆಸ್ ತಿಕ್ಕಾಟದ ಸಂದರ್ಭದಲ್ಲಿ ಇನ್ನೂ ಕೆಲವು ಮಿಥ್ಯೆಗಳನ್ನು ಗೋದಿ ಮಾಧ್ಯಮಗಳು ಮತ್ತು ಬಿಜೆಪಿ–ಆರೆಸ್ಸೆಸ್ ಗಳು ಹರಿಯಬಿಟ್ಟಿವೆ. ಬಿಜೆಪಿ ಸೋಲಿಗೆ ಬಿಜೆಪಿ–ಆರೆಸ್ಸೆಸ್ ಭಿನ್ನಮತ, ಹೊಂದಾಣಿಕೆಯ ಅಭಾವ, ತಿಕ್ಕಾಟ ಕಾರಣವೆಂಬುದು ಒಂದು ಇಂತಹ ಮಿಥ್ಯೆ. ಬಿಜೆಪಿ ಸೋತಾಗ ಅಥವಾ ಸೋಲುವ ಪರಿಸ್ಥಿತಿ ಕಂಡಾಗ ಆರೆಸ್ಸೆಸ್ ಇಂತಹ ಗುಲ್ಲು ಹರಡುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ಮೋದಿ–ಶಾ ನಾಯಕತ್ವ ಚುನಾವಣೆಗಳನ್ನು ಗೆಲ್ಲುತ್ತಿರುವವವರೆಗೆ, ಏನಕೇನ ಪ್ರಕಾರೇಣ ಸರಕಾರ ರಚಿಸುತ್ತಿರುವವರೆಗೆ, ಅವರ ನಿರಂಕುಶ ಕೇಂದ್ರೀಕೃತ ಪ್ರಜಾಪ್ರಭುತ್ವ–ವಿರೋಧಿ ಆಳ್ವಿಕೆ ಮತ್ತು ಕಠೋರ ಜನ–ವಿರೋಧಿ ಸಾಮಾಜಿಕ–ಆರ್ಥಿಕ ನೀತಿಗಳಿಗೆ ಯಾವುದೇ ತೀವ್ರ ವಿರೋಧ ವ್ಯಕ್ತ ಪಡಿಸಿರಲಿಲ್ಲ. ಬದಲಾಗಿ ಅದನ್ನು ಪ್ರಬಲವಾಗಿ ಬೆಂಬಲಿಸಿತ್ತು.

ಚುನಾವಣೆಯಲ್ಲಿ ಅದರಲ್ಲೂ ಉತ್ತರ ಪ್ರದೇಶದಲ್ಲಿ ಹೀನಾಯವಾಗಿ ಸೋತ ಮೇಲೆ ಒಂದು ವರ್ಷದಿಂದ ರಕ್ತಸಿಕ್ತ ಮಣಿಪುರದ ನೆನಪಾಯಿತು. ಕಳೆದ ಹತ್ತು ವರ್ಷಗಳಿಂದಲೂ ಇರುವ ಮೋದಿಯ "ದುರಹಂಕಾರ" "ಸೂಪರ್ ಮ್ಯಾನ್ ಆಗುವ ಆಸೆ" ಇದಕ್ಕಿದ್ದ ಹಾಗೆ ಕಾಣಲಾರಂಭಿಸಿತು. ಉತ್ತರ ಪ್ರದೇಶದಲ್ಲಿ ಬಿಜೆಪಿ ಸೋಲಿಗೆ ಮೋದಿ ನೀತಿಗಳೂ, ಯೋಗಿ 'ಬುಲ್ ಡೋಜರ್" ಆಡಳಿತ ಹಾಗೂ ಇಂಡಿಯಾ ಕೂಟ ಜನರ ಸಮಸ್ಯೆಗಳನ್ನು ಸಂವಿಧಾನಕ್ಕೆ ಅಪಾಯವನ್ನು ಎತ್ತಿದ್ದು ಎಲ್ಲವೂ ಕಾರಣ. ಯೋಗಿ–ಶಾ ತಿಕ್ಕಾಟ ಕೆಲವು ಕ್ಷೇತ್ರಗಳಲ್ಲಿ ಒಂದು ಅಂಶವಾಗಿರಬಹುದು. ಆದರೆ ಮುಖ್ಯ ಕಾರಣವಾಗಿರಲಿಲ್ಲ. ಯೋಗಿ–ಶಾ ತಿಕ್ಕಾಟಗಳ ನಡುವೆ ಕನ್ವರ್ ಧಾರ್ಮಿಕ ಯಾತ್ರಾದ ದಾರಿಯಲ್ಲಿ ಎಲ್ಲ ತಳ್ಳು ಗಾಡಿಗಳು ಮತ್ತು ಅಂಗಡಿಗಳು ಅದರ ಒಡೆಯನ ಹೆಸರಿನ ನಾಮಫಲಕ ಹಾಕಬೇಕೆಂಬ ಆಜ್ಞೆಯನ್ನು ಯೋಗಿ ಸರಕಾರ ಹೊರಡಿಸಿದರೆ ಶಾ ಬಣ ವಾಗಲಿ ಆರೆಸ್ಸೆಸ್ ಆಗಲಿ ಅದನ್ನು ವಿರೋಧಿಸಿಲ್ಲ.

ಆದರೆ ಮೋದಿ–ಶಾ ಮತ್ತು ಆರೆಸ್ಸೆಸ್ ತಿಕ್ಕಾಟಕ್ಕೆ ಯಾವುದೇ ವಸ್ತುನಿಷ್ಠ ನೆಲೆಯಿಲ್ಲವೆಂದಲ್ಲ. ಮೋದಿ–ಶಾ ಜೋಡಿ ಚುನಾವಣಾ ಬಾಂಡ್ ಸೇರಿದಂತೆ ಹಲವು ಮೂಲಗಳಿಂದ ಬಿಜೆಪಿಗೆ ಸಂಗ್ರಹಿಸಿದ ಭಾರೀ ಹಣದಿಂದ ಪ್ರತಿ ಜಿಲ್ಲೆಯಲ್ಲಿ ಸುಸಜ್ಜಿತ ಆಧುನಿಕ ಕಾರ್ಯಾಲಯ ಮತ್ತು ಸ್ವತಂತ್ರ ಕಾರ್ಯಕರ್ತರ ಪಡೆ ಕಟ್ಟಿದೆ. ಆ ಆತ್ಮವಿಶ್ವಾಸದಿಂದ ಆರೆಸ್ಸೆಸ್ ಗೆ ಸವಾಲು ಹಾಕುತ್ತಿದ್ದಾರೆ. ಆದರೇ ಇದು, ಆರೆಸ್ಸೆಸ್ ನ 'ಪ್ರಾಮಾಣಿಕ' 'ನಿಷ್ಠ' ಕಾರ್ಯಕರ್ತರಿರುವ ಶಾಖೆಗಳ ಮತ್ತು ಜನರ ಮಧ್ಯೆ ಕೆಲಸ ಮಾಡುವ ನೆಲೆ ಹೊಂದಿರುವ ಸತತ ಸಂಪರ್ಕದಲ್ಲಿರುವ ಹಲವು ಸಂಘಟನೆಗಳ, ಜನತೆಯ ಮೆದುಳಲ್ಲಿ ವಿಷ–ಸಗಣಿ ತುಂಬಬಲ್ಲ ವ್ಯಾಪಕ ವಿಶಾಲ ಜಾಲವನ್ನು ಸರಿಗಟ್ಟಬಲ್ಲುದೇ ಎಂಬುದು ಪ್ರಶ್ನೆ. ಅದೇ ಸಮಯದಲ್ಲಿ ಮೋದಿ–ಶಾ ಸವಾಲು ತೀವ್ರವಾದರೆ ಆರೆಸ್ಸೆಸ್ ಗೆ 'ಅಸ್ತಿತ್ವದ ಪ್ರಶ್ನೆ' ಬರಬಹುದು. ಅದು ಈಗಾಗಲೇ ಅಧಿಕಾರದ ಆಸೆಯಿಂದ ಭ್ರಷ್ಟರಾಗದ "ಪ್ರಾಮಾಣಿಕ" ನಿಷ್ಠ ಕಾರ್ಯಕರ್ತರನ್ನು ಪಡೆದು ಅವರನ್ನು ಹಾಗೆ ಉಳಿಸುವ ಸವಾಲನ್ನು ಎದುರಿಸುತ್ತಿದೆ. ಆದರೆ ಆರೆಸ್ಸೆಸ್ ತನ್ನ ಶತಮಾನೋತ್ಸವ ದ ವರ್ಷದಲ್ಲಿ "ಹಿಂದೂ ರಾಷ್ಟ್ರ" ಘೋಷಿಸಬಲ್ಲ, ಆಚರಣೆಗೆ ತರಬಲ್ಲ ಈಗಿರುವ ಬಿಜೆಪಿ ಸರಕಾರಕ್ಕೆ ಧಕ್ಕೆ ತರುವುದಿಲ್ಲ ಎಂಬುದು ಅಷ್ಟೇ ನಿಜ. ಈ ತಿಕ್ಕಾಟ ತೀವ್ರವಾದರೆ ಕಾರ್ಪೊರೇಟ್ ಗಳು ಅದನ್ನು ಹೇಗೆ ಶಮನಗೊಳಿಸುತ್ತಾರೆ, ಇವೆರಡರಲ್ಲಿ ಯಾವುದನ್ನು ಆರಿಸಿಕೊಳ್ಳುತ್ತಾರೆ ಎಂಬುದರ ಮೇಲೆ ಇದರ 'ಪರಿಹಾರ' ಅವಲಂಬಿಸುತ್ತದೆ.

ಹಾಗಾಗಿ ಪ್ರಜಾಸತ್ತಾತ್ಮಕ ಶಕ್ತಿಗಳು ಬಿಜೆಪಿ ಒಳಗೆ ಅಥವಾ ಬಿಜೆಪಿ–ಆರೆಸ್ಸೆಸ್ ಬಂಡಾಯ ದಿಂದ ಏನೂ ಸಕಾರಾತ್ಮಕವಾದ್ದು ನಿರೀಕ್ಷಿಸುವಂತಿಲ್ಲ. ಪ್ರಜಾಸತ್ತೆ–ವಿರೋಧಿ ಮತ್ತು ಜನ–ವಿರೋಧಿ ನೀತಿಗಳನ್ನು ಕೊನೆಗಾಣಿಸಲು ಜನಪರ ಬದಲಿ ನೀತಿಗಳನ್ನು ಜಾರಿ ಮಾಡಲು ಸಂಸತ್ತಿನ ಒಳಗೆ ಮತ್ತು ಹೊರಗೆ ಬೀದಿಯಲ್ಲಿ ಸತತವಾಗಿ ಹೋರಾಟ ನಡೆಸುವುದು, ಅದಕ್ಕೆ ಜನರನ್ನು ಅಣಿ ನೆರೆಸುವುದು ಒಂದೇ ದಾರಿ. ಪ್ರಜಾಸತ್ತಾತ್ಮಕ ಶಕ್ತಿಗಳು ರಾಜ್ಯಗಳಲ್ಲಿ ಸರಕಾರ ನಡೆಸುತ್ತಿರುವಲ್ಲಿ ಈ ನೀತಿಗಳನ್ನು ಜಾರಿ ಮಾಡುವುದೂ ಅಷ್ಟೇ ಮುಖ್ಯ.

ವರ್ಷಗಳ ಕಾಲ ದುರಸ್ತಿಗಾಗಿ ಮುಚ್ಚಿದಾಗಲೂ ರಸ್ತೆಯನ್ನು ಪೂರ್ಣ ಪ್ರಮಾಣದಲ್ಲಿ ಸಿದ್ದಗೊಳಿಸದ ಅಯೋಗ್ಯತನ ಈ ಹೆದ್ದಾರಿ ಪ್ರಾಧಿಕಾರದ್ದು. ಮಂಗಳೂರು, ಉಡುಪಿ ಹೆದ್ದಾರಿಯಂತೂ ಮರಣದ ದಾರಿಯಂತಾಗಿದೆ. ನಂತೂರಿನಿಂದ ಸುರತ್ಕಲ್ ವರಗೆ ಹೆದ್ದಾರಿಯಲ್ಲಿ ಮಳೆಯಿಂದ ಉಂಟಾಗಿರುವ ಗುಂಡಿಗಳಿಗೆ ಬಿದ್ದು ಕಳೆದ ಹತ್ತು ವರ್ಷಗಳಲ್ಲಿ ಪ್ರಾಣ ತೆತ್ತ ವಾಹನ ಸವಾರರ ಲೆಕ್ಕ ಇಟ್ಟವರಿಲ್ಲ. ನಂತೂರು, ಕೆಪಿಟಿ ಹೆದ್ದಾರಿ ಜಂಕ್ಷನ್ ಗಳು ವಾಹನ ಸವಾರರ ಪಾಲಿಗೆ ಪ್ರತಿ ದಿನದ ನರಕದ ದರ್ಶನ ಶುರು ಮಾಡಿ ಐದಾರು ವರ್ಷ ದಾಟಿದೆ. ಬೈಕಂಪಾಡಿ ರೈಲ್ವೇ ಮೇಲ್ಸೇತುವೆ ಕಳಪೆ ಡಿಸೈನಿಂಗ್ ಗೆ ಜಾಗತಿಕ ಪ್ರಶಸ್ತಿ ಗಳಿಸಬಹುದು. ಕೂಳೂರು ನಿರ್ಮಾಣ ಹಂತದ ಸೇತುವೆ ನಾಲ್ಕು

ರಾಷ್ಟ್ರೀಯ ಹೆದ್ದಾರಿಗಳ ದುಸ್ಥಿತಿ.....

ಪುಟ 8 ರಿಂದ

ವರ್ಷಗಳಾದರೂ ಶೇಕಡಾ 30 ರಷ್ಟು ಕಾಮಗಾರಿ ಪೂರ್ಣಗೊಳಿಸಿಲ್ಲ. ದುರ್ಬಲಗೊಂಡು ಸಂಚಾರಕ್ಕೆ ಅಯೋಗ್ಯ ಎಂದು ಹೆದ್ದಾರಿ ಪ್ರಾಧಿಕಾರವೇ ಸರ್ಟಿಫಿಕೇಟ್ ನೀಡಿರುವ ಹಳೆಯ ಸೇತುವೆ ಕುಸಿದು ಬಿದ್ದರೆ ಇಲ್ಲಿನ ಸ್ಥಿತಿ ಕಲ್ಪಿಸಲೂ ಅಸಾಧ್ಯ. ಮೂರು ದಶಕಗಳಿಂದ ಬಿಜೆಪಿ ಸಂಸದ ಶಾಸಕರನ್ನು ಕನಿಷ್ಟ ಪೈಪೋಟಿ ಇಲ್ಲದೆಯೂ ಈ ಜಿಲ್ಲೆಯಲ್ಲಿ ಗೆಲ್ಲಿಸಿದ್ದಕ್ಕೆ ಸಿಕ್ಕಿರುವ ಅಮೋಘ ಉಡುಗೊರೆ ಇದೆಲ್ಲವೂ.

ಜಿಲ್ಲಾಧಿಕಾರಿ ಮನಸ್ಸು ಮಾಡಿದರೆ?

ಇದಕ್ಕೆಲ್ಲಾ ಕೇಂದ್ರ ಸರಕಾರ, ಇಲ್ಲಿ ಸತತವಾಗಿ ಗೆದ್ದು ಅಸೆಂಬ್ಲಿ, ಪಾರ್ಲಿಮೆಂಟ್ ತಲುಪಿರುವ ಸಾಲು ಸಾಲು ಬಿಜೆಪಿ ಸಂಸದರು, ಶಾಸಕರು ನೇರ ಹೊಣೆ ಹೌದು. ಹಾಗಂತ ರಾಜ್ಯ ಸರಕಾರಕ್ಕೆ ಅಧಿಕಾರವೇ ಇಲ್ಲ ಅಂತ ಅಲ್ಲ. ಓರ್ವ ಜಿಲ್ಲಾಧಿಕಾರಿ ಮನಸ್ಸು ಮಾಡಿದರೆ, ಕನಿಷ್ಟ ಗುಂಡಿ ಮುಚ್ಚದ ಈ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ವಾರಂಟ್ ಹೊರಡಿಸಿ ತನ್ನ ಮುಂದೆ ತಂದು ಕೈಕಟ್ಟಿ ನಿಲ್ಲಿಸುವಂತೆ ಮಾಡಬಹುದು, ರಾಜ್ಯ ಸರಕಾರ, ಲೋಕೋಪಯೋಗಿ ಇಲಾಖೆ ತನ್ನ ಅಧಿಕಾರ ಬಳಸಿ ಹೆದ್ದಾರಿ ಪ್ರಾಧಿಕಾರದ ಸಭೆ ನಡೆಸಬಹುದು, ಸಮಸ್ಯೆಗಳನ್ನು ಸರಿಪಡಿಸುವಂತೆ ಆದೇಶಿಸಬಹುದು. (ಬೇಕಿದ್ದರೆ, ಕೇರಳ ಸರಕಾರದ ಮೇಲ್ವಿಚಾರಣಾ ವಿಧಾನವನ್ನು ಅಭ್ಯಾಸ ಮಾಡಬಹುದು) ಹಾಗೆ ಮಾಡುವ ಅವಕಾಶ, ಅಧಿಕಾರ ರಾಜ್ಯ ಸರಕಾರಕ್ಕೆ ಇದೆ. ಇಚ್ಚಾಶಕ್ತಿ ಇರಬೇಕಷ್ಟೆ, ಆಗ ಮಾತ್ರ ಈ ಕೇಂದ್ರದ ಒಕ್ಕೂಟ ಸರಕಾರ, ಅದರ ಇಲಾಖೆಗಳು, ಒಕ್ಕೂಟ ಸರಕಾರ ನಡೆಸುತ್ತಿರುವ ಬಿಜೆಪಿಯ ಜನಪ್ರತಿನಿಧಿಗಳಿಗೆ ತಮ್ಮ ಕರ್ತವ್ಯಗಳು ನೆನಪಿಗೆ ಬರುತ್ತವೆ. ಜನತೆಯೂ ಜೊತೆಗೆ ನಿಲ್ಲುತ್ತಾರೆ. ಇಲ್ಲದಿದ್ದಲ್ಲಿ ಕರಾವಳಿ ಜಿಲ್ಲೆಗಳ ಸಮಸ್ಯೆಗಳು ಮತ್ತಷ್ಟು ತೀವ್ರವಾಗಿ ಹೆಚ್ಚಳಗೊಳ್ಳುತ್ತಾ ಸಾಗುತ್ತದೆ.

–ಮುನೀರ್ ಕಾಟಿಪಳ್ಳ

ದೇಶದಲ್ಲಿನ ಗಮನಾರ್ಹ ಸಂಪತ್ತಿನ ಅಸಮಾನತೆಯನ್ನು ಬಹಿರಂಗಪಡಿಸಿದ ಅಂಬಾನಿ ಮಗನ ಮದುವೆ

ಸಿ.ಸಿದ್ದಯ್ಯ

ಪಡಿತರದ ಮೂಲಕ ತಿಂಗಳಿಗೆ 5 ಕೆಜಿ ಉಚಿತ ಧಾನ್ಯಗಳನ್ನು ಪಡೆಯುತ್ತಿರುವ 80 ಕೋಟಿ ಜನರಿರುವ ದೇಶದಲ್ಲಿ, 5,000 ಕೋಟಿ ರೂ. ವೆಚ್ಚ ಮಾಡಿ ಅಂಬಾನಿ ಕುಟುಂಬ ತನ್ನ ಮಗನ ಮದುವೆ ಮಾಡಿದೆ. ಕೆಲವರು ಇದನ್ನು 'ಕಷ್ಟಪಟ್ಟು ಗಳಿಸಿದ ಹಣವನ್ನು ಈ ರೀತಿ ಖರ್ಚುಮಾಡುವುದು ತಪ್ಪೇನೂ ಅಲ್ಲ ಎನ್ನುತ್ತಾರೆ, ಮತ್ತೆ ಕೆಲವರು ಇದನ್ನು ಭಾರತದಲ್ಲಿ ಬೆಳೆಯುತ್ತಿರುವ ಅಸಮಾನತೆಯ ಸಂಕೇತವಾಗಿ ಕಾಣುತ್ತಾರೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕೆಲವರು ಮಾತ್ರ ಅತ್ಯಧಿಕ ಸಂಪತ್ತನ್ನು ಗಳಿಸಲು ಅವಕಾಶ ಮತ್ತು ಬಹುಸಂಖ್ಯಾತ ಜನರು ಕಡು ಬಡತನದಲ್ಲಿರಲು ಕಾರಣವೇನು? ಇದಕ್ಕೆ ಉತ್ತರ 'ಶ್ರಮದ ಶೋಷಣೆಯನ್ನು ಅಂತರ್ಗತ ವ್ಯವಸ್ಥಿತ ವಿದ್ಯಮಾನ' ವನ್ನಾಗಿ ಮಾಡಿಕೊಂಡಿರುವ ಬಂಡವಾಳಶಾಹಿ ವ್ಯವಸ್ಥೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ದೇಶದ ಬಂಡವಾಳಗಾರರ ಸಂಪತ್ತು ಅತಿ ವೇಗದಲ್ಲಿ ಬೆಳೆಯುತ್ತಿರುವುದಕ್ಕೆ ಕಾರಣವೆಂದರೆ, ಸಾರ್ವಜನಿಕ ಸಂಪತ್ತನ್ನು ಲೂಟಿ ಮಾಡಲು ಹೆಚ್ಚಿನ ಅವಕಾಶ ಮಾಡಿಕೊಟ್ಟಿರುವ ಭಾರತದ ಪ್ರಭುತ್ವ.



ಭಾರತದ ಅತ್ಯಂತ ಶ್ರೀಮಂತ ವ್ಯಕ್ತಿಯ ಕಿರಿಯ ಪುತ್ರ ಅನಂತ್ ಅಂಬಾನಿ ಮತ್ತು ಸಹೋದ್ಯೋಗಿ ಉದ್ಯಮಿಯ ಪುತ್ರಿ ರಾಧಿಕಾ ಮರ್ಚೆಂಟ್ ಅವರ ವಿವಾಹ 2024ರ ಜುಲೈ ನಲ್ಲಿ ಮುಂಬೈನಲ್ಲಿ ಮೂರು ದಿನಗಳ ಕಾಲ ನಡೆಯಿತು. ಅಂದಾಜಿನ ಪ್ರಕಾರ ಐದು ತಿಂಗಳ ಮದುವೆಯ ವೆಚ್ಚ 5,000 ಕೋಟಿ ರೂ. (600 ಮಿಲಿಯನ್ ಅಮೆರಿಕನ್ ಡಾಲರ್ ಗಿಂತಲೂ ಹೆಚ್ಚು. ಇದು ಅಂಬಾನಿ ಸಂಪತ್ತಿನ ಶೇ. 0.5ರಷ್ಟು ಮಾತ್ರವೇ ಆಗಿದೆ ಎಂದು 'ದಿ ಗಾರ್ಡಿಯನ್' ವರದಿ ಮಾಡಿದೆ). ಈ ಮದುವೆ ಕಾರ್ಯಕ್ರಮಕ್ಕೆ ಭಾರತದ ಪ್ರಧಾನಿ ಸೇರಿದಂತೆ ದೇಶ ವಿದೇಶಗಳಿಂದ ಹಲವು ಗಣ್ಯರು, ಸಿನಿಮಾ ನಟರುಗಳು? ಬಂದಿದ್ದನ್ನು ಸುದ್ದಿಮಾಧ್ಯಮಗಲ್ಲಿ ನೋಡಿದ್ದೇವೆ.

ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿ

ಮುಖೇಶ್ ಅಂಬಾನಿ ವಿಶ್ವದ ಒಂಬತ್ತನೇ ಶ್ರೀಮಂತ ವ್ಯಕ್ತಿಯಾಗಿದ್ದು, ಫೋರ್ಬ್ಸ್ ಪ್ರಕಾರ 116 ಬಿಲಿಯನ್ ಡಾಲರ್ (ಅಂದಾಜು 10 ಲಕ್ಷ ಕೋಟಿ ರೂ.) ನಿವ್ವಳ ಆಸ್ತಿ ಹೊಂದಿದ್ದಾರೆ. ಅವರು ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿ. ಅವರು ರಿಲಯನ್ಸ್ ಇಂಡಸ್ಟ್ರೀಸ್ ಪೆಟ್ರೋಕೆಮಿಕಲ್ಸ್, ತೈಲ ಮತ್ತು ಅನಿಲ, ದೂರಸಂಪರ್ಕ ಮತ್ತು ಚಿಲ್ಲರೆ ವ್ಯಾಪಾರವನ್ನು ಒಳಗೊಂಡಿರುವ ವ್ಯವಹಾರದಲ್ಲಿ ತೊಡಗಿಕೊಂಡಿದ್ದಾರೆ.

ಮುಖೇಶ್ ಅಂಬಾನಿ ಮತ್ತು ನೀತಾ ಅಂಬಾನಿ ದಕ್ಷಿಣ ಮುಂಬೈನಲ್ಲಿರುವ 27 ಅಂತಸ್ತಿನ ಗೋಪುರದ ಆಂಟಿಲಿಯಾದಲ್ಲಿ ವಾಸಿಸುತ್ತಿದ್ದಾರೆ. ಇದರ ಮೌಲ್ಯ ಸುಮಾರು 15,000 ಕೋಟಿ ರೂ. ($2 ಬಿಲಿಯನ್). ಅಮೇರಿಕನ್ ಆರ್ಕಿಟೆಕ್ಚರಲ್ ಸಂಸ್ಥೆ ಪರ್ಕಿನ್ಸ್ & ವಿಲ್ ವಿನ್ಯಾಸಗೊಳಿಸಿದ ಮತ್ತು ಆಸ್ಟ್ರೇಲಿಯಾದ ಲೈಟನ್ ಹೋಲ್ಡಿಂಗ್ಸ್ ನಿರ್ಮಿಸಿದ ಆಂಟಿಲಿಯಾ ಬಕಿಂಗ್ಹ್ಯಾಮ್ ಅರಮನೆಯ ನಂತರ ವಿಶ್ವದ ಎರಡನೇ ಅತ್ಯಂತ ದುಬಾರಿ ಮನೆಯಾಗಿದೆ. ಕಟ್ಟಡವು ಮೂರು ಹೆಲಿಪ್ಯಾಡ್‌ಗಳು, 160–ಕಾರ್ ಗ್ಯಾರೇಜ್ ಮತ್ತು ಖಾಸಗಿ ಚಲನಚಿತ್ರ ಮಂದಿರವನ್ನು ಒಳಗೊಂಡಿದೆ.

ಅಗಾಧವಾದ ಅಸಮಾನತೆ

ಭಾರತದಲ್ಲಿ ದಿನದಿಂದ ದಿನಕ್ಕೆ ಜನರ ಕೊಳ್ಳುವ ಶಕ್ತಿ ಕುಗ್ಗುತ್ತಿರುವ ಸನ್ನಿವೇಶದಲ್ಲಿ, ಅಂಬಾನಿ ಕುಟುಂಬದ ಈ 'ರಾಯಲ್' ಮದುವೆಯು ಭಾರತದಲ್ಲಿನ ಆರ್ಥಿಕ ಅಸಮಾನತೆ ಎಷ್ಟು ಅಗಾಧವಾದ ಅಂತರವನ್ನು ಹೊಂದಿದೆ ಎಂಬುದನ್ನು ಇಡೀ ಜಗತ್ತಿಗೆ ತೋರಿಸಿ ಕೊಟ್ಟಿದೆ. ಈಗ ಇದರ ಬಗ್ಗೆ ದೇಶ ವಿದೇಶಗಳಲ್ಲಿ ಸಾಕಷ್ಟು ಚರ್ಚೆಗಳೂ ನಡೆಯುತ್ತಿವೆ. ಇಂತಹ ಅದ್ದೂರಿ ಮದುವೆಗಳನ್ನು ಸಮರ್ಥಿಸಿಕೊಳ್ಳುವ ಜನರೂ ನಮ್ಮಲ್ಲಿದ್ದಾರೆ. ಅವರ ಪ್ರಕಾರ, ಅವರು ಕಷ್ಟಪಟ್ಟು ಹಣ ಸಂಪಾದಿಸಿದ್ದಾರೆ. ಅವರು ಬಂಡವಾಳ ಹೂಡಿಕೆ ಮಾಡಿ ಉದ್ಯಮಗಳನ್ನು ಸ್ಥಾಪಿಸುವ ಮೂಲಕ ಲಾಭ ಗಳಿಸಿದ್ದಾರೆ, ಅವರು ಲಕ್ಷಾಂತರ ಜನರಿಗೆ ಉದ್ಯೋಗ ನೀಡಿದ್ದಾರೆ. 'ಯಾರಾದರೂ ಆಗಿರಲಿ, ಅವರು ತಾವು ಸಂಪಾದಿಸಿದ ಹಣವನ್ನು ಖರ್ಚು ಮಾಡುವ ಹಕ್ಕನ್ನು ಹೊಂದಿರುತ್ತಾರೆ' ಎನ್ನುತ್ತಾರೆ. ಹಣೆಬರಹ, ಅದೃಷ್ಟ ಇವುಗಳನ್ನು ನಂಬುವವರ ಪ್ರಕಾರ, 'ಅವರು ಅದೃಷ್ಟವಂತರು, ಅವರು ದೇವರಿಂದ ಪಡೆದುಕೊಂಡು ಬಂದ ಸೌಭಾಗ್ಯ;

ಆದರೆ, ಬಂಡವಾಳಗಾರರ ಸಂಪತ್ತು ಇಷ್ಟೊಂದು ಅಗಾದ ಪ್ರಮಾಣದಲ್ಲಿ ಏರಿಕೆಯಾಗಲು ಕಾರಣವೇನು? ಇದಕ್ಕೆ ಮೊದಲ ಕಾರಣ, ಶ್ರಮದ ಶೋಷಣೆಯನ್ನು 'ಅಂತರ್ಗತ ವ್ಯವಸ್ಥಿತ ವಿದ್ಯಮಾನ'ವನ್ನಾಗಿ ಮಾಡಿಕೊಂಡಿರುವ ಬಂಡವಾಳಶಾಹಿ ವ್ಯವಸ್ಥೆ. ಇದು ಬಂಡವಾಳಶಾಹಿಗಳಿಗೆ 'ಲಾಭ'ದ ಹೆಸರಿನಲ್ಲಿ ಶೋಷಣೆ ಮಾಡಿ ಹೆಚ್ಚೆಚ್ಚು ಗಳಿಸಿಕೊಳ್ಳಲು ಪ್ರಭುತ್ವವೇ ನೀತಿ ನಿಯಮಗಳನ್ನು ರೂಪಿಸಿರುತ್ತದೆ. ಅಂದರೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾನೂನು ಬದ್ದವಾಗಿಯೇ ಶೋಷಣೆ ಮಾಡಲು ಬಂಡವಾಳಗಾರರಿಗೆ ಅವಕಾಶ ಮಾಡಿಕೊಡಲಾಗುತ್ತದೆ.

ಶ್ರಮದ ಶೋಷಣೆಯನ್ನು 'ಅಂತರ್ಗತ ವ್ಯವಸ್ಥಿತ ವಿದ್ಯಮಾನ'ವಾಗಿ ಕಾರ್ಲ್ ಮಾರ್ಕ್ಸ್ ನೋಡುತ್ತಾರೆ. ಬೂರ್ಜ್ವಾ, ಬಂಡವಾಳದ ಮಾಲೀಕರು ಮತ್ತು ಭೂರಹಿತ ಅಥವಾ ಕಡಿಮೆ ಭೂಮಿಯನ್ನು ಹೊಂದಿರುವ ಶ್ರಮಜೀವಿಗಳ ನಡುವೆ ವಿಭಜಿಸಲ್ಪಟ್ಟ ಅಸಹನೀಯ ಅಸಮಾನ ಸಮಾಜ ಈ ಬಂಡವಾಳಶಾಹಿ ವ್ಯವಸ್ಥೆ ಎನ್ನುತ್ತಾರೆ ಮಾರ್ಕ್ಸ್.

ಅಂಬಾನಿ ಕುಟುಂಬ ಮಾತ್ರವಲ್ಲ, ಅದಾನಿ, ಟಾಟಾ, ಬಿರ್ಲಾ... ಇಂತಹ ದೊಡ್ಡ ಬಂಡವಾಳಗಾರರ ಸಂಪತ್ತು ಏರಿಕೆಯಾಗಲು ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ಇಂತಹ ಶೋಷಣಾ ನೀತಿ ನಿಯಮಗಳು ಕಾರಣವಾಗಿವೆ.

ಬಾಡಿಗೆ–ಬಡ್ಡಿ–ಲಾಭ–ದರ

ಬಂಡವಾಳದಾರರು ತಾವು ಉತ್ಪಾಧಿಸುವ ಸರಕುಗಳಿಗೆ ಹಾಗೂ ಸೇವೆಗಳಿಗೆ ತಾವೇ ದರ ನಿಗದಿ ಮಾಡುತ್ತಾರೆ. (ರೈತರಿಗೆ ಇಂತಹ ಹಕ್ಕುಗಳಿಲ್ಲ ಎಂಬುದನ್ನು ಗಮನಿಸಬೇಕು) ಈ ರೀತಿ ದರ ನಿಗದಿ ಮಾಡುವಾಗ, ಅದನ್ನು ಉತ್ಪಾದಿಸಲು ಬಳಸುವ ಕಚ್ಚಾವಸ್ತುಗಳ ಮೌಲ್ಯ, ಕಾರ್ಮಿಕರ ವೇತನದ ವೆಚ್ಚ, ಜೊತೆಗೆ ಲಾಭವನ್ನೂ ಸೇರಿಸಿ ದರ ನಿಗದಿಮಾಡುತ್ತಾರೆ. ಇದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ವಿಷಯ. ಆದರೂ, ಇತ್ತೀಚೆಗೆ ಜಿಯೋ ಮತ್ತು ಏರ್ಟೆಲ್ ರೀಚಾರ್ಜ್ ದರವನ್ನು ವಿಪರೀತ ಎನ್ನುವಂತೆ ಹೆಚ್ಚಳ ಮಾಡಿರುವುದಕ್ಕೆ ಇವ್ಯಾವುವೂ ಸಮರ್ಥ ಕಾರಣವಲ್ಲ, ಬದಲಿಗೆ ಲಾಭದ ದೃಷ್ಟಿಯಿಂದ ಮಾಡಿದ ಶೋಷಣೆಯಾಗಿದೆ.

ಬಂಡವಾಳದಾರರು ಉದ್ಯಮಗಳಲ್ಲಿ ಹೂಡಿಕೆ ಮಾಡುತ್ತಾರೆ. ಅದರಿಂದ ಒಂದಷ್ಟು ಜನರಿಗೆ ಉದ್ಯೋಗವೂ ಸಿಗುತ್ತದೆ. ಲಕ್ಷಾಂತರ ಜನರು ಇದರಿಂದ ಬದುಕು ಕಂಡುಕೊಳ್ಳುತ್ತಾರೆ. ತಮ್ಮ ಸರಕುಗಳಿಗೆ ಲಾಭ ಸೇರಿಸಿ 'ದರ' ನಿಗದಿ ಮಾಡಿದರೆ ತಪ್ಪೇನು? ಲಾಭ ಗಳಿಸಲಿಕ್ಕಾಗಿಯೇ ಅಲ್ಲವೇ ಬಂಡವಾಳ ಹೂಡಿಕೆ ಮಾಡುವುದು? ಲಾಭವೇ ಇಲ್ಲದೆ, ಯಾರಾದರೂ ಯಾಕಾಗಿ ಹೂಡಿಕೆ ಮಾಡಬೇಕು? ಈ ಒಂದು ಪ್ರಶ್ನೆಯೇ, ಹೂಡಿಕೆದಾರರು ತಮ್ಮ ಲಾಭಕ್ಕಾಗಿ ಹೂಡಿಕೆ ಮಾಡುತ್ತಾರೆ ವಿನಹ, ಜನರಿಗೆ ಉದ್ಯೋಗ ಕೊಡಬೇಕು ಎಂಬ ಕಾಳಜಿಯಿಂದ ಅಲ್ಲ ಎಂಬುದನ್ನು ಸ್ವಷ್ಟಪಡಿಸುತ್ತದೆ.

ಹೂಡಿಕೆದಾರರು ತಮ್ಮ ಸರಕುಗಳಿಗೆ ದರ ನಿಗದಿ ಮಾಡುವಾಗ, ಅದನ್ನು ಉತ್ಪಾದಿಸಲು ಬಳಸುವ ಕಚ್ಚಾವಸ್ತುಗಳ ಮೌಲ್ಯ, ಉತ್ಪಾದನೆಗೆ ತಗಲುವ ವೆಚ್ಚ, ಕಾರ್ಮಿಕರ ವೇತನ ಜೊತೆಗೆ 'ಲಾಭ'ವನ್ನಷ್ಟೇ ಸೇರಿಸಿ ದರ ನಿಗದಿ ಮಾಡುವುದಿಲ್ಲ, ತಾವು ಹೂಡಿಕೆ ಮಾಡಿರುವ ಬಂಡವಾಳಕ್ಕೆ 'ಬಡ್ಡಿ' ಲೆಕ್ಕಹಾಕಿ ಅದನ್ನೂ 'ದರ' ದಲ್ಲಿ ಸೇರಿಸುತ್ತಾರೆ. ತಾವು ಉದ್ಯಮ ಸ್ಥಾಪನೆ ಮಾಡಿರುವ ಭೂಮಿಗೂ 'ಬಾಡಿಗೆ' ಲೆಕ್ಕ ಹಾಕಿ ಅದನ್ನೂ 'ದರ'ದಲ್ಲಿ ಸೇರಿಸುತ್ತಾರೆ. 'ಬಾಡಿಗೆ', 'ಬಡ್ಡಿ' ಇವೂ ಕೂಡಾ ಲಾಭವೇ.

ತಮ್ಮ ಉದ್ಯಮದ ಭೂಮಿಗೆ ಬಾಡಿಗೆ ಲೆಕ್ಕ ಹಾಕಿದರೆ ತಪ್ಪೇನು? ತಾವು ಹೂಡಿಕೆ ಮಾಡುವ ಬಂಡವಾಳಕ್ಕೆ ಬಡ್ಡಿ ಲೆಕ್ಕ ಹಾಕಿದರೆ ತಪ್ಪೇನು? ಇಂತಹ ಪ್ರಶ್ನೆಗಳೂ ಮೂಡುತ್ತವೆ. ಸರಕುಗಳ ದರದಲ್ಲಿ ಸೇರಿಸಿರುವ ಲಾಭದ ಹಣದಿಂದ ಭೂಮಿ ಖರೀದಿಸುತ್ತಾರೆ, (ಕೆಲವೊಮ್ಮೆ, ಉದ್ಯಮಗಳ ಸ್ಥಾಪನೆಗೆ ಪ್ರೋತ್ಸಾಹ ನೀಡುವ ಹೆಸರಿನಲ್ಲಿ ಸರ್ಕಾರಗಳೇ ಉಚಿತವಾಗಿ ಅಥವಾ ಕಡಿಮೆ ಬೆಲೆಯಲ್ಲಿ ಭೂಮಿ ಒದಗಿಸಿಕೊಡುತ್ತವೆ.) ಅದೇ ಭೂಮಿಯಲ್ಲಿ ಉದ್ಯಮ ಸ್ಥಾಪಿಸಿ, ಆ ಭೂಮಿಗೆ 'ಬಾಡಿಗೆ' ಲೆಕ್ಕ ಹಾಕುತ್ತಾರೆ. ಲಾಭದಿಂದ ಬರುವ ಹಣವನ್ನು 'ಹೂಡಿಕೆ' ಮಾಡಿ, ಆ ಹೂಡಿಕೆಗೆ 'ಬಡ್ಡಿ' ಸೇರಿಸುತ್ತಾರೆ, ಅದರ ಜೊತೆಗೆ ಮೂರನೆಯದಾಗಿ 'ಲಾಭ' ಸೇರಿಸಿ, ತಮ್ಮ ಸರಕುಗಳಿಗೆ 'ದರ' ನಿಗದಿ ಮಾಡುತ್ತಾರೆ. ಒಟ್ಟು ಈ ಮೂರೂ ಕೂಡಾ ಶೋಷಣೆಗಳೇ ಆಗಿರುತ್ತವೆ.

ಶ್ರಮ ಶೋಷಣೆ:

ಶ್ರಮ ಶೋಷಣೆ ಮೂಲಕವೂ ಬಂಡವಾಳದಾರರು ತಮ್ಮ ಬಂಡವಾಳವನ್ನು ವೃದ್ಧಿಸಿಕೊಳ್ಳುತ್ತಾರೆ. ಕಡಿಮೆ ವೇತನ, ಹೆಚ್ಚಿನ ಅವಧಿಯ ಕೆಲಸ, ಕಾರ್ಮಿಕ ಕಾಯ್ದೆಗಳ ಉಲ್ಲಂಘನೆ... ಮುಂತಾದ ರೀತಿಯಲ್ಲಿ ಕಾರ್ಮಿಕರನ್ನು ಶೋಷಣೆ ಮಾಡುತ್ತಾರೆ. ವಿದೇಶಿ ಸಂಸ್ಥೆಗಳಿಗೆ ಹೊರಗುತ್ತಿಗೆ ಮೂಲಕ ಮಾಡಿಕೊಡುವ ಕೆಲಸಗಳಿಗೆ ಡಾಲರ್ ಲೆಕ್ಕದಲ್ಲಿ ಹೆಚ್ಚು ಹಣ ಪಡೆದು, ಅಂತಹ ಕೆಲಸ ಮಾಡುವ ಉದ್ಯೋಗಿಗಳಿಗೆ ರೂಪಾಯಿ ಲೆಕ್ಕದಲ್ಲಿ ಕಡಿಮೆ ವೇತನ ಕೊಡುವ ಮೂಲಕವೂ ಶ್ರಮ ಜೀವಿಗಳನ್ನು ಶೋಷಣೆ ಮಾಡಿ ಹೆಚ್ಚಿನ ಲಾಭ ಗಳಿಸುತ್ತಾರೆ.

ಬ್ಯಾಂಕುಗಳಿಂದ ಸಾಲ ಮತ್ತು ಮನ್ನಾ

ಇದು ಒಂದೆಡೆಯಾದರೆ, ಉದ್ಯಮಿಗಳು 'ಹೂಡಿಕೆ'ಗಾಗಿ ಸಾರ್ವಜನಿಕ ಬ್ಯಾಂಕುಗಳಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲ ಪಡೆಯುತ್ತಾರೆ. ಈ ರೀತಿ ಪಡೆದ ಸಾಲದ ಹಣವನ್ನು ಉದ್ಯಮಗಳಲ್ಲಿ 'ಹೂಡಿಕೆ' ಮಾಡುತ್ತಾರೆ. ಪಡೆದ ಸಾಲವನ್ನು ಮರುಪಾವತಿ ಮಾಡದೆ, ವಸೂಲಾಗದ ಸಾಲದ ಪ್ರಮಾಣ(ಎನ್.ಪಿ.ಎ.) ಹೆಚ್ಚಾಗಲು ಕಾರಣರಾಗುತ್ತಾರೆ. ಇಂತಹ ಬಹಳಷ್ಟು ಸಾಲಗಳನ್ನು ಬ್ಯಾಂಕುಗಳು ಮನ್ನಾ ಮಾಡುತ್ತವೆ. ಆಶ್ಚರ್ಯವೆಂದರೆ, ತಮ್ಮ ಸಂಪತ್ತನ್ನು ವೃದ್ದಿಸಿಕೊಳ್ಳುತ್ತಿರುವ ಉದ್ಯಮಿಗಳ ಸಾಲವನ್ನೂ ಕೂಡಾ 'ವಸೂಲಿ ಮಾಡಲು ಸಾಧ್ಯವಿಲ್ಲ' ಎಂಬ ಕಾರಣ ನೀಡಿ ಬ್ಯಾಂಕುಗಳು ಮನ್ನಾ ಮಾಡುತ್ತವೆ!! 2014–15ರಿಂದ 2022–23ರ ನಡುವಿನ ಒಂಬತ್ತು ಹಣಕಾಸು ವರ್ಷಗಳಲ್ಲಿ ಬ್ಯಾಂಕುಗಳು 14.56 ಲಕ್ಷ ಕೋಟಿ ರೂಪಾಯಿ ಮೊತ್ತದ ಕೆಟ್ಟ ಸಾಲವನ್ನು (ವಸೂಲಾಗದ ಸಾಲ) ಮನ್ನಾ ಮಾಡಿವೆ ಎಂದು, 2023ರ ಆಗಸ್ಟ್ ನಲ್ಲಿ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕರದ್ ಲಿಖಿತ ಉತ್ತರದಲ್ಲಿ ಸಂಸತ್ತಿಗೆ ತಿಳಿಸಿದ್ದಾರೆ. ಒಟ್ಟು 14,56,226 ಕೋಟಿ ರೂ.ಗಳಲ್ಲಿ ದೊಡ್ಡ ಕೈಗಾರಿಕೆಗಳು ಮತ್ತು ಸೇವೆಗಳ ಸಂಸ್ಥೆಗಳ ಸಾಲ ಮನ್ನಾ 7,40,968 ಕೋಟಿ ರೂ. ಎಂದು ಅವರು ಮಾಹಿತಿ ನೀಡಿದ್ದಾರೆ.

ಯಾವ ದೊಡ್ಡ ಕೈಗಾರಿಕೆಗಳಿಗೆ ಅಥವಾ ಯಾವ ಉದ್ಯಮಿಗಳಿಗೆ ಈ 14 ಲಕ್ಷ ಕೋಟಿ ರೂಪಾಯಿ ಸಾಲವನ್ನು ಮನ್ನಾ ಮಾಡಲಾಗಿದೆ ಎಂಬ ವಿವರಗಳನ್ನು ಮಾತ್ರ ಸರ್ಕಾರ ಅಥವಾ ರಿಸರ್ವ್ ಬ್ಯಾಂಕ್ ಬಹಿರಂಗಪಡಿಸುವುದಿಲ್ಲ. ಇವೆಲ್ಲವೂ ಸಾರ್ವಜನಿಕರ ಹಣ ಎಂಬುದನ್ನು

ಪುಟ 14 ಕ್ಕೆ

ಸಂವಿಧಾನ್ ಹತ್ಯಾ ದಿವಸ್: "ಜನತೆಯ ತೀರ್ಪಿನಿಂದ ತಬ್ಬಿಬ್ಬಾದವರ ಬೂಟಾಟಿಕೆ ಮತ್ತು ಹತಾಶೆಯ ಸಂಕೇತ"

ಜೂನ್ 25ನ್ನು 'ಸಂವಿಧಾನ್ ಹತ್ಯಾ ದಿವಸ್' ಎಂದು ಪ್ರತಿವರ್ಷ ಆಚರಿಸಲಾಗುವುದು ಎಂದು ಜುಲೈ 12 ರಂದು ಭಾರತ ಸರಕಾರ ಒಂದು ಗೆಜೆಟ್ ಅಧಿಸೂಚನೆ ಪ್ರಕಟಿಸಿದೆ.

"ಭಾರತದ ಜನತೆಗೆ ದೇಶದ ಸಂವಿಧಾನ ಮತ್ತು ಭಾರತದ ಗಟ್ಟಿ ಪ್ರಜಾಪ್ರಭುತ್ವದ ಮೇಲೆ ದೃಢ ವಿಶ್ವಾಸವಿದೆ. ಆದ್ದರಿಂದ ಭಾರತ ಸರಕಾರ ತುರ್ತುಪರಿಸ್ಥಿತಿಯ ಸಮಯದಲ್ಲಿ ನಡೆದ ಅಧಿಕಾರದ ಘೋರ ದುರುಪಯೋಗವನ್ನು ಎದುರಿಸಿದ ಮತ್ತು ಸಂಘರ್ಷ ನಡೆಸಿದ ಎಲ್ಲ ಜನರಿಗೆ ಶ್ರದ್ಧಾಂಜಲಿ ಸಲ್ಲಿಸಲು ಜೂನ್ 25ನ್ನು 'ಸಂವಿಧಾನ ಹತ್ಯಾ ದಿವಸ್' ಎಂದು ಘೋಷಿಸಿದೆ ಮತ್ತು ಭಾರತದ ಜನರನ್ನು ಭವಿಷ್ಯದಲ್ಲಿ ಯಾವುದೇ ರೀತಿಯಲ್ಲಿ ಅಧಿಕಾರದ ಘೋರ ದುರುಪಯೋಗದ ಸಮರ್ಥನೆ ಮಾಡದಿರುವಂತೆ ಬದ್ಧಗೊಳಿಸಿದೆ" ಎಂದು ಈ ಗೆಜೆಟ್ ಅಧಿಸೂಚನೆಯಲ್ಲಿ ಹೇಳಲಾಗಿದೆ.

ತುರ್ತು ಪರಿಸ್ಥಿತಿಯನ್ನು ಹೇರಿದ್ದು 25 ಜೂನ್, 1975 ರಂದು. ಈ ಜೂನ್ 25, 2024ರಿಂದ ಇದರ 50ನೇ ವರ್ಷ ಆರಂಭವಾಗಿದೆ. ಆ ಲೆಕ್ಕದಲ್ಲಾದರೂ, ಅಂದು ಈ ಘೋಷಣೆ ಮಾಡದೆ, ಜುಲೈ 12ರಂದು ಎನ್‌ಡಿಎ–3 ಸರಕಾರಕ್ಕೆ ಇದ್ದಕ್ಕಿದ್ದಂತೆ ಈ 'ಬದ್ಧತೆ'ಯ ಬಗ್ಗೆ 'ಜ್ಞಾನೋದಯ'ವಾಯಿತೇಕೆ ಎಂಬ ಪ್ರಶ್ನೆಯನ್ನು ಹಲವರು ಕೇಳುತ್ತಿದ್ದಾರೆ. ಇವರಿಗೆ ಕಳೆದ 10ವರ್ಷಗಳ ತಮ್ಮ ಆಳ್ವಿಕೆಯಲ್ಲಿ ಈ 'ಐಡಿಯ' ಹೊಳೆಯದೆ ಈಗ ಜುಲೈ 12ರಲ್ಲಿ ಹೊಳೆದಿರುವುದೇಕೆ ಎಂಬ ಪ್ರಶ್ನೆಯೂ ಸಹಜವಾಗಿಯೇ ಎದ್ದಿದೆ.

ಏಕೆಂದರೆ, ಸಂವಿಧಾನಕ್ಕೆ ಒಂದರ ಮೇಲೊಂದರಂತೆ ಹಾನಿ ತಟ್ಟಿರುವುದು ಕಳೆದ ಒಂದು ದಶಕದ ಬಿಜೆಪಿ–ಆರೆಸ್ಸೆಸ್ ಆಳ್ವಿಕೆಯಲ್ಲಿಯೇ, ಸಂಸತ್ತಿನಲ್ಲಿ ಬಹುಮತದ ದಬ್ಬಾಳಿಕೆ ನಡೆಸಿ ಕಾಯ್ದೆಗಳು, ಧೋರಣೆಗಳನ್ನು ಪಾಸು ಮಾಡಿಸಿಕೊಳ್ಳುವ ಮೂಲಕ ಇದು ನಡೆಯುತ್ತಿದೆ ಎಂಬ ಒಂದು ಸಾರ್ವತ್ರಿಕ ಭಾವನೆ ಉಂಟಾಗಿದೆ. ಆದ್ದರಿಂದ ಸಂವಿಧಾನದ ಮೇಲೆ ದಾಳಿಗಳು ನಡೆಯುತ್ತಿರುವುದು ಈಗ ಬಿಜೆಪಿ–ಆರೆಸ್ಸೆಸ್ ನೇತೃತ್ವದಲ್ಲಿ ಎಂದು ಕಾಣಲಾಗುತ್ತಿದೆ. ಆದ್ದರಿಂದಲೇ, ಹತ್ತು ವರ್ಷಗಳ ನಂತರ ಇದ್ದಕ್ಕಿದ್ದಂತೆ ಬಿಜೆಪಿ ನೇತೃತ್ವದ ಸರಕಾರ ಈ ನಿರ್ಧಾರಕ್ಕೆ ಬಂದಿದೆ ಎಂದು ಈ ಬಗ್ಗೆ ಪ್ರತಿಕ್ರಿಯಿಸುತ್ತ ಸಿಪಿಐ(ಎಂ) ಮುಖಂಡರಾದ ಬೃಂದಾ ಕಾರಟ್ ಹೇಳಿದ್ದಾರೆ.

ಮುಂದುವರೆದು ಅವರು ತುರ್ತು ಪರಿಸ್ಥಿತಿಯಲ್ಲಿ ಸ್ವತಃ ಆರೆಸ್ಸೆಸ್ ಮುಖ್ಯಸ್ಥ ದೇವರಸ್ ರವರೇ ಆಗಿನ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರಿಗೆ ಬರೆದ ಪತ್ರದಲ್ಲಿ ತುರ್ತುಪರಿಸ್ಥಿತಿಯ ಅಜೆಂಡಾವನ್ನು ಜಾರಿಗೆ ತರುವಲ್ಲಿ ತಮ್ಮ ಸಂಘಟನೆ ಸಹಕಾರ ನೀಡುತ್ತದೆಂದು ಹೇಳಿದ್ದುದನ್ನು ಬಿಜೆಪಿ ಮುಖಂಡರಿಗೆ ನೆನಪಿಸಿದ್ದಾರೆ. ಆ ಪತ್ರವನ್ನು ಈಗ ಪ್ರತಿಯೊಂದು ಆರೆಸ್ಸೆಸ್ ಶಾಖೆಯಲ್ಲಿ ಓದುವ ಮೂಲಕ ತಮ್ಮ ಸಂಘಟನೆಯ ಇತಿಹಾಸದ ಪರಿಚಯ ಅವರಿಗೆ ಆಗುವಂತೆ ಮಾಡಬೇಕು ಎಂದು ಅವರು ವ್ಯಂಗ್ಯವಾಗಿ ಹೇಳಿದ್ದಾರೆ.

***

ಜೂನ್ 25, 1975 ರಂದು ತುರ್ತು ಪರಿಸ್ಥಿತಿಯ ಘೋಷಣೆ, ಅದಕ್ಕೆ ತಕ್ಷಣದ ಕಾರಣ, ಕೆಲವು ದಿನಗಳ ಮೊದಲು, ಜೂನ್12, 1975ರಂದು ಅಲಹಾಬಾದ್ ಹೈಕೋರ್ಟ್ ರಾಯ್ ಬರೇಲಿಯಿಂದ ಇಂದಿರಾಗಾಂಧಿಯವರ ಆಯ್ಕೆಯನ್ನು ರದ್ದು ಮಾಡಿದ್ದು. ಆದರೆ ನಿಜವಾಗಿ, ಕಾಂಗ್ರೆಸ್ ಸರಕಾರದ ಧೋರಣೆಗಳ ವಿರುದ್ಧ ವ್ಯಾಪಕ ಜನಾಂದೋಲನದಲ್ಲಿ, 1974ರ ಐತಿಹಾಸಿಕ ರೈಲ್ವೆ ಮುಷ್ಕರ, ನಂತರ ಜೆ.ಪಿ. ನೇತೃತ್ವದ ನವ–ನಿರ್ಮಾಣ ಆಂದೋಲನದ ಹಿನ್ನೆಲೆಯಲ್ಲಿ ಅದು ಬಂದಿತ್ತು.

ಅದೇ ರೀತಿ ಈಗ ಅದರ 'ದಿನಾಚರಣೆ'ಯ ನಿರ್ಧಾರ 18ನೇ ಲೋಕಸಭಾ ಚುನಾವಣೆಯಲ್ಲಿ ಸಂವಿಧಾನದ ರಕ್ಷಣೆ ಒಂದು ಪ್ರಮುಖ ವಿಷಯವಾಗಿ ಎದ್ದು ಬಂದು, ಬಿಜೆಪಿ ತನ್ನ ಬಹುಮತವನ್ನು ಕಳೆದುಕೊಳ್ಳುವಂತಾದುದರ ಮತ್ತು ಮೋದಿ ಸರಕಾರದ ಬದಲು ಎನ್‌ಡಿಎ ಸರಕಾರ ರಚಿಸಬೇಕಾದ ಹಿನ್ನೆಲೆಯಲ್ಲಿ ಬಂದಿದೆ ಎಂಬುದನ್ನು ಗಮನಿಸಬಹುದು. ಕಳೆದ ಹತ್ತು ವರ್ಷಗಳಿಂದ ಬಿಜೆಪಿ–ಆರೆಸ್ಸೆಸ್ ಮುಖಂಡರು ಹಲವು ವಿಧಗಳಲ್ಲಿ ಭಾರತದ ಪ್ರಸ್ತುತ ಜಾತ್ಯತೀತ ಸಂವಿಧಾನವನ್ನು ಬದಲಿಸುವ ಸೂಚನೆ ನೀಡುತ್ತ ಬಂದಿದ್ದರು. ಆದ್ದರಿಂದ ಈ ಸಾರ್ವತ್ರಿಕ ಚುನಾವಣೆಯಲ್ಲಿ '400 ಪಾರ್' ಘೋಷಣೆ ಇದರ ಚರಮ ಬಿಂದು ಎಂದು ಹಲವರು ಕಂಡುದರಲ್ಲಿ ಆಶ್ಚರ್ಯವೇನಿಲ್ಲ.



ನಿಮ್ಮನ್ನು ಅನಿರ್ದಿಷ್ಟ ಅವಧಿಯ ವರೆಗೆ ತುರ್ತು ಪರಿಸ್ಥಿತಿ ಕಾನೂನುಗಳ ಅಡಿಯಲ್ಲಿ ಜೈಲಿನಲ್ಲಿಡುವ ಬದಲು, ಯುಎಪಿಎ ಅಡಿಯಲ್ಲಿ ಜೈಲಲ್ಲಿ ಇಟ್ಟಿದ್ದಕ್ಕೆ ನೀವು ನಮಗೆ ಋಣಿಯಾಗಿರಬೇಕು!

ವ್ಯಂಗ್ಯಚಿತ್ರ: ಸ್ಯಾನಿಟರಿ ಪ್ಯಾನಲ್ಸ್

ಅಲ್ಲದೆ, 49 ವರ್ಷಗಳ ಹಿಂದಿನ ಆ ತುರ್ತು ಪರಿಸ್ಥಿತಿ 'ಘೋಷಿತ ತುರ್ತುಪರಿಸ್ಥಿತಿ'ಯಾಗಿತ್ತು. 21 ತಿಂಗಳ ನಂತರ ಅದನ್ನು ಅಧಿಕೃತವಾಗಿ ಹಿಂತೆಗೆದುಕೊಳ್ಳಲಾಯಿತು. ಆದರೆ ಈಗ 2014ರ ನಂತರ, ಕಾಣುತ್ತಿರುವುದು ಅಘೋಷಿತ ತುರ್ತುಪರಿಸ್ಥಿತಿ ಎಂಬ ಮಾತು ಸರ್ವೇ ಸಾಮಾನ್ಯವಾಗುವಂತಹ ಅನೇಕ ಘಟನೆಗಳು ದಾಖಲಾಗಿವೆ.

ಆದ್ದರಿಂದ ಈಗ "ಅಧಿಕಾರದ ಘೋರ ದುರುಪಯೋಗವನ್ನು ಎದುರಿಸಿದ ಮತ್ತು ಸಂಘರ್ಷ ನಡೆಸಿದ ಎಲ್ಲ ಜನರಿಗೆ ಶ್ರದ್ಧಾಂಜಲಿ ಸಲ್ಲಿಸಲು ಜೂನ್ 25ನ್ನು 'ಸಂವಿಧಾನ ಹತ್ಯಾ ದಿವಸ್' ಎಂದು ಘೋಷಿಸಿದೆ ಮತ್ತು ಭಾರತದ ಜನರನ್ನು ಭವಿಷ್ಯದಲ್ಲಿ ಯಾವುದೇ ರೀತಿಯಲ್ಲಿ ಅಧಿಕಾರದ ಘೋರ ದುರುಪಯೋಗದ ಸಮರ್ಥನೆ ಮಾಡದಿರುವಂತೆ ಬದ್ಧಗೊಳಿಸಿದೆ" ಎಂದಿರುವುದು ಸಹಜವಾಗಿಯೇ ಬಹುಮಂದಿಗೆ ಶುದ್ಧ ಬೂಟಾಟಿಕೆಯಾಗಿ ಕಂಡಿದೆ. ಮತ್ತು ಮೈ ಪರಿಸಿಕೊಳ್ಳುವಂತಾಗಿರುವ ಹತಾಶೆಯ ಸನ್ನಿವೇಶದ ಸಂಕೇತವಾಗಿದೆ ಎಂದೇ ಇದನ್ನು ವಿಶ್ಲೇಷಿಸಬಹುದು.

***

ನಿಜ ಹೇಳಬೇಕೆಂದರೆ, 'ಸಂವಿಧಾನ್ ಹತ್ಯಾದಿವಸ್' ಎಂಬ ನಾಮಕರಣವೇ ಅಸಂಬದ್ಧ ಎನ್ನುತ್ತಾರೆ, ಚಿಂತಕ ಎಸ್.ಎನ್ .ಸಾಹು. (ನ್ಯೂಸ್‌ಕ್ಲಿಕ್, ಜುಲೈ13) ಜೂನ್ 25, 1975ರಂದು ಸಂವಿಧಾನದ ಹತ್ಯೆಯಾಗಿದ್ದರೆ, ಗೃಹ ಮಂತ್ರಿ ಮತ್ತು ಪ್ರಧಾನ ಮಂತ್ರಿಗಳು ಸೇರಿದಂತೆ 18ನೇ ಲೋಕಸಭೆಯ ಸದಸ್ಯರು ಯಾವುದರ ಅಡಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು? ಸಂಸತ್ತಿನ ಹತ್ಯೆ ಈಗಾಗಲೇ ಆಗಿದ್ದರೆ, ಮೋದಿ ಸರಕಾರ 2015ರಿಂದ ನವಂಬರ್ 26 ರಂದು 'ಸಂವಿಧಾನ ದಿನ'ದ ಆಚರಣೆಯನ್ನು ಆರಂಭಿಸಿದ್ದು ಹೇಗೆ?

ಖಂಡಿತವಾಗಿಯೂ ಬೇರೆ ಅರ್ಥಪೂರ್ಣ ಹೆಸರು ಕೊಡಬಹುದಿತ್ತು. ಸಂವಿಧಾನ ಸುರಕ್ಷಾ ದಿವಸ್ ಎಂದೋ, ಸಂವಿಧಾನ್ ಗೌರವ್ ದಿವಸ್ ಎಂದೋ ಹೆಸರಿಸಬಹುದಿತ್ತು ಎನ್ನುತ್ತಾರೆ ಅವರು.

ಜನವರಿ 30ನ್ನು 'ಗಾಂಧಿ ಹತ್ಯಾದಿವಸ್' ಎಂದು ಬದಲಿಸಿದ್ದರೆ ಅದಕ್ಕೊಂದು ಅರ್ಥವಿರುತ್ತಿತ್ತು. ಅದನ್ನು ಈ ಸರಕಾರ ಮಾಡಲಿಲ್ಲ.

ಜನರ ತೀರ್ಪಿನಿಂದ ತಬ್ಬಿಬ್ಬಾಗಿರುವ ಸರಕಾರ ಈ ಹಾಸ್ಯಾಸ್ಪದ ಹೆಸರನ್ನು ಕೊಟ್ಟಿದೆ ಎಂದು ಅವರು ಹೇಳುತ್ತಾರೆ.

ಅದೇನೇ ಇರಲಿ, ಇನ್ನು ಮುಂದೆ ಪ್ರತಿ ಜೂನ್ 25ರಂದು ಗೆಜೆಟಿನಲ್ಲಿ ಹೇಳಿದಂತೆ "ಅಧಿಕಾರದ ಘೋರ ದುರುಪಯೋಗವನ್ನು ಎದುರಿಸಿದ ಮತ್ತು ಸಂಘರ್ಷ ನಡೆಸಿದ ಎಲ್ಲ ಜನರಿಗೆ ಶ್ರದ್ಧಾಂಜಲಿ" ಅರ್ಪಿಸುವಾಗ ಆ ಪಟ್ಟಿಯಲ್ಲಿ ಜೈಲಿನಲ್ಲೆ ಪ್ರಾಣ ಕಳಕೊಂಡ ಫಾದರ್ ಸ್ಟಾನ್ ಸ್ವಾಮಿಯವರ ಹೆಸರನ್ನು ಸೇರಿಸಬಹುದೇ, ಯುಎಪಿಎ ಅಡಿಯಲ್ಲಿ ವರ್ಷಾನುಗಟ್ಟಲೆ ಜೈಲಿನಲ್ಲಿ ಕಳೆದವರು, ಈಗಲೂ ಕಳೆಯುತ್ತಿರುವವರು , ಏಳುತಿಂಗಳ ಕಾಲ "ಕಾನೂನಿನ ಕಣ್ಣಲ್ಲಿ ಅನೂರ್ಜಿತ" ಎಂದು ಸ್ವತಃ ಸುಪ್ರಿಂ ಕೋರ್ಟ್ ಹೇಳಿರುವ ಯುಎಪಿಎ ಬಂಧನದಲ್ಲಿದ್ದ ಪ್ರಬೀರ್ ಪುರಕಾಯಸ್ಥ ರಂತವರನ್ನು ಈ ದಿನಾಚರಣೆಯ ವೇದಿಕೆಗಳಿಗೆ ಆಹ್ವಾನಿಸಬಹುದೇ? ಎಂದು ಪ್ರಖ್ಯಾತ ಪತ್ರಕರ್ತ ರವೀಶ್ ಕುಮಾರ್ ಪ್ರಶ್ನಿಸಿದ್ದಾರೆ.



ವ್ಯಂಗ್ಯಚಿತ್ರ: ರಾಕೇಶ್ ರಂಜನ್

***


ತುರ್ತು ಪರಿಸ್ಥಿತಿಯಲ್ಲಿನ ಅಧಿಕಾರದ ಘೋರ ದುರುಪಯೋಗದ ಬಗ್ಗೆ ಹೇಳುವಾಗ ಮಾತ್ರವಲ್ಲ, ಅದರ ವಿರುದ್ಧ ಸಂಘರ್ಷದ ಬಗ್ಗೆ ಹೇಳುವಾಗಲೂ, ಬಿಜೆಪಿ ಸರಕಾರದ ಬೂಟಾಟಿಕೆಯೋ ಅಥವ ಅದರ ಅಜ್ಞಾನವೋ ಬಯಲಿಗೆ ಬಂದಿದೆ. ಏಕೆಂದರೆ ಅದರ ಮಾರ್ಗದರ್ಶಕ ಸಂಘಟನೆ, ಸ್ವಾತಂತ್ರ್ಯ ಆಂದೋಲನಕ್ಕೆ ಮಾತ್ರವಲ್ಲ, ಈ ಮೇಲೆ ಹೇಳಿದಂತೆ, ತುರ್ತುಪರಿಸ್ಥಿತಿಗೂ ವಿಶ್ವಾಸಘಾತ ಬಗೆದಿರುವ ಸಂಘಟನೆ ಎಂಬುದನ್ನು ಈಗಾಗಲೇ ಹಲವು ವಿಶ್ಲೇಷಕರು ಬಯಲಿಗೆ ತಂದಿದ್ದಾರೆ. 'ಕ್ಷಮಾಯಾಚನಾ ಪತ್ರ'ಗಳ ಪರಂಪರೆ 1975ರಲ್ಲೂ ಮುಂದುವರೆಯಿತು ಎಂಬುದಕ್ಕೆ ಸಾಕಷ್ಟು ಪುರಾವೆಗಳನ್ನು ಅವರು ಮುಂದಿಟ್ಟಿದ್ದಾರೆ.

ಆರೆಸ್ಸೆಸ್ ಸರಸಂಘಚಾಲಕ ಬಾಳಾಸಾಹೇಬ್ ದೇವರಸ್, ತಮ್ಮ ಸಂಘಟನೆಯ ಮೇಲೆ ಹೇರಿದ್ದ ನಿಷೇಧವನ್ನು ತೆಗೆಯಲು ವಿನಂತಿಸುತ್ತ, ನಿಷೇಧವನ್ನು ತೆಗೆದರೆತಮ್ಮ ಕಾರ್ಯಕರ್ತರು ಸಂಜಯಗಾಂಧಿಯ ಕುಖ್ಯಾತ 20–ಅಂಶಗಳ ಕಾರ್ಯಕ್ರಮದ ಜಾರಿಯಲ್ಲಿ ನೆರವಾಗಬಲ್ಲರು ಎಂದು ಇಂದಿರಾ ಗಾಂಧಿಯವರಿಗೆ ಪತ್ರ ಬರೆದಿದ್ದರು ಎಂದಿದ್ದಾರೆ ತುರ್ತು ಪರಿಸ್ಥಿತಿಯ 25ನೇ ವಾರ್ಷಿಕದ ಸಂದರ್ಭದಲ್ಲಿ ತೆಹಲ್ಕಾ' ಪತ್ರಿಕೆಯಲ್ಲಿ ಪ್ರಭಾಷ್ ಜೋಶಿಯವರು. ಹಲವಾರು ಬಿಜೆಪಿ–ಆರೆಸ್ಸಿಗರು 'ಮಾಫಿನಾಮಾ' (ಕ್ಷಮಾಯಾಚನಾ ಪತ್ರ)ಗಳನ್ನು ಕೊಟ್ಟು ಜೈಲಿನಿಂದ ಹೊರಗೆ ಬಂದರು, ಕೇವಲ ಅದ್ವಾಣಿ, ವಾಜಪೇಯಿ, ಜೈಟ್ಲಿ ಮಾತ್ರ ಜೈಲಿನಲ್ಲಿ ಉಳಿದರು ಎನ್ನಲಾಗಿದೆ.

ಆರೆಸ್ಸೆಸ್ ಮೇಲೆ ನಿಷೇಧವಿದ್ದರೂ, ದೇವರಸ್ ರವರು ಪ್ರಧಾನ ಮಂತ್ರಿಯ ನಿವಾಸದೊಂದಿಗೆ ನೇರ ಸಂಪರ್ಕ ಹೊಂದಿದ್ದರು, , ದೇಶದಲ್ಲಿ 'ಸುವ್ಯವಸ್ಥೆ ಮತ್ತು ಶಿಸ್ತು ತರುವ''ಕ್ರಮಗಳನ್ನು ಬೆಂಬಲಿಸಿದರು, ಅವರು ಇಂದಿರಾಗಾಂಧಿ ಮಾತ್ರವಲ್ಲ ತುರ್ತುಪರಿಸ್ಥಿತಿಯ ಗೂಂಡಾಪಡೆಗಳ ನೇತೃತ್ವ ವಹಿಸಿದ್ದರೆನ್ನಲಾದ ಸಂಜಯ್ ಗಾಂಧಿಯವರನ್ನೂ ಭೇಟಿಯಾಗಲು ಪ್ರಯತ್ನಿಸಿದ್ದರು, ಜನಗಳಲ್ಲಿ ಅದರಲ್ಲೂ ಮುಸ್ಲಿಮರಲ್ಲಿ ಕುಟುಂಬ ಯೋಜನೆಯನ್ನು ಬಲವಂತಪಡಿಸುವ ಸಂಜಯ್ ಗಾಂಧಿ ಕ್ರಮದ ಬಗ್ಗೆ ದೇವರಸ್ ಪ್ರಶಂಸೆಯನ್ನೂ ವ್ಯಕ್ತಪಡಿಸಿದ್ದರು ಎಂದು ಆಗ ವರದಿಯಾಗಿತ್ತು.

ಬಾಳಾಸಾಹೇಬ್ ದೇವರಸ್‌ರವರು, ತುರ್ತು ಪರಿಸ್ಥಿತಿ ಹೇರಿದ ಎರಡು ತಿಂಗಳ ಒಳಗೇ ಅಗಸ್ಟ್ 22, 1975ರಂದು ಇಂದಿರಾಗಾಂಧಿಯವರಿಗೆ ಮೊದಲ ಪತ್ರಬರೆದರು, ಅದರಲ್ಲಿ ಇಂದಿರಾರವರ ಆಗಸ್ಟ್15ರ ಕೆಂಪುಕೋಟೆ ಭಾಷಣವನ್ನು ಹೊಗಳ್ತಿ ಬರೆದರು ಎಂದು ಅಧ್ಯಯನಕಾರ

ಪುಟ 14 ಕ್ಕೆ



ವ್ಯಂಗ್ಯಚಿತ್ರ: ಪಿ.ಮಹಮ್ಮದ್



ಅಂದು ಎಲ್ಲ ಸರಕಾರೀ ಕಚೇರಿಗಳಿಗೆ ರಜಾದಿನವೇ?

ಸಿಬಿಐ.. ಇಡಿ, ..ಎನ್‌ಎಸ್‌ಎ...ಐಟಿ...ಗೆ ಮಾತ್ರ

ವ್ಯಂಗ್ಯಚಿತ್ರ: ನಲ ಪೊನ್ನಪ್ಪ

ಯುರೋಪಿನಲ್ಲಿ ಫ್ಯಾಸಿಸಂನ ಬೆಳವಣಿಗೆಗೆ ಫ್ರಾನ್ಸಿನ ಎಡಪಂಥೀಯರಿಂದ ತಡೆ

ನವ–ಉದಾರವಾದಿ ಬಂಡವಾಳಶಾಹಿಯ ಅಡಿಯಲ್ಲಿ ಆರ್ಥಿಕ ಸ್ಥಗಿತತೆಯು ತಮ್ಮ ಜೀವನಮಟ್ಟವನ್ನು ಹಿಂಡಿದ ಪರಿಣಾಮವಾಗಿ ಮೂಲಭೂತವಾಗಿ ಜನಸಾಮಾನ್ಯರಲ್ಲಿ ಮೂಡಿದ ಕೋಪವನ್ನು ಫ್ಯಾಸಿಸಂ ದುರ್ಬಳಕೆ ಮಾಡಿಕೊಳ್ಳುವ ಅವಕಾಶ ಉದ್ಭವಿಸಿದೆ. ಇಂತಹ ಸಂದರ್ಭದಲ್ಲಿ ಅಲ್ಪಸಂಖ್ಯಾತರ ವಿರುದ್ಧ ದ್ವೇಷವನ್ನು ಹರಡುವ ಮತ್ತು ಕಾರ್ಮಿಕ ವರ್ಗವನ್ನು ವಿಭಜಿಸುವ ಫ್ಯಾಸಿಸಂ, ಕಾರ್ಮಿಕ ವರ್ಗವನ್ನು ವಂಚಿಸುವ ಅಪರಾಧವನ್ನೂ ಮಾಡುತ್ತದೆ. ಕಾರ್ಮಿಕ ವರ್ಗದ ಬೆಂಬಲವನ್ನು ಗಳಿಸುವ ಉದ್ದೇಶದಿಂದ ಉದಾರವಾದಿ ಬಂಡವಾಳಶಾಹಿ ರಾಜಕೀಯ ಪಕ್ಷಗಳಿಗಿಂತ ತಾನು ಭಿನ್ನವೆಂದು ಅದು ಸೋಗು ಹಾಕುತ್ತದೆ; ಪ್ರಮುಖ ಎಡಪಂಥೀಯ ವಿಭಾಗಗಳು ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ತಮ್ಮ ಜವಾಬ್ದಾರಿಯನ್ನು ತೊರೆದಿರುವುದು ಮತ್ತು ಬಂಡವಾಳಶಾಹಿ ರಾಜಕೀಯ ಪಕ್ಷಗಳ ಜಾಡು ಹಿಡಿದಿರುವುದರಿಂದಾಗಿ ಕೂಡ ಇಂತಹ ಸೋಗು ಹಾಕುವ ಅವಕಾಶಗಳೂ ಹುಟ್ಟಿಕೊಳ್ಳುತ್ತವೆ. ಇದರಿಂದಾಗಿ ಯುರೋಪಿನಲ್ಲಿ ಫ್ಯಾಸಿಸಂ ವೇಗವಾಗಿ ಬೆಳೆಯುತ್ತಿದೆ. ಇಲ್ಲಿಯೇ ಫ್ರಾನ್ಸ್ ವಿಭಿನ್ನವಾಗಿ ಕಾಣುತ್ತಿರುವುದು. ಎಡಪಂಥೀಯರು ನವ–ಉದಾರವಾದವನ್ನು ಮೀರಿ ಮುಂದೆ ಹೋಗುವ ಅಜೆಂಡಾವನ್ನು ಅಳವಡಿಸಿಕೊಳ್ಳುವ ಕ್ರಮವು ಮಾತ್ರವೇ ಫ್ಯಾಸಿಸ್ಟರು ನಿಂತ ನೆಲ ಕುಸಿಯುವಂತೆ ಮಾಡುವಲ್ಲಿ ಪರಿಣಾಮಕಾರಿಯಾಗುತ್ತದೆ ಎಂಬುದನ್ನು ಫ್ರಾನ್ಸ್ ತೋರಿಸಿಕೊಟ್ಟಿದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಇತ್ತೀಚಿನ ವರ್ಷಗಳಲ್ಲಿ ಕೆಲವು ದೇಶಗಳಲ್ಲಿ ಫ್ಯಾಸಿಸ್ಟ್ ನಿಲುವು ಹೊಂದಿದ ಸರ್ಕಾರಗಳು ಅಧಿಕಾರಕ್ಕೆ ಬಂದಿರುವುದು ಅಥವಾ ಇನ್ನೂ ಕೆಲವು ದೇಶಗಳಲ್ಲಿ ಅಧಿಕಾರ ಹಿಡಿಯುವ ಸಂಭಾವ್ಯತೆ ಇರುವುದು ಒಂದು ವಾಸ್ತವವೂ ಹೌದು ಮತ್ತು ಒಂದು ಅಪಾಯವೂ ಹೌದು. ಈಗ ಯುರೋಪಿನ ಹಲವು ದೇಶಗಳಲ್ಲಿ ಫ್ಯಾಸಿಸ್ಟರು ಅಧಿಕಾರದಲ್ಲಿದ್ದಾರೆ. ಫ್ರಾನ್ಸ್, ಈ ಫ್ಯಾಸಿಸ್ಟ್ ಸರ್ಕಾರಗಳ ಪಟ್ಟಿಗೆ ಸೇರಿಕೊಳ್ಳುವುದರಲ್ಲಿತ್ತು. ಒಂದು ವೇಳೆ ಅದು ಘಟಿಸಿದ್ದರೆ, ಫ್ರಾನ್ಸ್, ಇಟಲಿಯ ನಂತರ, ಫ್ಯಾಸಿಸ್ಟ್ ಸರ್ಕಾರವನ್ನು ಹೊಂದಿದ ಎರಡನೇ ಪ್ರಮುಖ ಯುರೋಪಿಯನ್ ದೇಶವಾಗುತ್ತಿತ್ತು ಮತ್ತು ಅದು ಐತಿಹಾಸಿಕ ಮಹತ್ವ ಹೊಂದಿದ ಒಂದು ಘಟನೆಯೂ ಆಗುತ್ತಿತ್ತು. ಏಕೆಂದರೆ, ಹಿಟ್ಲರನೊಂದಿಗೆ ಸಹಕರಿಸಿದ ಕುಖ್ಯಾತಿಗೆ ಪಾತ್ರನಾದ ಮಾರ್ಷಲ್ ಪೆಟೈನ್ ನೇತೃತ್ವದ ವಿಶಿ ಸರ್ಕಾರದ ನಂತರ ಮೊದಲ ಬಾರಿಗೆ ಒಂದು ಫ್ಯಾಸಿಸ್ಟ್ ಸರ್ಕಾರವನ್ನು ಫ್ರಾನ್ಸ್ ಹೊಂದುತ್ತಿತ್ತು. ಈ ತಿರುವು, ನಾಜಿಗಳ ಆಕ್ರಮಣದ ವಿರುದ್ಧ ವೀರೋಚಿತ ಹೋರಾಟವನ್ನು ನಡೆಸಿದ್ದ ಮತ್ತು ಒಂದು ಶಕ್ತಿಶಾಲಿ ಎಡ ಮತ್ತು ಟ್ರೇಡ್ ಯೂನಿಯನ್ ಚಳುವಳಿಯನ್ನು ನಿರಂತರವಾಗಿ ಹೊಂದಿರುವ ಫ್ರಾನ್ಸ್‌ನಂತಹ ದೇಶಕ್ಕೆ ಒಂದು ಘೋರ ದುರಂತವೂ ಆಗುತ್ತಿತ್ತು. ಈ ದುರಂತವನ್ನು ತಪ್ಪಿಸಿರುವುದು ಮಾತ್ರವಲ್ಲದೆ, ಫ್ರೆಂಚ್ ಚುನಾವಣೆಯ ಎರಡನೇ ಮತ್ತು ಅಂತಿಮ ಸುತ್ತಿನಲ್ಲಿ 'ನ್ಯೂ ಪಾಪ್ಯುಲರ್ ಫ್ರಂಟ್' (ಎನ್‌ಎಫ್‌ಪಿ–ನವ ಜನತಾ ರಂಗ) ವಿಜಯಶಾಲಿಯಾಗಿ ಹೊಮ್ಮಿದೆ.

ಫ್ಯಾಸಿಸಂ ಮೂಡಿಬರುವ ವಿದ್ಯಮಾನವನ್ನು ವಿವರಿಸುವುದು ಕಷ್ಟದ ಕೆಲಸವೇ ಸರಿ. ಬಂಡವಾಳಶಾಹಿಯು ತನ್ನ ಪ್ರಾಬಲ್ಯಕ್ಕೆ ಬೆದರಿಕೆ ಎದುರಾದಾಗ ಅದನ್ನು ನಿವಾರಿಸಿಕೊಳ್ಳಲು ಫ್ಯಾಸಿಸ್ಟ್ ಶಕ್ತಿಗಳನ್ನು ಬಳಸಿಕೊಳ್ಳುತ್ತದೆ. ಈ ಉದ್ದೇಶಕ್ಕಾಗಿ ದೊಡ್ಡ ಬಂಡವಾಳಗಾರರು ಫ್ಯಾಸಿಸ್ಟ್ ಶಕ್ತಿಗಳೊಂದಿಗೆ ಸಂಬಂಧ ಕುದುರಿಸಿಕೊಳ್ಳುತ್ತಾರೆ ಮತ್ತು ಈ ಫ್ಯಾಸಿಸ್ಟ್ ಶಕ್ತಿಗಳನ್ನು ಕೆಲವು ಅದೃಷ್ಟಹೀನ ಅಲ್ಪಸಂಖ್ಯಾತರ ವಿರುದ್ಧ ಹರಿಹಾಯುವಂತೆ ಉತ್ತೇಜಿಸುತ್ತಾರೆ. ಈ ಫ್ಯಾಸಿಸ್ಟ್ ಶಕ್ತಿಗಳನ್ನು ಬಳಸಿಕೊಂಡು ಜನರನ್ನು ದಿಕ್ಕು ತಪ್ಪಿಸುವ ಮೂಲಕ ಬಂಡವಾಳಶಾಹಿಯು ತನ್ನ ಬೇಳೆ ಬೇಯಿಸಿಕೊಳ್ಳುತ್ತದೆ. ಅಂದರೆ, ಬಂಡವಾಳಶಾಹಿ ಬಿಕ್ಕಟ್ಟು ಉಲ್ಬಣಗೊಂಡ ಕಾಲಘಟ್ಟದಲ್ಲಿ ರಂಗದ ಕೇಂದ್ರದಲ್ಲಿ ಅವತರಿಸುವ ಫ್ಯಾಸಿಸಂ, ಬಂಡವಾಳಶಾಹಿಯನ್ನು ರಕ್ಷಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಇದುವೇ 1930ರ ಮಹಾ ಆರ್ಥಿಕ ಕುಸಿತದ ಸಮಯದಲ್ಲಿ ಸಂಭವಿಸಿದ ವಿದ್ಯಮಾನ.

ಫ್ಯಾಸಿಸಂಗೆ ಅವಕಾಶದ ಸನ್ನಿವೇಶ

ಕೆಲವು ವರ್ಷಗಳ ಹಿಂದಿನಿಂದಲೂ ಸ್ಥಗಿತತೆಗೆ ಒಳಗಾಗಿರುವ ನವ–ಉದಾರವಾದಿ ಬಂಡವಾಳಶಾಹಿಯು ಒಂದು ದೀರ್ಘಾವಧಿಯ ಬಿಕ್ಕಟ್ಟಿಗೆ ಒಳಗಾಗಿರುವ ಸನ್ನಿವೇಶದಲ್ಲಿ ಫ್ಯಾಸಿಸಂ ಹೊರಹೊಮ್ಮುತ್ತಿರುವ ವಿದ್ಯಮಾನವು ಈಗ ಮತ್ತೊಮ್ಮೆ ಜರುಗುತ್ತಿದೆ. ಬಂಡವಾಳಶಾಹಿಯ ಈ ಸ್ಥಗಿತತೆಗೆ ಸಂಬಂಧಿಸಿ ಕೇವಲ ಒಂದೇ ಒಂದು ಅಂಕಿ ಅಂಶವನ್ನು ಉಲ್ಲೇಖಿಸುವುದಾದರೆ, 2023ರಲ್ಲಿ ಯುರೋಪಿನ 19 ದೇಶಗಳನ್ನು ಒಳಗೊಂಡ ಪ್ರದೇಶದಲ್ಲಿ ಜನಗಳಿಗೆ ಬಳಕೆಗೆ ಸಿಗುವ (disposable) ಒಟ್ಟು ನೈಜ ತಲಾ ವರಮಾನವು (ಅಂದರೆ, ಸರ್ಕಾರದ ತೆರಿಗೆಗಳು ಮತ್ತು ಸಬ್ಸಿಡಿಗಳನ್ನು ಗಣನೆಗೆ ತೆಗೆದುಕೊಂಡ ನಂತರ ಕುಟುಂಬದ ವರಮಾನ) 2008ರಲ್ಲಿದ್ದ ಮಟ್ಟಕ್ಕಿಂತ ಕೇವಲ ಶೇ. 6.4ರಷ್ಟು ಹೆಚ್ಚಿಗೆ ಇತ್ತು. ಹದಿನೈದು ವರ್ಷಗಳ ಅವಧಿಯಲ್ಲಿ ಈ ಹೆಚ್ಚಳ ನಗಣ್ಯವೇ ಸರಿ.

ಆದರೆ, ಈ ಸಂದರ್ಭದಲ್ಲಿ ಎರಡು ಅಂಶಗಳನ್ನು ಅಧಿಕವಾಗಿ ಪರಿಗಣಿಸಬೇಕಾಗುತ್ತದೆ: ಮೊದಲನೆಯದಾಗಿ, "ಕುಟುಂಬಗಳು" ಎಂಬ ಪದ ಶ್ರೀಮಂತ ಮತ್ತು ಬಡ ಕುಟುಂಬಗಳನ್ನು ಒಳಗೊಂಡಿದೆ. ಆದ್ದರಿಂದ, ಈ ಅವಧಿಯಲ್ಲಿ ಕಂಡುಬಂದ ವರಮಾನಗಳ ಅಸಮತೆಯ ಅಗಾಧ ಹೆಚ್ಚಳವನ್ನು ಗಮನಿಸಿದರೆ, ಬಹುಪಾಲು ಜನರ ಬಳಕೆಗೆ ಸಿಗುವ ನೈಜ ತಲಾ ವರಮಾನವು ಹೆಚ್ಚಾಗಿರುವ ಸಾಧ್ಯತೆ ವಿರಳವೇ; ಎರಡನೆಯದಾಗಿ, ಸಣ್ಣ ಬಂಡವಾಳಗಾರರು ಮತ್ತು ಕಿರು ಉತ್ಪಾದಕರು ಹೊಂದಿದ ಬಂಡವಾಳದ ಸವಕಳಿಯನ್ನು ಕುಟುಂಬದ ಈ ಒಟ್ಟು ವರಮಾನದಿಂದ ಕಡಿತ ಮಾಡಿಲ್ಲ. ಈ ಗುಂಪಿಗೆ ಸೇರಿದ ಕುಟುಂಬಗಳ ಒಟ್ಟು ವರಮಾನದಲ್ಲಿ ಈ ಸವಕಳಿಯ ಅನುಪಾತವು 2008ರಲ್ಲಿ ಇದ್ದುದಕ್ಕಿಂತ (ಸಾಮರ್ಥ್ಯದ ಅಲ್ಪ ಬಳಕೆಯಿಂದಾಗಿ ಬಂಡವಾಳ ಮತ್ತು ಉತ್ಪತ್ತಿಯ ಅನುಪಾತವು ಇಂದು ಹೆಚ್ಚಿನ ಮಟ್ಟದಲ್ಲಿರುವ ಕಾರಣದಿಂದಾಗಿ) ಇಂದು ಹೆಚ್ಚಿನ ಮಟ್ಟದಲ್ಲಿರುವ ಸಾಧ್ಯತೆಯಿದೆ. ಹಾಗಾಗಿ, ಈ ಕಾರಣದಿಂದಲೂ ಸಹ, ಬಹುತೇಕ ಕುಟುಂಬಗಳ ನಿವ್ವಳ ತಲಾ ವರಮಾನವು ಹೆಚ್ಚಿರುವುದು ಅಸಂಭವವೇ. ಹಾಗಾಗಿ, ನವ–ಉದಾರವಾದಿ ಬಂಡವಾಳಶಾಹಿಯ ಅಡಿಯಲ್ಲಿ ಈ ಆರ್ಥಿಕ ಸ್ಥಗಿತತೆಯು ಜನರ ಜೀವನಮಟ್ಟವನ್ನು ಹಿಂಡಿದ ಪರಿಣಾಮವಾಗಿ ಮೂಲಭೂತವಾಗಿ ಅವರಲ್ಲಿ ಮೂಡಿದ ಕೋಪವನ್ನು ಫ್ಯಾಸಿಸಂ ದುರ್ಬಳಕೆ ಮಾಡಿಕೊಳ್ಳುವ ಅವಕಾಶ ಉದ್ಭವಿಸುತ್ತದೆ.

ದೊಡ್ಡ ಬಂಡವಾಳಗಾರರು ಮತ್ತು ಫ್ಯಾಸಿಸ್ಟ್ ಎಳಸುಗಳ ನಡುವೆ ಏರ್ಪಡುವ ಮೈತ್ರಿಯು ವಿವಿಧ ರೀತಿಯಲ್ಲಿ ಸಂಭವಿಸುತ್ತದೆ. ಆರ್ಥಿಕ ಸ್ಥಗಿತತೆಯ ಕಾರಣದಿಂದ ಉಂಟಾದ ಜನರ ಕೋಪವನ್ನು ಬಳಸಿಕೊಳ್ಳಲು, ಫ್ಯಾಸಿಸ್ಟರು ಸಾಮಾನ್ಯವಾಗಿ ದೊಡ್ಡ ಬಂಡವಳಿಗರನ್ನು ವಿರೋಧಿಸುವ ನಿಲುವು ತೆಗೆದುಕೊಳ್ಳುವ ಮೂಲಕ ತಮ್ಮ ಆಟವನ್ನು ಆರಂಭಿಸುತ್ತಾರೆ. ಸಾಂದರ್ಭಿಕವಾಗಿ ಹೇಳುವುದಾದರೆ, ಹಿಟ್ಲರ್ ಮಾಡಿದ್ದು ಇದನ್ನೇ. ದೊಡ್ಡ ಬಂಡವಳಿಗ–ವಿರೋಧಿ ನಿಲುವನ್ನು ಫ್ಯಾಸಿಸ್ಟರು ತೆಗೆದುಕೊಂಡರೂ ಸಹ, ಸಾಮಾನ್ಯವಾಗಿ, ಕೆಲವು ಏಕಸ್ವಾಮ್ಯ ಬಂಡವಾಳಗಾರರು ಬಹಿರಂಗವಾಗಿ ಅಲ್ಲದಿದ್ದರೂ, ರಹಸ್ಯವಾಗಿ ಫ್ಯಾಸಿಸ್ಟರಿಗೆ ಸಹಾಯ ಮಾಡುತ್ತಾರೆ. ಆದರೆ, ಫ್ಯಾಸಿಸ್ಟರು ಅಧಿಕಾರಕ್ಕೆ ಬಂದ ನಂತರ, ತಾವು ದೊಡ್ಡ ಬಂಡವಳಿಗರ ಪಾಲುದಾರರು ಎಂಬುದನ್ನು ಪೂರ್ಣವಾಗಿ ಅವರೇ ಬಯಲು ಮಾಡಿಕೊಳ್ಳುತ್ತಾರೆ ಮತ್ತು ತಮ್ಮ ಹಳೆಯ ಏಕಸ್ವಾಮ್ಯ–ವಿರೋಧಿ ಘೋಷಣೆಗಳಿಗೆ ನಿಷ್ಠರಾಗಿ ಉಳಿದ ತಮ್ಮ ಬೆಂಬಲಿಗರನ್ನು ನಿರ್ನಾಮ ಮಾಡುವ ಒಂದು ರಕ್ತಸಿಕ್ತ ದಮನಕ್ಕೂ ಇಳಿಯುತ್ತಾರೆ.



ನವ–ಉದಾರವಾದದ ವಿರುದ್ಧ ಫ್ಯಾಸಿಸ್ಟ್ ಗದ್ದಲ

ಈ ವಿಷಯದಲ್ಲಿ ಭಾರತ ಒಂದು ಅಪವಾದವೇ ಸರಿ: ಭಾರತದಲ್ಲಿ ಫ್ಯಾಸಿಸ್ಟ್–ತೆರನ ಮಂದಿಗಳು ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ದ್ವೇಷವನ್ನು ಹರಡುವುದರೊಂದಿಗೇ ದೊಡ್ಡ ಬಂಡವಾಳಗಾರರೊಂದಿಗೆ,ಅದರಲ್ಲೂ ವಿಶೇಷವಾಗಿ ದಿಢೀರನೆ ಏಕಸ್ವಾಮ್ಯ ಹಂತ ತಲುಪಿದ ಕೆಲವು ಬಂಡವಾಳಗಾರರೊಂದಿಗೆ ಹೊಂದಿದ್ದ ನಿಕಟ ಬಾಂಧವ್ಯವನ್ನು ರಹಸ್ಯವಾಗಿಡಲಿಲ್ಲ. ಆದರೆ, ಫ್ರೆಂಚ್ ಫ್ಯಾಸಿಸ್ಟರು ಏಕಸ್ವಾಮ್ಯ ಬಂಡವಾಳ ವಿರೋಧಿ ಗದ್ದಲದೊಂದಿಗೆ ತಮ್ಮ ಆಟ ಆರಂಭಿಸಿದರು. ಫ್ರೆಂಚ್ ಫ್ಯಾಸಿಸ್ಟ್ ನಾಯಕಿ ಮರೀನೆ ಲೆ ಪೆನ್ ಅವರು ನವ–ಉದಾರವಾದದ ವಿರುದ್ಧವಾಗಿ ಎಷ್ಟು ಬೊಗಳೆ ಹೊಡೆದಿದ್ದರು ಎಂದರೆ, ಗ್ರೀಸ್‌ನಲ್ಲಿ, ಹಿಂದಿನ ಸರ್ಕಾರಗಳಿಗಿಂತ ಸಂಪೂರ್ಣವಾಗಿ ಭಿನ್ನವಾದ ಕ್ರಮಗಳನ್ನು ಕೈಗೊಳ್ಳುವ ಭರವಸೆ ನೀಡಿ ಅಧಿಕಾರಕ್ಕೆ ಬಂದ ಸಿರಿಜಾ, ಅಂತಿಮವಾಗಿ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಒತ್ತಡಕ್ಕೆ ಮಣಿದಾಗ, ಸಿರಿಜಾದ ಕ್ರಮ "ನಂಬಿಕೆ ದ್ರೋಹ" ಎಂದು ಬೊಬ್ಬೆ ಹೊಡೆದಿದ್ದರು. ಆದರೂ, ಮರೀನೆ ಲೆ ಪೆನ್ ತಳೆದ ನವ–ಉದಾರವಾದದ ವಿರೋಧಿಯಾಗಿ ತೋರುವ ಈ ನಿಲುವಿನ ಹೊರತಾಗಿಯೂ, ಆಕೆಯ ಪಕ್ಷವನ್ನು ಫ್ರೆಂಚ್ ಸಮೂಹ ಮಾಧ್ಯಮಗಳ ಒಡೆಯ ಮತ್ತು ಬಿಲಿಯನೇರ್ ಹೂಡಿಕೆದಾರ ವಿನ್ಸೆಂಟ್ ಬೊಲ್ಲೋರ್ ಸಂಪೂರ್ಣವಾಗಿ ಬೆಂಬಲಿಸಿದರು. ಮತ್ತು, ಫ್ರೆಂಚ್ ಚುನಾವಣೆಯ ಮುನ್ನಾದಿನ, ಅವರ ಪಕ್ಷದ ಪ್ರಧಾನ ಮಂತ್ರಿ ಅಭ್ಯರ್ಥಿ ಜೋರ್ಡಾನ್ ಬಾರ್ಡೆಲ್ಲಾ ಅವರು ಅದುವರೆಗೂ ನವ–ಉದಾರವಾದದ ವಿರೋಧಿ ಎಂಬಂತೆ ತೋರಿಸಿಕೊಳ್ಳುತ್ತಿದ್ದ ತಮ್ಮ ನಿಲುವಿನ ಬದಲಾಗಿ ಹಣಕಾಸು ಬಂಡವಾಳಕ್ಕೆ ಒಪ್ಪಿಗೆಯಾಗುವ ರೀತಿಯಲ್ಲಿ ಮಾತನಾಡತೊಡಗಿದರು.

ಇಟಲಿಯಲ್ಲಿಯೂ ಇದೇ ರೀತಿಯ ಪ್ರಹಸನ ನಡೆದಿದೆ. ಫ್ಯಾಸಿಸ್ಟರ ನಾಯಕಿ ಗಿಯೊರ್ಜಿಯಾ ಮೆಲೋನಿ, ಮುಚ್ಚು ಮರೆ ಇಲ್ಲದೆ ನವ–ಉದಾರವಾದಿ ಕಾರ್ಯಸೂಚಿಯನ್ನು ಹೊಂದಿದ್ದ ಮತ್ತು ಈ ಹಿಂದೆ ಅಧಿಕಾರದಲ್ಲಿದ್ದ ಮಾರಿಯೋ ಡ್ರಾಘಿ ಅವರ ಪಕ್ಷವು ಅನುಸರಿಸುತ್ತಿದ್ದ ಕಾರ್ಯಕ್ರಮಕ್ಕಿಂತ ವಿಭಿನ್ನವಾದ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳುವುದಾಗಿ ಸೋಗುಹಾಕಿದ್ದರು. ಆದರೆ, ಅಧಿಕಾರಕ್ಕೆ ಬಂದ ನಂತರ, ಮೆಲೋನಿ ತನ್ನ ಹಿಂದಿನ ಭರವಸೆಗಳನ್ನು ಗಾಳಿಗೆ ತೂರಿದರು ಮತ್ತು ಹಣಕಾಸು ಬಂಡವಾಳದ ನಿಷ್ಠಾವಂತ ಮಿತ್ರರಾದರು.

ನಿಖರವಾಗಿ ಇದೇ ರೀತಿಯಲ್ಲಿ, ಯುರೋಪಿನ ಫ್ಯಾಸಿಸ್ಟರು ಉಕ್ರೇನ್ ಯುದ್ಧದ ಬಗ್ಗೆಯೂ ತಮ್ಮ

ಪುಟ 14 ಕ್ಕೆ



ಯುರೋಪಿನಲ್ಲಿ ಫ್ಯಾಸಿಸಂನ ಬೆಳವಣಿಗೆಗೆ ಫ್ರಾನ್ಸಿನ ಎಡಪಂಥೀಯರಿಂದ ತಡೆ......... ಪುಟ 13 ರಿಂದ

ನಿಲುವನ್ನು ಬದಲಾಯಿಸಿದ್ದಾರೆ. ಯುರೋಪಿನ ಕಾರ್ಮಿಕ ವರ್ಗವು ಯುದ್ಧವನ್ನು ಸ್ಪಷ್ಟವಾಗಿ ವಿರೋಧಿಸುತ್ತದೆ. ರಷ್ಯಾದ ವಿರುದ್ಧ ಅಮೆರಿಕಾ ಹೇರಿದ ನಿರ್ಬಂಧಗಳ ಪರಿಣಾಮವಾಗಿ ಯೂರೋಪಿನ ದೇಶಗಳಲ್ಲಿ ಇಂಧನ ಬೆಲೆಗಳ ತೀವ್ರ ಏರಿಕೆಯಿಂದಾಗಿ ಹಣದುಬ್ಬರ ಉಲ್ಬಣಗೊಂಡಿದೆ. ಯುದ್ಧದ ಕಾರಣದಿಂದ ಉಂಟಾದ ಈ ಹಣದುಬ್ಬರವು ಯುರೋಪಿನ ಜನ ಜೀವನವನ್ನು ಅಸ್ತವ್ಯಸ್ತಗೊಳಿಸಿದೆ. ಯೂರೋಪಿನ ದುಡಿಯುವ ಜನತೆ ಶಾಂತ ಪರಿಸ್ಥಿತಿ ಮರಳುವುದನ್ನು ಬಯಸುತ್ತದೆ. ಕಾರ್ಮಿಕರ ಬೆಂಬಲವನ್ನು ಪಡೆಯುವ ಉದ್ದೇಶದಿಂದ, ಫ್ಯಾಸಿಸ್ಟರು ಯುದ್ಧದ ಬಗ್ಗೆ ಆರಂಭದಲ್ಲಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿದ್ದರು. ಆದರೆ, ಅಧಿಕಾರಕ್ಕೆ ಬಂದ ನಂತರ ಸಾಮ್ರಾಜ್ಯಶಾಹಿ ಅಮೆರಿಕಾದ ನಿಲುವನ್ನು ಅನುಸರಿಸುತ್ತಿದ್ದಾರೆ. ಈ ಫ್ಯಾಸಿಸ್ಟ್ ಪಕ್ಷಗಳು ಉದಾರವಾದಿ ಬಂಡವಾಳಶಾಹಿ ಪಕ್ಷಗಳ ಇಬ್ಬಂದಿ ನೀತಿಯನ್ನು ಚಾಚೂ ತಪ್ಪದೆ ಅನುಸರಿಸುತ್ತವೆ. ಮೆಲೋನಿ ಮಾಡಿದ್ದು ಇದನ್ನೇ. ಚುನಾವಣೆಯ ಮೊದಲು ಫ್ರಾನ್ಸ್‌ನಲ್ಲಿ ಬಾರ್ದೆಲ್ಲಾ ಮಾಡುತ್ತಿದ್ದುದು ಇದನ್ನೇ. ತಾವು ಹೇಳಿಕೊಳ್ಳುವ ಶಾಂತಿ-ಪರ ನಿಲುವಿನಿಂದ ಇವರೆಲ್ಲರೂ ಸಾಮಾನ್ಯವಾಗಿ ಹಿಂದೆ ಸರಿಯುತ್ತಾರೆ.

ಫ್ಯಾಸಿಸ್ಟರ ಸೋಗಿಗೆ ಅವಕಾಶ ಕಲ್ಪಿಸಿದ ಬೇಜವಾಬ್ದಾರಿತನ

ಸಂಕ್ಷಿಪ್ತವಾಗಿ ಹೇಳುವುದಾದರೆ, ಅಲ್ಪಸಂಖ್ಯಾತರ ವಿರುದ್ಧ ದ್ವೇಷವನ್ನು ಹರಡುವ ಮತ್ತು ಕಾರ್ಮಿಕ ವರ್ಗವನ್ನು ವಿಭಜಿಸುವ ಫ್ಯಾಸಿಸಂ, ಕಾರ್ಮಿಕ ವರ್ಗವನ್ನು ವಂಚಿಸುವ ಅಪರಾಧವನ್ನೂ ಮಾಡುತ್ತದೆ. ಆರ್ಥಿಕ ನೀತಿಯಲ್ಲಾಗಲಿ ಅಥವಾ ಉಕ್ರೇನ್ ಯುದ್ಧದ ಬಗ್ಗೆಯಾಗಲಿ, ಉದಾರವಾದಿ ಬಂಡವಾಳಶಾಹಿ ರಾಜಕೀಯ ಪಕ್ಷಗಳಿಗಿಂತ ತಾನು ಭಿನ್ನವೆಂದು ಅದು ಸೋಗು ಹಾಕುತ್ತದೆ. ಇಸ್ಲಾಮ್-ಭೀತಿಯನ್ನು ಉತ್ತೇಜಿಸುವಲ್ಲಿ, ವಲಸಿಗರ ವಿರುದ್ಧ ಹಗೆತನವನ್ನು ಉತ್ತೇಜಿಸುವಲ್ಲಿ, ಉದಾರವಾದಿ ಪಕ್ಷಗಳಿಗೆ ಹೋಲಿಸಿದರೆ, ಖಂಡಿತವಾಗಿಯೂ ಅದರ ಗುರುತು ಉಗ್ರ ಬಲಪಂಥವೇ. ಆದರೆ ಶಾಂತಿ ಮತ್ತು ಯುದ್ಧದ ವಿಷಯಗಳಲ್ಲಿ ಮತ್ತು ಆರ್ಥಿಕ ನೀತಿಗಳ ವಿಷಯದಲ್ಲಿ ಅದು ಉದಾರವಾದಿ ಪಕ್ಷಗಳಿಂದ ಪೂರ್ಣವಾಗಿ ಭಿನ್ನವಲ್ಲ. ಆದರೂ ಕಾರ್ಮಿಕ ವರ್ಗದ ಬೆಂಬಲವನ್ನು ಗಳಿಸುವ ಉದ್ದೇಶದಿಂದ ತಾನು ಭಿನ್ನವೆಂದು ಅದು ನಟಿಸುತ್ತದೆ.

ಈ ರೀತಿಯಲ್ಲಿ ಸೋಗು ಹಾಕುವ ಅವಕಾಶ ಹುಟ್ಟಿಕೊಳ್ಳಲು ಕಾರಣವೆಂದರೆ, ಪ್ರಮುಖ ಎಡಪಂಥೀಯ ವಿಭಾಗಗಳು ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ತಮ್ಮ ಜವಾಬ್ದಾರಿಯನ್ನು ತೊರೆದಿರುವುದು ಮತ್ತು ಬಂಡವಾಳಶಾಹಿ ರಾಜಕೀಯ ಪಕ್ಷಗಳ ಜಾಡು ಹಿಡಿದಿರುವುದು. ರಷ್ಯಾದ ವಿರುದ್ಧ ಪಾಶ್ಚಾತ್ಯ ದೇಶಗಳು ಹೇರಿದ ನಿರ್ಬಂಧಗಳಿಂದಾಗಿ ಉಂಟಾದ ಹಣದುಬ್ಬರದಿಂದ ದುಡಿಯುವ ವರ್ಗವು ಬಲವಾದ ಹೊಡೆತ ತಿಂದಿರುವ ಮತ್ತು ಉಕ್ರೇನ್ ಯುದ್ಧವನ್ನು ವಿರೋಧಿಸುವ ಜರ್ಮನಿಯಲ್ಲಿ, ಕೇವಲ ಸೋಶಲ್ ಡೆಮಾಕ್ರೇಟರು ಮಾತ್ರವಲ್ಲದೆ ಎಡ ಪಕ್ಷಗಳೂ ಸಹ ಸಾಮ್ರಾಜ್ಯಶಾಹಿ ಅಮೆರಿಕಾದ ಹಿಂದೆ ನೆರೆದಿವೆ. ಇಂತಹ ನಿಲುವನ್ನು ವಿರೋಧಿಸಿ ಸಿಡಿದು ಬಂದ, ಸಹ್ರಾ ವಾಗೆನ್‌ಕ್ನೆಕ್ಟ್ ನೇತೃತ್ವದ ಮತ್ತು ಶಾಂತಿಯ ಪರವಾಗಿ ಅಭಿಯಾನ ನಡೆಸುತ್ತಿರುವ ಒಂದು ಸಣ್ಣ ಗುಂಪಿಗೆ ಜನರ ಬೆಂಬಲ ಹೆಚ್ಚುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ. ಇದೇ ರೀತಿಯಲ್ಲಿ, ಯುರೋಪಿನ ಎಡ ಪಂಥದ ಗಮನಾರ್ಹ ವಿಭಾಗಗಳು ಈಗ ನವ-ಉದಾರವಾದದ ಕಟ್ಟಾ ಸಮರ್ಥಕರಾಗಿರುವ ಸನ್ನಿವೇಶವು ಕಾರ್ಮಿಕ ವರ್ಗವನ್ನು ದಾರಿತಪ್ಪಿಸುವ ಫ್ಯಾಸಿಸ್ಟರ ಯೋಜನೆಗೆ ಪೂರಕವಾಗಿದೆ. ಅಂದರೆ, ಎಡಪಂಥೀಯರ ಪ್ರಮುಖ ವಿಭಾಗಗಳ ಶರಣಾಗತಿಯ ಕಾರಣದಿಂದಾಗಿ ಯುರೋಪಿನಲ್ಲಿ ಫ್ಯಾಸಿಸಂ ವೇಗವಾಗಿ ಬೆಳೆಯುತ್ತಿದೆ.

ಇಲ್ಲಿಯೇ ಫ್ರಾನ್ಸ್ ವಿಭಿನ್ನವಾಗಿ ಕಾಣುತ್ತಿರುವುದು. ಎಡಪಂಥೀಯರು 'ನವ ಜನತಾರಂಗ'(ನ್ಯೂ ಪಾಪ್ಯುಲರ್ ಫ್ರಂಟ್) ರೂಪಿಸಲು ಒಗ್ಗೂಡಿದರು ಮಾತ್ರವಲ್ಲ, ನವ-ಉದಾರವಾದವನ್ನು ಮೀರಿ ಹೋಗುವ ಒಂದು ಆರ್ಥಿಕ ಕಾರ್ಯಕ್ರಮವನ್ನು ಈ ರಂಗವು ಅಂಗೀಕರಿಸುವಂತೆ ನೋಡಿಕೊಂಡರು. ಫ್ಯಾಸಿಸ್ಟರನ್ನು ಅಧಿಕಾರದಿಂದ ದೂರವಿಡಬೇಕು ಎಂಬ ಸಾಮಾನ್ಯ ಬಯಕೆಯು ಅವರೆಲ್ಲರಿಗೂ ಇದ್ದರೂ ಸಹ, ಒಂದು ಪರ್ಯಾಯ ಆರ್ಥಿಕ ಕಾರ್ಯಸೂಚಿಯನ್ನು ಈ ಹಿಂದೆ ಹೊಂದದೇ ಇದ್ದ ಕಾರಣದಿಂದಾಗಿ ಅವರ ಬಯಕೆಯು ಈ ವರೆಗೂ ಕೈಗೂಡಿರಲಿಲ್ಲ. ಹಾಗಾಗಿ, ಫ್ರೆಂಚ್ ಫ್ಯಾಸಿಸ್ಟರ ಬೆಳವಣಿಗೆ ಸುಗಮವಾಗಿತ್ತು. ಈ ಪರಿಸ್ಥಿತಿ ದುಡಿಯುವ ಜನರಿಗೆ ಹೆಚ್ಚು ಹೆಚ್ಚು ಅಸಹನೀಯವಾಗುತ್ತಿದ್ದರೂ ಸಹ, ತಾನು ಅಧಿಕಾರದಲ್ಲಿ ಉಳಿಯಲು ಮತ್ತು ನವ-ಉದಾರವಾದಿ ಕಾರ್ಯಸೂಚಿಯನ್ನು ಅನುಷ್ಠಾನಗೊಳಿಸಲು ಈ ಪರಿಸ್ಥಿತಿಯನ್ನು ಮ್ಯಾಕ್ರೊನ್ ಬಳಸಿಕೊಂಡರು. ಹಾಗಾಗಿ, ನವ-ಉದಾರವಾದಿ ಆರ್ಥಿಕ ನೀತಿಗಳ ಅನುಷ್ಠಾನದಿಂದಾಗಿ ಒಂದೆಡೆಯಲ್ಲಿ ಮ್ಯಾಕ್ರೋನ್‌ರ ಜನಪ್ರಿಯತೆ ಕುಗ್ಗುತ್ತಾ ಹೋದಂತೆ, ಇನ್ನೊಂದೆಡೆಯಲ್ಲಿ ಈ ಅಸಹನೀಯ ಆರ್ಥಿಕ ನೀತಿಗಳ ವಿರುದ್ಧ ಮಾತನಾಡುವ ಮುಖ್ಯ ಧ್ವನಿಯಾಗಿ ಕಾಣಿಸಿಕೊಂಡ ಫ್ಯಾಸಿಸ್ಟರು ಜನರಿಗೆ ಹೆಚ್ಚು ಹೆಚ್ಚು ಸ್ವೀಕಾರಾರ್ಹರಾಗುತ್ತಾ ಹೋದರು. ಈ ದ್ವಂದ್ವ ಈಗ ಮುರಿದು ಬಿದ್ದಿದೆ ಎಂಬುದು ಒಂದು ಮಹತ್ವದ ಅಂಶವನ್ನು ಈ ಬೆಳವಣಿಗೆ ಎತ್ತಿ ತೋರಿಸುತ್ತದೆ.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಯುದ್ಧವನ್ನು ಕೊನೆಗೊಳಿಸುವುದೇ ಏಕೈಕ ಸುಸಂಗತ ಫ್ಯಾಸಿಸ್ಟ್-ವಿರೋಧಿ ಕಾರ್ಯಕ್ರಮವಾಗಿತ್ತು; ಪರ್ಯಾಯ ಆರ್ಥಿಕ ಕಾರ್ಯಸೂಚಿಯ ಅಗತ್ಯವಿರಲಿಲ್ಲ. ಯುದ್ಧ ಕಾಲದಲ್ಲಿ ಪರಿಣಾಮಕಾರಿಯಾದ ಸಮಾನ ಕಾರ್ಯಕ್ರಮವಿಲ್ಲದ ಒಂದು ಫ್ಯಾಸಿಸ್ಟ್-ವಿರೋಧಿ ರಂಗವು, ಒಂದು ಪೂರ್ಣ ಪ್ರಮಾಣದ ಯುದ್ಧ ನಡೆಯುತ್ತಿರದ ಪ್ರಸ್ತುತ ಸಂಧಿಕಾಲದಲ್ಲಿ ಪ್ರತಿಕೂಲ ಪರಿಣಾಮವನ್ನೇ ಉಂಟು ಮಾಡುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ನವ-ಉದಾರವಾದವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವ, ಸಾಮ್ರಾಜ್ಯಶಾಹಿ-ಉತ್ತೇಜಿತ ಸ್ಥಳೀಯ ಯುದ್ಧಗಳನ್ನು ಸಂಪೂರ್ಣವಾಗಿ ಸಮ್ಮತಿಸುವ ಮತ್ತು ಜನರ ಜೀವನವನ್ನು ಸುಧಾರಿಸುವ ಕಾರ್ಯಸೂಚಿಯನ್ನು ರೂಪಿಸಲು ಮುಂದಾಗದ ಫ್ಯಾಸಿಸ್ಟ್-ವಿರೋಧಿ ಶಕ್ತಿಗಳ ಒಗ್ಗಟ್ಟು, ಅಲ್ಪಾವಧಿಯಲ್ಲಿ ಎಷ್ಟೇ ಪರಿಣಾಮಕಾರಿಯಾಗಿ ಕಂಡುಬಂದರೂ, ಕಾಲಕ್ರಮದಲ್ಲಿ ಫ್ಯಾಸಿಸ್ಟರ ಅವಕಾಶಗಳನ್ನೇ ಹೆಚ್ಚಿಸುವ ವಿರೋಧಾಭಾಸದ ಪರಿಣಾಮವನ್ನು ಬೀರುತ್ತದೆ.

ಯುರೋಪಿನ ಎಡ ಪಂಥದ ವಿಭಾಗಗಳ ಈ ಶರಣಾಗತಿ ಯುಗೋಸ್ಲಾವಿಯದ ಮೇಲೆ ಸಾಮ್ರಾಜ್ಯಶಾಹಿಯ ಬಾಂಬ್ ದಾಳಿ ನಡೆದ ಸಮಯದಲ್ಲಿ ಅದಕ್ಕೆ ಎಡಪಂಥದ ಒಂದು ಗಮನಾರ್ಹ ವಿಭಾಗವು ಮೌನ ಸಮ್ಮತಿ ನೀಡಿದಾಗಿನಿಂದಲೇ ಆರಂಭವಾಗಿ ಬಹಳ ದೀರ್ಘ ಕಾಲದಿಂದ ನಡೆದುಕೊಂಡು ಬಂದಿದೆ. ಸಾಮ್ರಾಜ್ಯಶಾಹಿಯ ಬಾಲ ಹಿಡಿಯುವ ಈ ಪ್ರವೃತ್ತಿಯು ಈಗ ಸಾಮ್ರಾಜ್ಯಶಾಹಿಯ ಉಕ್ರೇನ್ ಯೋಜನೆಗೆ ಮತ್ತು ನವ-ಉದಾರವಾದವನ್ನು ಬೆಂಬಲಿಸುವ ಮಟ್ಟಿಗೆ ಅವರನ್ನು ಕೊಂಡೊಯ್ದಿದೆ. ಅವರ ಈ ನಡವಳಿಕೆಯು ಫ್ಯಾಸಿಸ್ಟರು ತಾವು ಶಾಂತಿಧೂತರು ಮತ್ತು ವಿಮೋಚನೆಯ ಹರಿಕಾರರು ಎಂಬಂತೆ ಬಿಂಬಿಸಿಕೊಳ್ಳಲು ಅನುವು ಮಾಡಿಕೊಟ್ಟಿದೆ, ಕೊನೆಯ ಪಕ್ಷ ಏಕಸ್ವಾಮ್ಯ ಬಂಡವಾಳದೊಂದಿಗಿನ ಅವರ ಮೈತ್ರಿಯು ಸ್ಪಷ್ಟವಾಗಿ ಬಯಲಾಗುವ ವರೆಗಾದರೂ ಇದಕ್ಕೆ ಅವಕಾಶ ಕಲ್ಪಿಸಿದೆ. ಎಡಪಂಥೀಯರು ನವ-ಉದಾರವಾದವನ್ನು ಮೀರಿ ಮುಂದೆ ಹೋಗುವ ಅಜೆಂಡಾವನ್ನು ಅಳವಡಿಸಿಕೊಳ್ಳುವ ಕ್ರಮ ಫ್ಯಾಸಿಸ್ಟರು ನಿಂತ ನೆಲ ಕುಸಿಯುವಂತೆ ಮಾಡುವಲ್ಲಿ ಪರಿಣಾಮಕಾರಿಯಾಗುತ್ತದೆ ಎಂಬುದನ್ನು ಫ್ರಾನ್ಸ್ ತೋರಿಸಿಕೊಟ್ಟಿದೆ.

ದೇಶದಲ್ಲಿನ ಗಮನಾರ್ಹ ಸಂಪತ್ತಿನ ...... ಪುಟ 11 ರಿಂದ

ಗಮನಿಸಬೇಕು. ಒಮ್ಮೆ ಸುಪ್ರೀಂ ಕೋರ್ಟ್ '500 ಕೋಟಿ ರೂ.ಗಳಿಗಿಂತ ಹೆಚ್ಚು ಸಾಲ ಪಡೆದು ಮರುಪಾವತಿಸದೇ ಇರುವ ಉದ್ಯಮಿಗಳ ಪಟ್ಟಿ ಕೊಡಿ' ಎಂದು ಮೋದಿ ನೇತೃತ್ವದ ಕೇಂದ್ರ ಸರ್ಕಾರವನ್ನು ಕೇಳಿತ್ತು. ಆದರೆ, ಕೇಂದ್ರ ಸರ್ಕಾರ ಈ ಮಾಹಿತಿಯನ್ನು ಹಂಚಿಕೊಳ್ಳಲು ಮುಂದಾಗಲಿಲ್ಲ.

ಕಾರ್ಪೊರೇಟ್ ತೆರಿಗೆ ಕಡಿತ

ಬ್ಯಾಂಕುಗಳಿಂದ ಪಡೆದ ಸಾಲ ಮನ್ನಾ ಸಾಲದೆಂಬಂತೆ, ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಾರ್ಪೊರೇಟ್ ತೆರಿಗೆಯನ್ನೂ ಕಡಿತಗೊಳಿಸಿತು. ಈ ಮೂಲಕ, ಉದ್ಯಮಿಗಳ ಸಂಪತ್ತು ಮತ್ತಷ್ಟು ವೃದ್ಧಿಸಲು ಪ್ರಭುತ್ವವೇ ನೆರವಾಗಿದೆ. ಕೇಂದ್ರ ಸರ್ಕಾರ ಸೆಪ್ಟೆಂಬರ್ 2019 ರಲ್ಲಿ, ಆಗ ಅಸ್ತಿತ್ವದಲ್ಲಿರುವ ಕಂಪನಿಗಳಿಗೆ ಮೂಲ ಕಾರ್ಪೊರೇಟ್ ತೆರಿಗೆಯನ್ನು ಶೇ. 30 ರಿಂದ ಶೇ. 22ಕ್ಕೆ ಕಡಿತಗೊಳಿಸಿತು; ಮತ್ತು ಅಕ್ಟೋಬರ್ 1, 2019 ರ ನಂತರ ಸಂಯೋಜಿತವಾದ ಹೊಸ ಉತ್ಪಾದನಾ ಸಂಸ್ಥೆಗಳಿಗೆ ಶೇ.25 ರಿಂದ ಶೇ.15 ಕ್ಕೆ ಇಳಿಸಿತು.

ಆದಾಯ ಮತ್ತು ಕಾರ್ಪೊರೇಟ್ ತೆರಿಗೆ ದರಗಳ ಮೇಲೆ ವಿಧಿಸಲಾಗುವ ಸ್ವಚ್ಛ ಭಾರತ್ ಸೆಸ್ ಮತ್ತು ಶಿಕ್ಷಣ ಸೆಸ್‌ಗಳಂತಹ ಸರ್ಚಾರ್ಜ್‌ಗಳು ಮತ್ತು ಸೆಸ್‌ಗಳನ್ನು ಪರಿಗಣಿಸಿದ ನಂತರ ಅಸ್ತಿತ್ವದಲ್ಲಿರುವ ಘಟಕಗಳಿಗೆ ಪರಿಣಾಮಕಾರಿ ತೆರಿಗೆ ದರವು ಹಿಂದಿನ ಶೇಕಡಾ 34.94 ಕ್ಕೆ ಹೋಲಿಸಿದರೆ ಶೇಕಡಾ 25.17 ಆಗಿದೆ. (ಶೇ.9.77 ರಷ್ಟು ಕಡಿಮೆ) ಹೊಸ ಘಟಕಗಳಿಗೆ, ಇದು ಈ ಹಿಂದೆ 29.12 ಪ್ರತಿಶತಕ್ಕೆ ಹೋಲಿಸಿದರೆ 17.01 ಶೇಕಡಾ. (ಶೇ.12.11 ರಷ್ಟು ಕಡಿಮೆ)

ಕಾರ್ಪೊರೇಟ್ ತೆರಿಗೆ ಕಡಿತದ ಕಾರಣ 2020–21ರ ಒಂದು ವರ್ಷದಲ್ಲಿ ಸರ್ಕಾರವು 1.24 ಲಕ್ಷ ಕೋಟಿ ರೂಪಾಯಿ ನಷ್ಟವನ್ನು ಅನುಭವಿಸಿದೆ ಎಂದು ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಹೇಳಿದ್ದಾರೆ.

ಅಂದರೆ, ಪ್ರತಿ ವರ್ಷ ತೆರಿಗೆ ಕಡಿತದಿಂದಾಗಿ ಉಳಿದ ಒಂದು ಲಕ್ಷ ಕೋಟಿ ರೂ.ಗಳು ದೊಡ್ಡ ಉದ್ಯಮಿಗಳ ಸಂಪತ್ತಿಗೆ ಸೇರ್ಪಡೆಯಾಗುತ್ತದೆ ಎಂದರ್ಥ. ಸರ್ಕಾರ ಸಂಪನ್ಮೂಲ ಸಂಗ್ರಹಿಸಲು ಒಂದೆಡೆ ಜನಸಾಮಾನ್ಯರು ಕೊಳ್ಳುವ ಸರಕು ಮತ್ತು ಪಡೆಯುವ ಸೇವೆಗಳ ಮೇಲೆ ಪರೋಕ್ಷ ತೆರಿಗೆ ಹೆಚ್ಚಿಸುತ್ತದೆ, ಮತ್ತೊಂದೆಡೆ ದೊಡ್ಡ ಉದ್ಯಮಿಗಳು ಕೊಡುತ್ತಿದ್ದ ತೆರಿಗೆಯ ಪ್ರಮಾಣವನ್ನು ಕಡಿಮೆ ಮಾಡಿದೆ.

ONGC ಬ್ಲಾಕ್ ನಿಂದ ಅನಿಲ ಕಳವು

ಮುಖೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ (ಆರ್‌ಐಎಲ್) ತನ್ನ ಹಕ್ಕುಗಳನ್ನು ಹೊಂದಿಲ್ಲದ ಬ್ಲಾಕ್‌ಗಳಿಂದ ಅನಿಲವನ್ನು ಹೊರತೆಗೆಯುವ ಮೂಲಕ 1.729 ಬಿಲಿಯನ್ ಡಾಲರ್‌ಗೂ ಹೆಚ್ಚು ವಂಚನೆ ಮಾಡಿದೆ ಎಂದು ಸಾರ್ವಜನಿಕ ಸಂಸ್ಥೆಯಾದ ONGC (ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್) ಆರೋಪಿಸಿದೆ. ರಿಲಯನ್ಸ್ ತಮ್ಮ ಬ್ಲಾಕ್‌ಗಳ ಸಾಮಾನ್ಯ ಗಡಿಗೆ ಸಮೀಪದಲ್ಲಿ ಬಾವಿಗಳನ್ನು ಕೊರೆದು ONGC ಯ ಪಕ್ಕದ ಬ್ಲಾಕ್‌ನಿಂದ ಅನಿಲವನ್ನು ಪಂಪ್ ಮಾಡಿದೆ ಎಂದು 2014ರಲ್ಲಿ ONGC ದೂರು ನೀಡಿತ್ತು. 10 ವರ್ಷಗಳು ಕಳೆದ ನಂತರವೂ ಸದ್ಯ ಈ ಪ್ರಕರಣ ದೆಹಲಿ ಹೈಕೋರ್ಟ್ ಮುಂದಿದೆ.

ಇನ್ನು, ನಮ್ಮದೇ ನೆಲದಾಳದಿಂದ ಹೊರತೆಗೆಯುವ ತೈಲ ಮತ್ತು ಅನಿಲಕ್ಕೂ (ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಆಯಿಲ್, ಇತ್ಯಾದಿ ಪೆಟ್ರೋಲಿಯಂ ಉತ್ಪನ್ನಗಳಿಗೆ) ಅಂತಾರಾಷ್ಟ್ರೀಯ ಮಾರುಕಟ್ಟೆ ದರ ನಿಗದಿಮಾಡಿ ಜನರನ್ನು ಶೋಷಣೆ ಮಾಡುವ ಮೂಲಕವೂ ಬಂಡವಾಳಗಾರರು ತಮ್ಮ ಸಂಪತ್ತನ್ನು ವೃದ್ಧಿಸಿಕೊಳ್ಳುತ್ತಾರೆ.

ಬಂಡವಾಳಗಾರರು ಸಾರ್ವಜನಿಕರಿಗೆ ಸೇರಿರುವ ಪ್ರಕೃತಿ ಸಂಪತ್ತನ್ನು ಹೇಗೆಲ್ಲಾ ದೋಚಿ ತಮ್ಮ ಸಂಪತ್ತನ್ನು ವೃದ್ಧಿಸಿಕೊಳ್ಳುತ್ತಾರೆ, ಅವರ ಸರಕು ಮತ್ತು ಸೇವೆಗಳ ಮೇಲೆ ಹೇಗೆಲ್ಲಾ ಮೋಸದ ದರ ನಿಗದಿ ಮಾಡಿ ಶೋಷಣೆ ಮಾಡುತ್ತಾರೆ ಎಂಬುದಕ್ಕೆ ಇವು ಕೆಲವು ಉದಾಹರಣೆಯಷ್ಟೆ.

ಕೊನೆಯದಾಗಿ: 2020ರ ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಪ್ರಧಾನಿ ಮೋದಿಯವರು ಘೋಷಿಸಿದ 20 ಲಕ್ಷ ಕೋಟಿ ರೂ.ಗಳ ಉತ್ತೇಜಕ ಪ್ಯಾಕೇಜ್ ನಲ್ಲಿ ಬಂಡವಾಳದಾರರಿಗೆ ಸಿಕ್ಕಿದ್ದೆಷ್ಟೊ?

ಸಂವಿಧಾನ್ ಹತ್ಯಾ ದಿವಸ್........ ಪುಟ 12 ರಿಂದ

ಶಮ್ಸುಲ್ ಇಸ್ಲಾಮ್ 2019ರಲ್ಲಿ ತುರ್ತುಪರಿಸ್ಥಿತಿಯ 44ನೇ ವಾರ್ಷಿಕದ ಸಂದರ್ಭದಲ್ಲಿ ಬರೆದ ಲೇಖನದಲ್ಲಿ ಹೇಳುತ್ತಾರೆ. ಇಂದಿರಾಗಾಂಧಿ ಅದಕ್ಕೆ ಸ್ಪಂದಿಸದಿದ್ದರೂ, ಸುಪ್ರಿಂ ಕೋರ್ಟ್ ಅಲಹಾಬಾದ್ ಹೈಕೋರ್ಟ್ ತೀರ್ಪು ವಿಧಿಸಿದ್ದ ಅನರ್ಹತೆಯನ್ನು ರದ್ದು ಮಾಡಿದ್ದನ್ನು ಅಭಿನಂದಿಸುತ್ತ ನವಂಬರ್ 10, 1975ರಂದು ಮತ್ತೊಂದು ಪತ್ರ ಬರೆದರು, ಜೆಪಿ ಚಳುವಳಿಯಾಗಲೀ, ಗುಜರಾತಿನ ನವನಿರ್ಮಾಣ ಚಳುವಳಿಯೊಂದಿಗಾಗಲೀ ಆರೆಸ್ಸೆಸ್‌ಗೆ ಏನೂ ಸಂಬಂಧವಿಲ್ಲ ಎಂದು ಈ ಪತ್ರದಲ್ಲಿ ಹೇಳಿರುವದಾಗಿ ಶಮ್ಸುಲ್ ಇಸ್ಲಾವ್ ಹೇಳುತ್ತಾರೆ. ಇದಕ್ಕೂ ಇಂದಿರಾಗಾಂಧಿ ಸ್ಪಂದಿಸದಿದ್ದಾಗ, ಅವರಿಗೆ ನಿಕಟರಾಗಿದ್ದ ವಿನೋಬಾ ಭಾವೆಯವರ ಮೂಲಕ ಪ್ರಭಾವ ಬೀರಿಸಲು ದೇವರಸ್ ಪ್ರಯತ್ನಿಸಿದರು. ಇದು ಆರೆಸ್ಸೆಸ್‌ನ ತುರ್ತುಪರಿಸ್ಥಿತಿ-ವಿರೋಧಿ 'ಸಂಘರ್ಷ'ದ ಕತೆ! ಜೂನ್ 25ರಂದು ಇದನ್ನೂ ನೆನಪಿಸಿಕೊಳ್ಳಬೇಕಲ್ಲವೇ ಎಂದು ಹಲವು ವಿಶ್ಲೇಷಕರು ಪ್ರಶ್ನಿಸುತ್ತಾರೆ.

‘ವಾರಕ್ಕೆ 70 ಗಂಟೆ ಕೆಲಸ’ದ ಚರ್ಚೆ ಮತ್ತೆ ಬಂದಿದೆ. ಈ ಬಾರಿ ಓಲಾ ಸಿಇಒ ಭವಿಶ್ ಅಗರ್ವಾಲ್ ಈ ಚರ್ಚೆಗೆ ನಾಂದಿ ಆಡಿದ್ದಾರೆ. ಮುಂದುವರಿದ ಆರ್ಥಿಕತೆಗಳೊಂದಿಗೆ ಸ್ಪರ್ಧಿಸಲು ಯುವಕರು ವಾರಕ್ಕೆ 70 ಗಂಟೆಗಳ ಕಾಲ ಕೆಲಸ ಮಾಡಬೇಕು ಎಂದು ಅವರು ಸಲಹೆ ನೀಡಿದ್ದಾರೆ. ಕಾರ್ಮಿಕರು ಮತ್ತು ನೌಕರರ ಆರೋಗ್ಯದ ಮೇಲೆ ಬೀರುವ ಪರಿಣಾಮವನ್ನು ಉದ್ಯಮಿಗಳು ಗಣನೆಗೆ ತೆಗೆದುಕೊಂಡಿಲ್ಲ ಎನ್ನುತ್ತಾರೆ ಆರೋಗ್ಯ ತಜ್ಞರು. 70 ಗಂಟೆಗಳ ಕೆಲಸವು ಅನೇಕ ಗಂಭೀರ ಕಾಯಿಲೆಗಳಿಗೆ ಕಾರಣವಾಗಬಹುದು ಮತ್ತು ಅಕಾಲಿಕ ಮರಣದ ಅಪಾಯವನ್ನು ಹೆಚ್ಚಿಸುತ್ತದೆ ಎಂದು ನರವಿಜ್ಞಾನಿಗಳು ಮತ್ತು ಕಾರ್ಮಿಕ ಸಂಘಟನೆಗಳ ನಾಯಕರು ಎಚ್ಚರಿಸಿದ್ದಾರೆ. ಇದು ನಿರುದ್ಯೋಗ ಸಮಸ್ಯೆ ಮತ್ತಷ್ಟು ಹೆಚ್ಚಲು ಕಾರಣವಾಗುತ್ತದೆ ಎಂದು ಅವರು ಟೀಕಿಸಿದ್ದಾರೆ.

ವಾರದಲ್ಲಿ 70-ಗಂಟೆಗಳ ಕೆಲಸದ ಅವಧಿಯನ್ನು ಪ್ರತಿಪಾದಿಸಿದ ಓಲಾ ಸಿಇಒ ಆರೋಗ್ಯ ತಜ್ಞರು ಮತ್ತು ಕಾರ್ಮಿಕ ಸಂಘಟನೆಗಳಿಂದ ತೀವ್ರ ಖಂಡನೆ

ಒಂದೆಡೆ ಕೋಟ್ಯಾಂತರ ಯುವಜನರು ಉದ್ಯೋಗ ಸಿಗದೆ ಅಲೆದಾಡುತ್ತಿದ್ದಾರೆ. ಮತ್ತೊಂದೆಡೆ, ಉದ್ಯಮಿಗಳು ತಮ್ಮ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿರುವ ಯುವಕರಿಂದಲೇ ಹೆಚ್ಚಿನ ಸಮಯ ದುಡಿಸಿಕೊಳ್ಳಲು ಬಯಸುತ್ತಾರೆ. ಆ ಮೂಲಕ, ನಿರುದ್ಯೋಗ ಸಮಸ್ಯೆ ಮತ್ತಷ್ಟು ಹೆಚ್ಚಲು ಕಾರಣರಾಗುತ್ತಿದ್ದಾರೆ. ಜೊತೆಗೆ, ತಮ್ಮ ಉದ್ಯೋಗಿಗಳ ‘ಶ್ರಮಶಕ್ತಿ’ಯನ್ನು ಹಿಂಡಿ ಅವರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುವಂತೆ ಮಾಡಲು ಹೊರಟಿದ್ದಾರೆ.

‘ವಾರಕ್ಕೆ 70 ಗಂಟೆ ಕೆಲಸ’ದ ಚರ್ಚೆ ಮತ್ತೆ ಬಂದಿದೆ. ಈ ಬಾರಿ ಓಲಾ ಸಿಇಒ ಭವಿಶ್ ಅಗರ್ವಾಲ್ ಈ ಚರ್ಚೆಗೆ ನಾಂದಿ ಆಡಿದ್ದಾರೆ. ಮುಂದುವರಿದ ಆರ್ಥಿಕತೆಗಳೊಂದಿಗೆ ಸ್ಪರ್ಧಿಸಲು ಯುವಕರು ವಾರಕ್ಕೆ 70 ಗಂಟೆಗಳ ಕಾಲ ಕೆಲಸ ಮಾಡಬೇಕು ಎಂದು ಅವರು ಸಲಹೆ ನೀಡಿದ್ದಾರೆ. ಈ ಹಿಂದೆ ಇನ್ಫೋಸಿಸ್ ನಾರಾಯಣ ಮೂರ್ತಿ ಕೂಡ ಇದೇ ರೀತಿಯ ಹೇಳಿಕೆ ನೀಡಿದ್ದರು ಮತ್ತು ಭವಿಶ್ ಅಗರ್ವಾಲ್ ಅವರನ್ನು ಸಮರ್ಥಿಸಿಕೊಂಡಿದ್ದರು. ಭವಿಶ್ ಅಗರ್ವಾಲ್ ಅವರ ಈ ಹೇಳಿಕೆ ಸಾಮಾಜಿಕ ಮಾಧ್ಯಮದಲ್ಲಿಯೂ ಟೀಕೆಗಳಿಗೆ ಗುರಿಯಾಗಿದೆ. ಇಷ್ಟಾದರೂ, “ರಾಷ್ಟ್ರೀಯ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಲು ಇಂತಹ ಹೆಚ್ಚಿನ ಅವಧಿಯ ಕೆಲಸದ ಸಮಯಗಳು ಅತ್ಯಗತ್ಯ. ಇದರಿಂದ ನಾವು ವಿಶ್ವದ ನಂಬರ್ 1 ದೇಶವನ್ನು ಮತ್ತು ಅತಿದೊಡ್ಡ ಆರ್ಥಿಕತೆಯನ್ನು ನಿರ್ಮಿಸಬಹುದು” ಎಂದು ಅಗರ್ವಾಲ್ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

"ಕೆಲಸ-ಜೀವನದ ಸಮತೋಲನದ ಪರಿಕಲ್ಪನೆಯನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ನೀವು ನಿಮ್ಮ ಕೆಲಸವನ್ನು ಆನಂದಿಸುತ್ತಿದ್ದರೆ, ನೀವು ಜೀವನದಲ್ಲಿ ಸಂತೋಷವನ್ನು ಕಾಣುತ್ತೀರಿ ಮತ್ತು ಕೆಲಸದಲ್ಲಿಯೂ ಸಹ ಸಂತೋಷವನ್ನು ಕಾಣುತ್ತೀರಿ” ಎನ್ನುವ ಮೂಲಕ ಅಗರ್ವಾಲ್ ಅವರು ಕೆಲಸ-ಜೀವನದ ಸಮತೋಲನದ ಪರಿಕಲ್ಪನೆಯನ್ನು ತಳ್ಳಿಹಾಕುತ್ತಾರೆ.

ವ್ಯಾಪಾರ ಮತ್ತು ಕೈಗಾರಿಕೋದ್ಯಮಿಗಳ ಅಭಿಪ್ರಾಯ..

ಇನ್ಫೋಸಿಸ್ ನಾರಾಯಣ ಮೂರ್ತಿ ಮತ್ತು ಓಲಾ ಭವಿಶ್ ಅಗರ್ವಾಲ್ ಅವರನ್ನು ಹೊರತುಪಡಿಸಿ, ಪ್ರಪಂಚದಾದ್ಯಂತದ ವ್ಯಾಪಾರ ಮತ್ತು ಕೈಗಾರಿಕೋದ್ಯಮಿಗಳು ಹೆಚ್ಚಿನ ಕೆಲಸದ ಸಮಯಕ್ಕಾಗಿ ಬೆಂಬಲಿಸುತ್ತಿದ್ದಾರೆ. ಚೆನ್ನಾಗಿ ತಿನ್ನಿ, ಬಲಿಷ್ಟವಾಗಿರಿ. ಅಲ್ಲದೆ, ದಿನಕ್ಕೆ 18 ಗಂಟೆ ಕೆಲಸ ಮಾಡಿ’ ಎಂದು ಬಾಂಬೆ ಶೇವಿಂಗ್ ಕಂಪನಿಯ ಸಿಇಒ ಶಾಂತನು ದೇಶಪಾಂಡೆ ಈ ಹಿಂದೆ ಲಿಂಕ್ ಡಿನ್ ನಲ್ಲಿ ಪೋಸ್ಟ್ ಮಾಡಿದ್ದು ಚರ್ಚೆಯ ವಿಷಯವಾಗಿತ್ತು. ಅಲಿಬಾಬಾ ಸಂಸ್ಥಾಪಕ ಮತ್ತು ಚೀನಾದ ಪ್ರಸಿದ್ಧ ಉದ್ಯಮಿ ಜಾಕ್ ಮಾ ಅವರು 996 ಎಂಬ ನಿಯಮವನ್ನು ಪ್ರಸ್ತಾಪಿಸಿದರು. ಅದರ ಪ್ರಕಾರ... ನೌಕರರು ವಾರದ ಬೆಳಗ್ಗೆ 9 ರಿಂದ ರಾತ್ರಿ 9 ರವರೆಗೆ 6 ದಿನ ಕೆಲಸ ಮಾಡಬೇಕು. ಟ್ವಿಟರ್ ಅನ್ನು ಖರೀದಿಸುವ ಸಮಯದಲ್ಲಿ, ಎಲೋನ್ ಮಸ್ಕ್ ಅವರು ಕಂಪನಿ ಉಳಿಯಲು ವಾರಕ್ಕೆ 100 ಗಂಟೆಗಳ ಕಾಲ ಕೆಲಸ ಮಾಡುವಂತೆ ಉದ್ಯೋಗಿಗಳಿಗೆ ಇಮೇಲ್ ಮಾಡಿದ್ದರು ಎಂಬುದರ ಕುರಿತು ಚರ್ಚೆ ನಡೆದಿತ್ತು.

ಸುದೀರ್ಘ ಕೆಲಸದ ಸಮಯದಿಂದ ಆರೋಗ್ಯ ಸಮಸ್ಯೆಗಳು

ವಾರಕ್ಕೆ 70 ಗಂಟೆ ಕೆಲಸ ಮಾಡಬೇಕು ಎಂಬ ಇವರ ಹೇಳಿಕೆಯಲ್ಲಿ ಅಭಿವೃದ್ಧಿ ಮತ್ತು ವ್ಯಾಪಾರದ ಲಾಭ ಮಾತ್ರ ಕಂಡುಬರುತ್ತಿದ್ದು, ಕಾರ್ಮಿಕರು ಮತ್ತು ನೌಕರರ ಆರೋಗ್ಯದ ಮೇಲೆ ಬೀರುವ ಪರಿಣಾಮವನ್ನು ಗಣನೆಗೆ ತೆಗೆದುಕೊಂಡಿಲ್ಲ ಎನ್ನುತ್ತಾರೆ ಆರೋಗ್ಯ ತಜ್ಞರು. 70 ಗಂಟೆಗಳ ಕೆಲಸವು ಅನೇಕ ಗಂಭೀರ ಕಾಯಿಲೆಗಳಿಗೆ ಕಾರಣವಾಗಬಹುದು ಮತ್ತು ಅಕಾಲಿಕ ಮರಣದ ಅಪಾಯವನ್ನು ಹೆಚ್ಚಿಸುತ್ತದೆ ಎಂದು ನರವಿಜ್ಞಾನಿಗಳು ಎಚ್ಚರಿಸಿದ್ದಾರೆ. ಹೈದರಾಬಾದಿನ ಅಪೋಲೋ ಆಸ್ಪತ್ರೆಗಳ ಹಿರಿಯ ನರವಿಜ್ಞಾನಿ ಡಾ. ಸುಧೀರ್ ಕುಮಾರ್ ಅವರು ದೀರ್ಘಾವಧಿಯ ಕೆಲಸದ ಅವಧಿಗಳ ವಿರುದ್ಧ ಎಚ್ಚರಿಕೆ ನೀಡಿದ್ದಾರೆ. ಡಾ. ಕುಮಾರ್ ಅವರು, ದೀರ್ಘ ಕೆಲಸದ ಅವಧಿ ವಾರದಲ್ಲಿ 55 ಗಂಟೆಗಳನ್ನು ಮೀರಿದರೆ, ಪಾರ್ಶ್ವವಾಯು, ರಕ್ತದ ಕೊರತೆಯ ಹೃದ್ರೋಗ ಮತ್ತು ಅಕಾಲಿಕ ಮರಣದ ಅಪಾಯಗಳನ್ನು ಹೆಚ್ಚಿಸುವ ಅಧ್ಯಯನಗಳನ್ನು ಹೈಲೈಟ್ ಮಾಡಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆ (WHO)ಯ ಅಂಕಿಅಂಶಗಳ ಪ್ರಕಾರ, ವಾರಕ್ಕೆ 55 ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡುವುದರಿಂದ ಪ್ರತಿ ವರ್ಷ ಜಗತ್ತಿನಲ್ಲಿ 8,00,000 ಜನರು ಸಾವನ್ನಪ್ಪುತ್ತಾರೆ. ಅವರಲ್ಲಿ ಮುಕ್ಕಾಲು ಪಾಲು ಮಂದಿ ಮಧ್ಯವಯಸ್ಕ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರು.

ಗಂಭೀರ ಆರೋಗ್ಯ ಸಮಸ್ಯೆಗಳು

ಆರು ದಿನಗಳ ಕೆಲಸದ ವಾರದಲ್ಲಿ,



ವಾರಕ್ಕೆ 70 ಗಂಟೆಗಳ ಕೆಲಸ ಎಂದರೆ ದಿನಕ್ಕೆ ಸರಿಸುಮಾರು 12 ಗಂಟೆಗಳ ಕೆಲಸ. ಪ್ರಸ್ತುತ, ನಮ್ಮ ಸರ್ಕಾರಿ ಕಚೇರಿಗಳು 6 ದಿನಗಳು 8 ಗಂಟೆಗಳ ಕೆಲಸದೊಂದಿಗೆ, ವಾರದಲ್ಲಿ 48 ಗಂಟೆಗಳ ಕಾಲ ಕೆಲಸ ಮಾಡುತ್ತಿವೆ. ಅದೇ ಖಾಸಗಿ ಕಚೇರಿಗಳಲ್ಲಿ ದಿನಕ್ಕೆ ಹತ್ತು ಗಂಟೆ ಕೆಲಸದೊಂದಿಗೆ ವಾರಕ್ಕೆ 60 ಗಂಟೆ ಕೆಲಸ ಮಾಡುವ ಮಾತು ಕೇಳಿಬರುತ್ತಿದೆ. ವಾರದಲ್ಲಿ 55 ಅಥವಾ ಅದಕ್ಕಿಂತ ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡುವುದರಿಂದ ಹೃದಯಾಘಾತದ ಅಪಾಯವು ಶೇಕಡಾ 35 ರಷ್ಟು ಹೆಚ್ಚಾಗುತ್ತದೆ ಎಂದು ಆರೋಗ್ಯ ತಜ್ಞರು ಎಚ್ಚರಿಸಿದ್ದಾರೆ. 35-40 ಗಂಟೆಗಳ ಕಾಲ ಕೆಲಸ ಮಾಡುವವರಿಗೆ ಹೋಲಿಸಿದರೆ, ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡುವವರಲ್ಲಿ ಹೃದ್ರೋಗದಿಂದ ಸಾವಿನ ಅಪಾಯವು ಶೇಕಡಾ 17 ರಷ್ಟು ಹೆಚ್ಚಾಗಿದೆ. ದೀರ್ಘಾವಧಿಯ ಕೆಲಸದ ಸಮಯವು ಸ್ಥೂಲಕಾಯತೆ, ಪ್ರಿಡಯಾಬಿಟಿಸ್ ಮತ್ತು ಟೈಪ್ 2 ಮಧುಮೇಹದ ಅಪಾಯವನ್ನು ಹೆಚ್ಚಿಸುತ್ತದೆ ಎಂದೂ ಹೇಳಲಾಗುತ್ತದೆ. ವಾರಕ್ಕೆ 69 ಅಥವಾ ಅದಕ್ಕಿಂತ ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡುವವರು ವಾರಕ್ಕೆ 40 ಗಂಟೆಗಳ ಕಾಲ ಕೆಲಸ ಮಾಡುವವರಿಗಿಂತ ಹೆಚ್ಚು ತೀವ್ರವಾದ ಖಿನ್ನತೆಯ ಲಕ್ಷಣಗಳನ್ನು ಹೊಂದಿರುವುದು ಕಂಡುಬಂದಿದೆ. ಅದೂ ಅಲ್ಲದೆ ಐಟಿ, ಟೇಬಲ್ ವರ್ಕ್ ನಂತಹ ಕೆಲಸ ಮಾಡುವವರು ಹತ್ತು ಗಂಟೆಗೂ ಹೆಚ್ಚು ಕಾಲ ಕುಳಿತುಕೊಂಡರೆ ಮೆದುಳಿಗೆ ರಕ್ತಸಂಚಾರ ಕಡಿಮೆಯಾಗುವುದು, ಏಕಾಗ್ರತೆ ಕಡಿಮೆಯಾಗುವುದು, ಕೆಲಸಗಳತ್ತ ಗಮನ ಹರಿಸಲಾಗದಿರುವುದು, ಆತಂಕ ಮತ್ತು ಹೆಚ್ಚಿದ ಒತ್ತಡದ ಮಟ್ಟಗಳು, ಖಿನ್ನತೆಗೆ ಒಳಗಾಗುವುದು ಕಂಡು ಬಂದಿದೆ.

ಮಹಿಳೆಯರ ಸ್ಥಿತಿ ಇನ್ನೂ ಕೆಟ್ಟದಾಗಿದೆ

ಪುರುಷರಿಗೆ ಹೋಲಿಸಿದರೆ ಮಹಿಳೆಯರು ತಮ್ಮ ಉದ್ಯೋಗದಲ್ಲಿ ಹೆಚ್ಚು ಸಮಯ ಕೆಲಸ ಮಾಡುವುದು ಕಷ್ಟ. ಮನೆಕೆಲಸದಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಸಮಯವನ್ನು ಕಳೆಯುತ್ತಾರೆ. ಪರಿಣಾಮವಾಗಿ, ಪುರುಷರಿಗೆ ಹೋಲಿಸಿದರೆ ಅವರ ವಿಶ್ರಾಂತಿ ಸಮಯವು ಕಡಿಮೆಯಾಗಿದೆ. ಇದರಿಂದ ಮಹಿಳಾ ಕಾರ್ಮಿಕರ ಮೇಲೆ ಸುದೀರ್ಘ ದುಡಿಮೆಯಿಂದ ಒತ್ತಡ ಹೆಚ್ಚಾಗುತ್ತಿದೆ.

ಇನ್ನೊಂದೆಡೆ ನಿರುದ್ಯೋಗ ಶೇಕಡಾವಾರು ಪ್ರಮಾಣವೂ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಭಾರತದಲ್ಲಿ ಶೇಕಡಾ ಹತ್ತರಷ್ಟು ಆತ್ಮಹತ್ಯೆಗಳು ನಿರುದ್ಯೋಗ ಮತ್ತು ಆರ್ಥಿಕ ಸಮಸ್ಯೆಗಳಿಂದಾಗಿ ಸಂಭವಿಸುತ್ತವೆ. ಇದೆಲ್ಲದರ ನಡುವೆಯೂ ವ್ಯಾಪಾರ, ಕೈಗಾರಿಕೋದ್ಯಮಿಗಳು ಕೆಲಸದ ಸಮಯವನ್ನು ಹೆಚ್ಚಿಸಬೇಕು ಎಂದು ಹೇಳುತ್ತಿದ್ದಾರೆ. ಇದು ತೀವ್ರ ಖಂಡನೀಯವಾಗಿದೆ.

ಇಂದಿಗೂ ಎಲ್ಲರ ಮನಗಳಲ್ಲಿ ಚಿರಸ್ಥಾಯಿಯಾಗಿರುವ ನಿರಂಜನರ ‘ಚಿರಸ್ಮರಣೆ’...... ಪುಟ 16 ರಿಂದ

ಜಮೀನ್ದಾರಿ ಪದ್ಧತಿ ಅಳಿಯಲಿ! ಸಾಮ್ರಾಜ್ಯಶಾಹಿ ನಾಶವಾಗಲಿ!.” ಈ ಘೋಷಣೆಗಳೇ ಚಳುವಳಿಯ ಪ್ರಧಾನ ಆಶಯಗಳಾಗಿದ್ದವು. ಇಲ್ಲಿ ಇವರು ‘ಭೂಮಿನೂ ಬೇಕು ಮತ್ತು ಸ್ವಾತಂತ್ರ್ಯನೂ ಬೇಕು’ ಎಂಬ ಎರಡು ಪ್ರಧಾನ ಬೇಡಿಕೆಗಳನ್ನು ಒಮ್ಮೆಲೆ ಎತ್ತಿದ್ದರು. ಇದು ಒಂದು ಕಡೆ ಬ್ರಿಟೀಷ್ ಸಾಮ್ರಾಜ್ಯಶಾಹಿಗಳಿಗೆ ಮತ್ತು ಸ್ಥಳೀಯ ಭೂಮಾಲಿಕರ ಕೆಂಗಣ್ಣಿಗೆ ಗುರಿಯಾಯಿತು.


ಈ ಚಳುವಳಿಯನ್ನು ಹತ್ತಿಕ್ಕುವ ಉದ್ದೇಶದಿಂದ ಆಳುವವರ ಪಿತೂರಿಯ ಭಾಗವಾಗಿ ಪೊಲೀಸ್ ಪೇದೆ ಆಕಸ್ಮಿಕವಾಗಿ ತೇಜಸ್ವಿನಿ ನದಿಯ ಪಾಲಾಗುತ್ತಾನೆ. ಇದನ್ನೇ ನೆಪವಾಗಿಟ್ಟುಕೊಂಡು ಪೊಲೀಸರು ಕೈಯ್ಯೂರಿನ ರೈತರು, ಮಹಿಳೆಯರು, ಮಕ್ಕಳು, ವೃದ್ಧರ ಮೇಲೆ ನಡೆಸುವ ಪೈಶಾಚಿಕ ದಾಳಿ, ಇಂದು ಚಳುವಳಿಗಳ ಮೇಲೆ ಆಳುವ ಪ್ರಭುತ್ವ ನಡೆಸುವ ದಾಳಿಯನ್ನು ನೆನಪಿಸುತ್ತದೆ. ಪ್ರಭುತ್ವ ತನ್ನ ಎದುರು ಯಾರೇ ಧನಿ ಎತ್ತಿದರೂ ಅದನ್ನು ಸಹಿಸುವುದಿಲ್ಲ. ಇತ್ತೀಚಿಗೆ ದೆಹಲಿಯಲ್ಲಿ ನಡೆದ ರೈತ ಹೋರಾಟದ ಮೇಲೆ ಪ್ರಭುತ್ವ ನಡೆಸಿದ ದಾಳಿಯನ್ನು ನೆನೆಯಿರಿ. ಕಯ್ಯೂರಿನ ರೈತರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೂಡಿ 60 ಜನರನ್ನು ಬಂಧಿಸಲಾಗುತ್ತದೆ. ಆನಂತರ ನಡೆಯುವ ನ್ಯಾಯಾಲಯವೆಂಬ ವಿಚಾರಣಾ ನಾಟಕ, ಜೈಲುಗಳ ಸ್ಥಿತಿ ಇವುಗಳು ಕಾದಂಬರಿಯಲ್ಲಿ ಮನಮುಟ್ಟುವಂತೆ ಚಿತ್ರಿಸಲ್ಪಟ್ಟಿವೆ.

ಅಂತಿಮವಾಗಿ ಅಪ್ಪು, ಚಿರುಕಂಡ, ಕುಂಞಂಬು, ಅಬೂಬಕರ್ ಇವರುಗಳಿಗೆ ಮರಣದಂಡನೆ ಎಂದು ನ್ಯಾಯಾಲಯ ತೀರ್ಪಿತ್ತ ನಂತರ ಇವರುಗಳ ಅಂತಿಮ ಭೇಟಿಗೆಂದು ತಂದೆ, ತಾಯಿ, ಹೆಂಡತಿ, ಮಕ್ಕಳು ಮತ್ತು ಮಾಸ್ತರು ಇವರೊಂದಿಗೆ ಜೈಲಿನಲ್ಲಿ ನಡೆಸುವ ಮಾತುಕತೆ ಎಂತಹ ಕಲ್ಲು ಹೃದಯವನ್ನೂ ಕರಗಿಸಿ ಕಣ್ಣಲ್ಲಿ ನೀರು ಹನಿ ತೊಟ್ಟಿಕ್ಕುವಂತೆ ಮಾಡುತ್ತದೆ. ಈ ನಾಲ್ವರು ಹೋರಾಟಗಾರರನ್ನು ನೇಣಿಗೇರಿಸುವ ಮುನ್ನ ಜೈಲಿನ ಅಧಿಕಾರಿ ‘ನಿಮ್ಮ ಕೊನೆಯ ಆಸೆ ಏನು? ನಡೆಸಿಕೊಡುತ್ತೇವೆ’ ಎಂದು ಕೇಳಿದಾಗ “ಸಾಮ್ರಾಜ್ಯಶಾಹಿ ನಾಶವಾಗೋದನ್ನ ನೋಡಿ ಸಾಯಬೇಕು ಅಂತ ನಮ್ಮ ಆಸೆ, ನಡೆಸಿಕೊಡ್ತಿರಾ” ಎಂಬ ಈ ಮಾತು ಅವರಲ್ಲಿದ್ದ ಹೋರಾಟದ ಕಿಚ್ಚು ಮತ್ತು ಸೈದ್ಧಾಂತಿಕ ಸ್ಪಷ್ಟತೆಯನ್ನು ತೋರಿಸುತ್ತದೆ.

ನೇಣಿನ ಕುಣಿಕೆಗೆ ಕೊರಳೊಡ್ಡಿ, ನಗುನಗುತ್ತಾ ತಮ್ಮ ಪ್ರಾಣವನ್ನು ಅರ್ಪಿಸಿದ ಈ ಹುತಾತ್ಮರು ಕೊಟ್ಟ ಕೊನೆಯ ಘೋಷಣೆ “ಇಂಕ್ವಿಲಾಬ್ ಜಿಂದಾಬಾದ್, ಸಾಮ್ರಾಜ್ಯಶಾಹಿ ನಾಶವಾಗಲಿ, ಕ್ರಾಂತಿಗೆ ಜಯವಾಗಲಿ” ಈ ಆಶಯದ ಈಡೇರಿಕೆಗಾಗಿ ಈಗಲೂ ಕೋಟ್ಯಾಂತರ ಮನಸುಗಳು ತುಡಿಯುತ್ತಿವೆ. ಅದಕ್ಕಾಗಿ ದುಡಿಯುತ್ತಿವೆ. ನಿರಂಜನರ ಜನ್ಮಶತಮಾನೋತ್ಸವವನ್ನು ಆಚರಿಸುವ ಈ ಸಂದರ್ಭದಲ್ಲಿ ಅವರ ಕಥೆ, ಕಾದಂಬರಿಗಳ ಮೂಲಕ ಮೂಡಿ ಬಂದ ಪಾತ್ರಗಳ ಕನಸುಗಳನ್ನು ನನಸು ಮಾಡುವ, ಶೋಷಣಾ ರಹಿತ ಸಮಾಜದ ನಿರ್ಮಾಣದ ಕಡೆಗೆ ಎಲ್ಲರೂ ಒಟ್ಟಾಗಿ ಹೆಜ್ಜೆ ಹಾಕಬೇಕಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE July 22-28, 2024 Price: Rs. 10/- Date of Publication: 19 July 2024 RNI No. KARKAN /2006/17926 Posted on 22-07-2024
Posted at BG PSO, BG - 560026 **Posted at Periodical Rate -** Rs. 2


ಇಂದಿಗೂ ಎಲ್ಲರ ಮನಗಳಲ್ಲಿ ಚಿರಸ್ಥಾಯಿಯಾಗಿರುವ ನಿರಂಜನರ 'ಚಿರಸ್ಮರಣೆ'



ಎಚ್.ಆರ್. ನವೀನ್ ಕುಮಾರ್, ಹಾಸನ

ಕೇರಳದ ಕಾಸರಗೋಡು ಜಿಲ್ಲೆಯ ಕಯ್ಯೂರಿನಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ನಡೆದ ಮಹತ್ತರ ರೈತ ಚಳುವಳಿಯ ಕುರಿತು ನಿರಂಜನರು ರಚಿಸಿರುವ ಕಾದಂಬರಿಯೇ 'ಚಿರಸ್ಮರಣೆ'. ಭೂರಹಿತರು, ಗೇಣಿದಾರರು ತಮ್ಮ ಶೋಷಣೆಗೆ ಕಾರಣವಾದ ಭೂಮಾಲಿಕರ ವಿರುದ್ಧ ಮತ್ತು ಈ ಭೂಮಾಲಿಕರಿಗೆ ಬೆಂಬಲವಾಗಿ ನಿಂತಿದ್ದ ದೇಶದ ಶೋಷಣೆಗೆ ಕಾರಣವಾದ ಬ್ರಿಟೀಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಏಕಕಾಲದಲ್ಲಿ ಒಂದು ಹಳ್ಳಿಯಲ್ಲಿ ರೈತ ಸಂಘವನ್ನು ಕಟ್ಟುವ ಮೂಲಕ ರಾಜ್ಯದ ಮತ್ತು ದೇಶದ ಗಮನವನ್ನು ಸೆಳೆದ, ನಾಲ್ವರು ಹುತಾತ್ಮರಾದ ಕಯ್ಯೂರು ರೈತರ ವೀರಗಾಥೆಯನ್ನು ನಿರಂಜನರು ತಮ್ಮ ಸೃಜನಶೀಲ ಬರವಣಿಗೆಯಲ್ಲಿ ಹಿಡಿದಿಟ್ಟು ಅದಕ್ಕೊಂದು ಕಥನ ರೂಪವನ್ನು ನೀಡಿದ್ದಾರೆ. ಈ ಘಟನೆ ಇತಿಹಾಸವಾದರೂ ಅದು ಎಲ್ಲರ ಮನಗಳಲ್ಲಿ ಮೊಳಕೆಯೊಡೆದು ಇಂದಿಗೂ ಹೆಮ್ಮರವಾಗಿ ಬೆಳೆಯುವಂತೆ ಮಾಡುವಲ್ಲಿ ಈ ಕೃತಿ ಮಹತ್ವದ ಪಾತ್ರವನ್ನು ವಹಿಸಿದೆ.

'ಕೋಶ ಓದು-ದೇಶ ನೋಡು' ಬಳಗದಿಂದ ಪ್ರತೀವರ್ಷ ಲೇಖಕರೋರ್ವರ ಕೃತಿಗಳನ್ನು ಆಯ್ಕೆ ಮಾಡಿಕೊಂಡು, ಒಂದು ನಿರ್ಧಿಷ್ಟ ಸಮಯದಲ್ಲಿ ಎಲ್ಲರೂ ಆಂದೋಲನದ ರೂಪದಲ್ಲಿ ಓದುವುದು, ನಂತರ ಓದಿದ ಕೃತಿಗೆ ಸಂಬಂಧಿಸಿದ ಸ್ಥಳಕ್ಕೆ ಭೇಟಿಕೊಟ್ಟು, ಅದನ್ನು ಮತ್ತಷ್ಟು ಮನನ ಮಾಡಿಕೊಳ್ಳುವುದು, ಅಂತಿಮವಾಗಿ ಓದು ಅಭಿಯಾನದ ಸಮಾರೋಪದಲ್ಲಿ ಓದಿದ ಕೃತಿಗಳ ಪ್ರಸ್ತುತತೆ ಮತ್ತು ಅದರ ವಿವಿಧ ಆಯಾಮಗಳ ಕುರಿತು ಚರ್ಚಿಸಿ, ನಮ್ಮ ಅರಿವನ್ನು ಹೆಚ್ಚಿಸಿಕೊಳ್ಳುವ ಮೂಲಕ ಸ್ಪಷ್ಟತೆ ಪಡೆದುಕೊಳ್ಳುವುದು ಅರಿವಿನ ಪಯಣದ ಉದ್ದೇಶ. ಈ ಪಯಣ 2017 ರಲ್ಲಿ ಆರಂಭವಾದದ್ದೇ ನಿರಂಜನರ 'ಚಿರಸ್ಮರಣೆ ಓದೋಣ ಕಯ್ಯೂರಿಗೆ ಹೋಗೋಣ' ಎಂಬುದರ ಮೂಲಕ. ಅಲ್ಲಿಂದ ಇಲ್ಲಿಯವರೆಗೆ ಕುಶವಂತ್‌ಸಿಂಗ್‌ರ 'ಟ್ರೈನ್ ಟು ಪಾಕಿಸ್ತಾನ್', ಸದತ್ ಹಸನ್ ಮಾಂಟೋನ 'ವಿಭಜನೆಯ ಕಥೆಗಳು', ಶಿವರಾಮ ಕಾರಂತರ 'ಚೋಮನದುಡಿ', ಗಿರೀಶ್ ಕಾರ್ನಾಡರ ನಾಟಕಗಳು, ತೇಜಸ್ವಿಯವರ 'ಚಿದಂಬರ ರಹಸ್ಯ' 'ಕರ್ವಾಲೋ' ಕೃತಿಗಳನ್ನು ಅಭಿಯಾನದ ಭಾಗವಾಗಿ ಓದಲಾಗಿದೆ. 2024 ನಿರಂಜನರ (ಕುಳಕುಂದ ಶಿವರಾಯ) ಜನ್ಮಶತಮಾನೋತ್ಸವ ಆಗಿರುವ ಕಾರಣ ಮತ್ತೆ ನಿರಂಜನರ ಕೃತಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಹೊಸತಲೆಮಾರಿನ ಅನೇಕರು ಜೊತೆಯಾಗಿದ್ದಾರೆ. ಇದರಲ್ಲಿ 'ಚಿರಸ್ಮರಣೆ', ನಿರಂಜನರು ಅನುವಾದಿಸಿದ ಮಕ್ಸೀಂ ಗೋರ್ಕಿಯವರ 'ತಾಯಿ', ನಿರಂಜನರ ಆಯ್ದ ಸಣ್ಣಕಥೆಗಳು, ಮೃತ್ಯಂಜಯ ಹೀಗೆ...



ಈ ಅಭಿಯಾನದ ಭಾಗವಾಗಿ ಮತ್ತೆ ಚಿರಸ್ಮರಣೆಯನ್ನು ಕೈಗೆತ್ತಿಕೊಂಡಾಗ ನನ್ನ ಪ್ರೌಢಶಾಲಾ ದಿನಗಳಲ್ಲಿ ನಾನು ಮೊದಲು ಓದಿದ 'ಚಿರಸ್ಮರಣೆ'ಯನ್ನೇ ಮತ್ತೆ ಮತ್ತೆ ನೆನೆಪಿಸುವಂತಿತ್ತು. ಮಾತ್ರವಲ್ಲ, ಎಲ್ಲಿಯೂ ಒಮ್ಮೆ ಓದಿದ್ದೇನಲ್ಲಾ ಎನ್ನುವ ಬೇಸರ ಬರದೆ, ಮೊದಲಿಂದ ಕೊನೆಯವರೆಗೂ ಇಡೀ ಕಯ್ಯೂರಿನ ರೈತ ಹೋರಾಟಗಾರರ ನಡುವೆ ನನ್ನನ್ನು ಕೈಹಿಡಿದು ನಡೆಸಿದ ಅನುಭವವಾಯಿತು. 1943 ರ ಸುತ್ತಮುತ್ತ ನಡೆದ ಘಟನೆಯಾದರೂ ಈ ಕೃತಿ ಇಂದಿಗೂ ಓದಿದ ಎಲ್ಲರನ್ನೂ ತಲ್ಲಣಗೊಳಿಸುತ್ತಿರುವ, ಸಮಾಜದ ಕುರಿತು, ಶೋಷಣೆಯ ಕುರಿತು ಚಿಂತನೆಗೆ ಹಚ್ಚುತ್ತಿರಲು ಪ್ರಮುಖ ಕಾರಣವೇನೆಂದರೆ, ಅಂದು ಕಯ್ಯೂರಿನ ರೈತರು ತಮ್ಮ ರೈತ ಸಂಘದ ಮೂಲಕ ಎತ್ತಿದ ಪ್ರಶ್ನೆಗಳು ಇಂದಿಗೂ ನಮ್ಮೆಲ್ಲರ ನಡುವೆ ಜೀವಂತವಾಗಿರುವುದಕ್ಕಾಗಿ. ಅಂದು ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಹಳ್ಳಿಗಳಲ್ಲಿ ನಂಬೂದರಿ, ನಂಬಿಯಾರ್ ಅಂತಹ ಪಾಳೆಗಾರಿ ಜಮೀನ್ದಾರರುಗಳು ಇದ್ದು ಜನರನ್ನು ಶೋಷಣೆ ಮಾಡುತ್ತಿದ್ದರು. ಆದರೆ ಈಗ ಒಂದು ಕಂಪನಿಯ ಜಾಗದಲ್ಲಿ ನೂರಾರು ಕಾರ್ಪೋರೇಟ್ ಕಂಪನಿಗಳು, ದೇಶೀಯ ಆಳುವವರ್ಗ ದುಡಿಯುವ ಜನರನ್ನು ಕಿತ್ತು ತಿನ್ನುತ್ತಿವೆ. ಹಾಗಾಗಿ ಈ ಕೃತಿ ಎಲ್ಲರಿಗೂ ಹೆಚ್ಚು ಆಪ್ತವಾಗಿ ನಮ್ಮದೇ ಬದುಕಿನ ಬವಣೆಗಳನ್ನು ಕಯ್ಯೂರು ರೈತರ ಮೂಲಕ ನೋಡಲಾಗುತ್ತಿದೆ ಎಂದು ಬಾಸವಾಗುತ್ತದೆ.

ಪಾಳೆಗಾರಿ ವ್ಯವಸ್ಥೆಯ ಅಡಿಯಲ್ಲಿದ್ದ ಕಯ್ಯೂರು ಎಂಬ ಒಂದು ಕುಗ್ರಾಮದಲ್ಲಿ ಅಲ್ಲಿನ ಶಾಲೆಗೆ ಕಲಿಸಲು ಬರುವ ಮಾಸ್ತರು, ಮಕ್ಕಳಿಗೆ ಅಕ್ಷರಾಭ್ಯಾಸದ ಜೊತೆಗೆ ಅವರ ಬದುಕು ಮತ್ತು ಸಮಾಜದ ಅಭ್ಯಾಸವನ್ನೂ ನಡೆಸಿ ರೈತರ ಇಂದಿನ ಸ್ಥಿತಿಗೆ ಕಾರಣಗಳೇನು, ಮತ್ತು ಈ ಎಲ್ಲಾ ಸಂಕಷ್ಟಕ್ಕೆ ಯಾರು ಹೊಣೆ, ಈ ಸಂಕಷ್ಟಗಳ ಸಂಕೋಲೆಗಳನ್ನು ಕಳಚಲು ನಮಗಿರುವ ದಾರಿ ಯಾವುದು, ಎಂಬುದನ್ನು ಅರ್ಥ ಮಾಡಿಸಲು ಪ್ರಯತ್ನಿಸುತ್ತಾರೆ. ಇದು ಕೇವಲ ತಿಳುವಳಿಕೆ ಪಡೆಯುವ ಹಂತಕ್ಕೆ ಮಾತ್ರ ನಿಲ್ಲದೆ, ಅದನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲು ಊರಿನಲ್ಲಿ ರಾತ್ರಿ ಶಾಲೆಯನ್ನು ಆರಂಭಿಸಿ ಎಲ್ಲರಿಗೂ ಜಾಗೃತಿ ಮೂಡಿಸಿ, ರೈತ ಸಂಘವನ್ನು ಕಟ್ಟಿ, ಆ ಮೂಲಕ ತಮ್ಮ ಹಕ್ಕುಗಳನ್ನು ಪಡೆಯುವ ಪಯಣದಲ್ಲಿ ಬರುವ ಎಲ್ಲ ಕಷ್ಟ, ನಷ್ಟ, ಸುಖ-ದುಃಖ, ಸಂಬಂಧಗಳು, ಅದರ ಜೊತೆಗೆ ಹೆಣೆದುಕೊಂಡ ಭಾವನೆಗಳು ಇವೆಲ್ಲವನ್ನು ಅಚ್ಚುಕಟ್ಟಾಗಿ ಪೋಣಿಸಿ ನಿರಂಜನರು 'ಚಿರಸ್ಮರಣೆ'ಯನ್ನಾಗಿಸಿ ನಮಗೆ ಬಿಟ್ಟುಹೋಗಿದ್ದಾರೆ.

ಮಾಸ್ತರರ ಮಾರ್ಗದರ್ಶನದಲ್ಲಿ ಅಪ್ಪು, ಚಿರುಕಂಡರ ಮೂಲಕ ಆರಂಭವಾದ ಈ ಐತಿಹಾಸಿಕ ಕಥನ ನಮ್ಮನ್ನು ಸಂಪೂರ್ಣ ಹಿಡಿದಿಡುತ್ತದೆ. ಇಡೀ ಕಾದಂಬರಿ ಕಯ್ಯೂರಿನ ವಾಸ್ತವ ಸ್ಥಿತಿ, ಆಳುವ ವರ್ಗದ ಆಲೋಚನೆ, ರೈತ ಚಳುವಳಿ, ಅದಕ್ಕೆದುರಾಗಿ ಜಮೀನ್ದಾರರ ಕುತಂತ್ರ, ಇವೆಲ್ಲವಕ್ಕೂ ಒಂದು ಸೈದ್ಧಾಂತಿಕ ತಳಹದಿಯನ್ನು ರೂಪಿಸಿಕೊಳ್ಳುತ್ತಾ ಮುಂದುವರೆಯುವ ಕೆಂಬಾವುಟದ ಚಳುವಳಿ ಓದುಗರ ಎದೆಯಲ್ಲಿ ಕ್ರಾಂತಿಯ ಕಿಡಿಯನ್ನು ಹೊತ್ತಿಸುತ್ತದೆ. ನಿರಂಜನರ ಬರಹದ ಶಕ್ತಿ ಅಡಗಿರುವುದು ಇಲ್ಲಿಯೇ. ಅವರು ಎಲ್ಲವನ್ನು ಹೇಳುತ್ತಾ, ಇಡೀ ಸಮಾಜಕ್ಕೆ ಅಂಟಿರುವ ಅನಿಷ್ಟಗಳ ಬಗ್ಗೆಯೂ ಕಾದಂಬರಿಯ ಪಾತ್ರಗಳ ಮೂಲಕ ಮಾತನಾಡಿಸುತ್ತಾರೆ. ಅವುಗಳಲ್ಲಿ ಕೆಲವನ್ನು ನೋಡಿದರೆ ನಮಗೆ ಸ್ಪಷ್ಟವಾಗುತ್ತದೆ.

ಮಾಸ್ತರರು ಅಪ್ಪು ಮತ್ತು ಚಿರುಕಂಡರಿಗೆ ಪಂಡಿತರನ್ನು ಪರಿಚಯಿಸುವಾಗ "ಪಂಡಿತರು ಅಂದರೆ, ತಿಳಿದೋರು ಅಂತ ಅಲ್ವಾ? ಔಷಧಿ ಕೊಡೋರು ಅಂದರೂ ತಪ್ಪೇನೂ ಅಲ್ಲ. ಆದರೆ ಇವರು ಔಷಧಿ ಕೊಡೋದು ಮನುಷ್ಯನ ಕಾಯಿಲೆಗಲ್ಲ – ಸಮಾಜದ ಕಾಯಿಲೆಗೆ! ಅರ್ಥವಾಯ್ತೇನ್ರೋ?" ಮುಂದುವರೆದು "ಹೂನಪ್ಪಾ. ಪತ್ರಿಕೆ ಪುಸ್ತಕ ಎರಡೂ ಓದಬೇಕು. ಓದಿದಷ್ಟೂ ಜ್ಞಾನ ಹೆಚ್ಚಾಗುತ್ತದೆ; ಓದ್ತಾ ಓದ್ತಾ ವಿಚಾರಮಾಡ್ಬೇಕು. ಇದು ಸರಿಯೇ? ಅಂತ. ಸರಿಯಾಗಿದ್ದರೆ, ಯಾಕೆ ಸರಿ? ಅಥವಾ ತಪ್ಪೂಂತ ತೋರಿದರೆ ಯಾಕೆ ತಪ್ಪು? ಅನ್ನೋದನ್ನೆಲ್ಲಾ ಯೋಚಿಸ್ಬೇಕು." ಪಂಡಿತರ ಮಾತುಗಳು ಮುಂದುವರೆದವು. ಮಾತೆಲ್ಲಾ ಮುಗಿದ ಮೇಲೆ ಚಿರುಕಂಡನಿಗೆ ಸ್ಪಷ್ಟವಾದುದೊಂದೇ – "ಜನರು ಕಷ್ಟದಲ್ಲಿದ್ದಾರೆ. ಜನರಿಗೆ ಅನ್ಯಾಯವಾಗಿದೆ. ನಾವು ಗುಲಾಮರು. ಪರಕೀಯರು ನಮ್ಮನ್ನು ಆಳುತ್ತಿದ್ದಾರೆ. ನಾವು ಹೋರಾಡಿ ಗುಲಾಮಗಿರಿಯಿಂದ ಮುಕ್ತರಾಗಬೇಕು." "ದುಡಿಯುವ ಜನರೆಲ್ಲಾ ಒಂದಾದರೆ, ಸುಲಿಯುವ ಜನರೆಲ್ಲ ಸೋತು ಹೋಗ್ತಾರೆ. ನಮ್ಮನ್ನು ಬಿಗಿದಿರುವ ಬೇಡಿಗಳು ಪುಡಿಪುಡಿಯಾಗ್ತವೆ. ನಮ್ಮ ದೇಶದಲ್ಲಿ ಜನಕ್ರಾಂತಿ ಬೇರೆಯಲ್ಲ. ನಮ್ಮ ರೈತರೆಲ್ಲ ಎಚ್ಚರವಾಗ್ಬೇಕು, ಒಟ್ಟಾಗ್ಬೇಕು.... ಹಳ್ಳಿ ಹಳ್ಳಿಗಳಲ್ಲಿ ರೈತ ಸಂಘ ಸ್ಥಾಪಿಸಬೇಕು....."

ಮಾಸ್ತರು ಶಾಲೆಯಲ್ಲಿ ಮಕ್ಕಳಿಗೆ ಕಲಿಸುತ್ತಿದ್ದ ಪಾಠವಾದರೂ ಎಂತಹದ್ದು ಮತ್ತು ಒಬ್ಬ ಮಾಸ್ತರು ಮನಸು ಮಾಡಿದರೆ ಸಮಾಜದಲ್ಲಿ ಎಂತಹ ಬದಲಾವಣೆಯನ್ನು ಮಾಡಬಹುದು ಎಂಬುದಕ್ಕೆ ಇದೂ ಕೂಡ ಒಂದು ಉದಾಹರಣೆಯಾಗಿದೆ. ಒಂದು ಕಡೆ ಮಕ್ಕಳಿಗೆ ಹೀಗೆ ಹೇಳಿಕೊಡಲಾಗುತ್ತಿತ್ತು...

ನಮ್ಮನ್ನಾಳುವವರು ಯಾರು?
ಪರಕೀಯರು.
ಅವರ ಊರು ಎಲ್ಲಿದೆ?
ಅದು ಸಾವಿರ ಮೈಲಿಗಳ ಆಚೆ.
ಆಳುವವರಿಗೆ ಏನೆನ್ನುತ್ತಾರೆ?
ರಾಜರು.
ಆಳಲ್ಪಡುವವರಿಗೆ ಏನನ್ನುತ್ತಾರೆ?
ಪ್ರಜೆಗಳು.
ಈ ಪುಟದಲ್ಲೇ ಕೆಳಗೊಂದು ಸಾಲಿತ್ತು;
"ಪರಕೀಯ ರಾಜರ ಪ್ರಜೆಗಳು ಗುಲಾಮರು"

"ಒಬ್ಬನ ಹತ್ತಿರ 600 ಎಕರೆ ಭೂಮಿ ಇದೆ. ಅದನ್ನು 200 ಜನರಲ್ಲಿ ಸಮನಾಗಿ ಹಂಚಿದರೆ ಪ್ರತಿಯೊಬ್ಬನಿಗೂ ಸಿಗುವ ಹೊಲದ ವಿಸ್ತಾರವೆಷ್ಟು?" ಈ ರೀತಿಯ ಪಾಠಗಳು ಮಕ್ಕಳಲ್ಲಿ ಹೊಸ ಆಲೋಚನೆಗೆ ಎಡೆಮಾಡಿಕೊಟ್ಟವು.

ಕಯ್ಯೂರಿನಲ್ಲಿ ರೈತ ಸಂಘ ಸ್ಥಾಪಿಸಿದ ಮೇಲೆ ಎಲ್ಲರ ಆಲೋಚನೆಗಳು ಬದಲಾದವು. ಇದರಲ್ಲಿ ಮಾಸ್ತರು, ಅಪ್ಪು, ಚಿರುಕಂಡನ ನೇತೃತ್ವದಲ್ಲಿ ನಡೆಯುತ್ತಿದ್ದ ರಾತ್ರಿಶಾಲೆ ಕತ್ತಲೆಯಲ್ಲಿದ್ದ ಕಯ್ಯೂರಿಗೆ ಬೆಳಗಿನ ದೀವಟಿಗೆಯಾಗಿತ್ತು. ರೈತ ಸಂಘದ ಸಮ್ಮೇಳನವನ್ನು ಕಯ್ಯೂರಿನಲ್ಲೇ ಮಾಡಬೇಕೆಂದು ತೀರ್ಮಾನಿಸಿ, ಅದಕ್ಕಾಗಿ ತಯಾರಿ ಆರಂಭಿಸಿದ ಸದಸ್ಯರು ಪ್ರತಿ ದಿನ ಕೆಂಬಾವುಟದ ನೇತೃತ್ವದಲ್ಲಿ ಸ್ವಯಂಸೇವಕರ ಪಥಸಂಚಲನವನ್ನು ನಡೆಸುತ್ತಿದ್ದರು. ಎಂದಿನಂತೆ ನಂಬಿಯಾರರ ಮನೆಯ ಮುಂದಿನಿಂದಲೂ ಮೆರವಣಿಗೆ ಸಾಗಿತು. ಅಲ್ಲಿಯೂ ಘೋಷಣೆಗಳು ದಪ್ಪಗಿನ ಗೋಡೆಗಳನ್ನು ಹಾದು ಒಳಹೊಕ್ಕವು: "ಇಂಕ್ವಿಲಾಬ್ ಜಿಂದಾಬಾದ್! ಕ್ರಾಂತಿಗೆ ಜಯವಾಗಲಿ!

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**